# “ಸ್ಪರ್ಧಾರ್ಥಿಗಳ ಭರವಸೆಯ ಬೆಳಕು”

## K A S MAINS

## ಪತ್ರಿಕೆ 2 ವಿಭಾಗ 3

## ಭಾರತದ ಆರ್ಥಿಕತೆ ಯೋಜನೆ, ಗ್ರಾಮೀಣಾಭಿವೃದ್ಧಿ, ಮತ್ತು ದತ್ತಾಂಶ

**“TO AQUIRE KNOWLEDGE, ONE MUST STUDY,BUT TO AQUIRE WISDOM,ONE MUST OBSERVE”.**

GNANADHARE IAS ACADEMY



downloaded from: www.kpscvaani.com

# ಪೇಪರ್ 2: ಸಾಮಾನ್ಯ ಅಧ್ಯಯನ –1

## ವಿಭಾಗ –3 : ಭಾರತದ ಆರ್ಥಿಕತೆ ಯೋಜನೆ, ಗ್ರಾಮೀಣಾಭಿವೃದ್ಧಿ.

### ಭಾರತ: ಒಂದು ಅಭಿವೃದ್ಧಿಶೀಲ ದೇಶ :–

ಜಗತ್ತಿನ ಅಭಿವೃದ್ಧಿಶೀಲ ದೇಶಗಳನ್ನು ವೈವಿಧ್ಯಮಯವಾಗಿ ಬಣ್ಣಿಸಲಾಗಿದೆ. ಅವುಗಳನ್ನು ಪರ್ಯಾಯವಾಗಿ 'ಅಭಿವೃದ್ಧಿ ಶೀಲ ಆರ್ಥಿಕತೆಗಳು', 'ತೃತೀಯ ಜಗತ್ತಿನ ದೇಶಗಳು' 'ಉದಯಿಸುತ್ತಿರುವ ಆರ್ಥಿಕತೆಗಳು' ಅಥವಾ 'ಸದೃಢವಾಗಿ ಬೆಳೆಯುತ್ತಿರುವ ಆರ್ಥಿಕತೆಗಳು' ಮುಂತಾದ ಹೆಸರಿನಲ್ಲಿ ಕರೆಯಲಾಗುತ್ತದೆ. ವಿಶ್ವ ಬ್ಯಾಂಕು ಈ ಆರ್ಥಿಕತೆಗಳನ್ನು ಅಭಿವೃದ್ಧಿಶೀಲ ಆರ್ಥಿಕತೆಗಳು ಎಂದು ಕರೆಯಲು ಇಚ್ಛಿಸಿದೆ. ಈ ದೇಶಗಳು ಇಂದು ಅಭಿವೃದ್ಧಿಯ ಮುಂಚೂಣಿಯಲ್ಲಿದ್ದು ವಿಶ್ವ ಆರ್ಥಿಕತೆಯಲ್ಲಿ ತಮ್ಮದೇ ಆದ ನಿರ್ಣಾಯಕ ಪಾತ್ರವಹಿಸುತ್ತಿದೆ.

### ಅಭಿವೃದ್ಧಿಶೀಲ ದೇಶ ಅಥವಾ ಆರ್ಥಿಕತೆಯ ಅರ್ಥವಿವರಣೆ :–

ಅಭಿವೃದ್ಧಿಶೀಲ ಆರ್ಥಿಕತೆಗಳನ್ನು ಸಮಂಜಸವಾಗಿ ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ. ಏಕೆಂದರೆ, ಈ ಆರ್ಥಿಕತೆಗಳನ್ನು ಮುಂದುವರಿದ ಆರ್ಥಿಕತೆಗಳಿಂದ ಪ್ರತ್ಯೇಕಿಸಲು ಬೇಕಿರುವ ಯಾವುದೇ ಸಾರ್ವತ್ರಿಕ ಮಾನದಂಡ ಇಲ್ಲವಾಗಿದೆ. ಆದಾಗ್ಯೂ, ಅಭಿವೃದ್ಧಿಶೀಲ ಆರ್ಥಿಕತೆ ಎಂಬುದನ್ನು ಅಲ್ಪ ಅಭಿವೃದ್ಧಿ ಆರ್ಥಿಕತೆ ಮತ್ತು ಮುಂದುವರಿದ ಆರ್ಥಿಕತೆಯ ನಡುವಿರುವ ಒಂದು ಆರ್ಥಿಕತೆ ಎಂದು ಸುರಕ್ಷಿತವಾಗಿ ಹೇಳಬಹುದು.

ಅಭಿವೃದ್ಧಿಶೀಲ ಆರ್ಥಿಕತೆ ಎಂಬುದು ಇನ್ನೂ ಪೂರ್ಣಪ್ರಮಾಣದ ಬೆಳವಣಿಗೆಯನ್ನು ಸಾಧಿಸಿರದ ಆದರೆ ಇದೇ ವೇಳೆಯಲ್ಲಿ ಪೂರ್ತಿ ಹಿಂದುಳಿದ ಅಥವಾ ಕೇವಲ ಅಲ್ಪಾಭಿವೃದ್ಧಿ ಸಾಧಿಸಿರುವ ಆರ್ಥಿಕತೆಯಲ್ಲ, ಪ್ರತಿಯಾಗಿ, ಇದು ಬಂಡವಾಳ ಹೂಡಿಕೆ, ಶಿಕ್ಷಣ ಮತ್ತು ತರಬೇತಿ, ಉತ್ಪಾದಕತೆ ಮತ್ತು ಸಾಮಾನ್ಯ ಜೀವನಮಟ್ಟದಂತಹ ವಿಚಾರಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸುತ್ತಿರುವ ಒಂದು ದೇಶಗಳು ಕೃಷಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಅಪಾರವಾದ ಬಂಡವಾಳ ತೊಡಗಿಸುವ ಮೂಲಕ ಬಡತನ ನಿರುದ್ಯೋಗ ಮತ್ತು ಸರಕು ಮತ್ತು ಸೇವೆಗಳ ಕಡಿಮೆ ಉತ್ಪಾದನೆಯಂತಹ ಸಮಸ್ಯೆಗಳ ವಿರುದ್ಧ ಸೆಣಸಾಡುತ್ತಿವೆ.

ವಿಶ್ವಬ್ಯಾಂಕಿನ ವಿಶ್ವ ಅಭಿವೃದ್ಧಿ ವರದಿ, 2012ರ 2010ರಲ್ಲಿ 12,275 ಡಾಲರುಗಳಿಗಿಂತ ಕಡಿಮೆ ತಲಾ ರಾಷ್ಟ್ರೀಯ ಆದಾಯ ಹೊಂದಿದ್ದ ದೇಶಗಳು ಅಲ್ಪ ಮತ್ತು ಮಧ್ಯಮ ಆದಾಯದ ದೇಶಗಳು. ವಿಶ್ವಸಂಸ್ಥೆಯು ಈ ದೇಶಗಳನ್ನು ಅಭಿವೃದ್ಧಿ ಶೀಲ ಆರ್ಥಿಕತೆಗಳು ಎಂದು ಕರೆಯಲು ಇಚ್ಛಿಸಿದೆ. ಭಾರತ, ಚೈನಾ, ಬ್ರೆಜಿಲ್, ಶ್ರೀಲಂಕಾ, ಇಂಡೋನೇಷಿಯ, ಮಲೇಷಿಯ, ಬಲ್ಗೇರಿಯ, ಪೋಲೆಂಡ್, ಟರ್ಕಿ, ಇರಾನ್, ಇರಾಕ್, ದಕ್ಷಿಣ ಆಫ್ರಿಕ, ನೇಪಾಳ, ಪಾಕಿಸ್ತಾನ, ವಿಯೆಟ್ನಾಂ, ಕೀನ್ಯಾ, ಘಾನಾ ಮುಂತಾದ



downloaded from: www.kpscvaani.com

ದೇಶಗಳು ಈ ಗುಂಪಿನಲ್ಲಿವೆ. ವಾಸ್ತವವಾಗಿ ಭಾರತ, ಚೈನಾ ಮತ್ತು ಬ್ರೆಜಿಲ್ ದೇಶಗಳನ್ನು ಅಭಿವೃದ್ಧಿಶೀಲ ದೇಶಗಳ ನೇತಾರರು' ಎಂದು ಪರಿಗಣಿಸಲಾಗಿದೆ.

ಆದ್ದರಿಂದ, ಯಾವ ದೇಶವು ತನ್ನ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆಯ ಮೂಲಕ ತನ್ನ ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ನಿರಂತರ ಶ್ರಮಿಸುತ್ತಿರುತ್ತದೋ ಅದು ಅಭಿವೃದ್ಧಿಶೀಲ ದೇಶ ಎಂದು ಹೇಳಬಹುದು. ಈ ದೇಶಗಳು ಮುಂದುವರಿದ ದೇಶಗಳಷ್ಟು ಆರ್ಥಿಕವಾಗಿ ಬಲಿಷ್ಠವಲ್ಲದಿದ್ದರೂ ಸಹ ಇವುಗಳ ಅಭಿವೃದ್ಧಿ ಸಾಧನೆಯು ವಿಫುಲ ಅವಕಾಶಗಳನ್ನು ಹೊಂದಿದೆ ಮತ್ತು ಮುಂದೊಂದು ದಿನ ಬಲಿಷ್ಠ ಆರ್ಥಿಕತೆಗಳಾಗಿ ಹೊರಹೊಮ್ಮುವ ಎಲ್ಲಾ ಸಾಮರ್ಥ್ಯಗಳನ್ನು ಹೊಂದಿವೆ.

## ಅಭಿವೃದ್ಧಿಶೀಲ ದೇಶವಾಗಿ ಭಾರತ ಆರ್ಥಿಕತೆ ಲಕ್ಷಣಗಳು :

ಭಾರತವು ಜಗತ್ತಿನಲ್ಲೇ ಅತ್ಯಂತ ದೃಢ ಮತ್ತು ವೇಗವಾಗಿ ಬೆಳೆಯುತ್ತಿರುವ ಅಭಿವೃದ್ಧಿಶೀಲ ದೇಶಗಳಲ್ಲಿ ಒಂದಾಗಿದೆ. ಅದು ಕಳೆದ ಆರೂವರೆ ದಶಕಗಳ ಸ್ವಾತಂತ್ರ್ಯದ ಅಸ್ತಿತ್ವದಲ್ಲಿ ಅಪಾರವಾದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಿದೆ. ಭಾರತವು ಕೃಷಿ ಉತ್ಪಾದನೆ ವಿಷಯದಲ್ಲಿ ಸ್ವಾವಲಂಬನೆ ಸಾಧಿಸಿದೆ ಅಷ್ಟೇ ಅಲ್ಲದೆ ಜಗತ್ತಿನ ಅತ್ಯಧಿಕ ಕೈಗಾರೀಕೃತ ರಾಷ್ಟ್ರಗಳ ಪೈಕಿ ಹತ್ತನೇಯದಾಗಿದೆ. ಜನರ ಅನುಕೂಲಕ್ಕಾಗಿ ನಿಸರ್ಗವನ್ನು ಜಯಿಸಲು ಉಪಗ್ರಹಗಳನ್ನು ಉಡಾವಣೆ ಮಾಡಿದ ಆರನೇ ರಾಷ್ಟ್ರವು ಭಾರತವಾಗಿದೆ. ಕಳೆದ ಆರೂವರೆ ದಶಕಗಳ ತನ್ನ ಯೋಜನಾವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಧ್ಬುತ ಪ್ರಗತಿ ಸಾಧಿಸಿರುವ ಭಾರತ ಅಭಿವೃದ್ಧಿಶೀಲ ದೇಶಗಳ ಪೈಕಿ ಮುಂಚೂಣಿಯಲ್ಲಿದೆ. ಅದೇ ರೀತಿ ಇತರೆ ಅಭಿವೃದ್ಧಿಶೀಲ ದೇಶಗಳಾದ ಚೈನಾ, ಬ್ರೆಜಿಲ್, ಮೆಕ್ಸಿಕೊ, ಇಂಡೋನೇಷಿಯಾ . ಶ್ರೀಲಂಕಾ, ಪೊಲೆಂಡ್, ಮಲೇಷಿಯ, ಅರ್ಜೆಂಟೈನಾ ಮುಂತಾದ ದೇಶಗಳೂ ಸಹ ಅದ್ಭುತ ಆರ್ಥಿಕ ಪ್ರಗತಿ ಸಾಧಿಸಿವೆ. ಇದರಿಂದಾಗಿ ಈ ಕೆಳಗಿನ ಸಂಗತಿಗಳು ಭಾರತ ಒಂದು ಅಭಿವೃದ್ಧಿಶೀಲ ದೇಶ ಎಂದು ಸಾರಿ ಹೇಳುತ್ತಿವೆ.

### 1. ರಾಷ್ಟ್ರೀಯ ಆದಾಯದಲ್ಲಿ ಸುಧಾರಣೆ

ಭಾರತದ ರಾಷ್ಟ್ರೀಯ ಆದಾಯವು ಕಳೆದ 4 ರಿಂದ 5 ದಶಕಗಳ ಅವಧಿಯಲ್ಲಿ ಏರಿಕೆ ಕಂಡಿದೆ. ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಯ ಹೆಚ್ಚಳ ಹಾಗೂ ಸಾರಿಗೆ ಮತ್ತು ಸಂಪರ್ಕ, ವ್ಯಾಪಾರ ಮತ್ತು ವ್ಯವಹಾರ, ಬ್ಯಾಂಕಿಂಗ್, ವಿಮೆ, ವೈದ್ಯಕೀಯ, ಮುಂತಾದ ಕ್ಷೇತ್ರದಲ್ಲಿ ಅದ್ಭುತ ಪ್ರಗತಿಯಿಂದಾಗಿ ಈ ಏರಿಕೆ ಸಾಧ್ಯವಾಗಿದೆ, ಉದಾ: ಪ್ರಸ್ತುತ ಬೆಲೆಗಳಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನವು 1950–51 ರ ರೂ 9,719 ಕೋಟಿಯಿಂದ 1990–91 ಕ್ಕೆ 5,15,032 ಕೋಟಿ ರೂ.ಗಳಿಗೆ ಮತ್ತು 2010–11ಕ್ಕೆ 71,57,412 ಕೋಟಿ ರೂ.ಗಳಿಗೆ ಹೆಚ್ಚಿದೆ. 2005–06, 2006–07, 2007–08, 2008–09 ಮತ್ತು 2009–10 ಅವಧಿಯಲ್ಲಿ ಒಟ್ಟು ದೇಶೀಯ ಬೆಳವಣಿಗೆ ದರವು ಕ್ರಮವಾಗಿ ಶೇಕಡ 9.5, ಶೇಕಡ 9.6, ಶೇಕಡ9.2, 6.7 ಮತ್ತು 8.4 ರಷ್ಟಾಗಿತ್ತು.

ಈ ಅಂಕಿ ಅಂಶಗಳು ಭಾರತವು ಒಂದು ಗಮನಾರ್ಹವಾಗಿ ಆರ್ಥಿಕ ಪ್ರಗತಿ ಸಾಧಿಸುತ್ತಿರುವ ದೇಶ ಎಂದು ಸಾರಿ ಹೇಳುತ್ತಿವೆ. ಇದೇ ರೀತಿಯಾಗಿ ಇತರೆ ಅಭಿವೃದ್ಧಿಶೀಲ ದೇಶಗಳಾದ ಚೈನಾ,



downloaded from: www.kpscvaani.com

ಬ್ರೆಜಿಲ್, ಮಲೇಷಿಯಾ, ಇಂಡೋನೇಷಿಯಾ, ಶ್ರೀಲಂಕಾ ಮೊದಲಾದ ದೇಶಗಳು ಗಮನಾರ್ಹ ಪ್ರಗತಿ ಸಾಧಿಸಿದೆ. ಪ್ರಸ್ತುತವಾಗಿ ಭಾರತದ ರಾಷ್ಟ್ರೀಯ ಆದಾಯವು.

## 2. ತಲಾದಾಯದ ಕ್ರಮೇಣ ಏರಿಕೆ

ತಲಾದಾಯದಲ್ಲಿನ ಕ್ರಮೇಣ ಗತಿಯ ಏರಿಕೆಯು ಅಭಿವೃದ್ಧಿಶೀಲ ದೇಶಗಳ ಪ್ರಧಾನ ಲಕ್ಷಣವಾಗಿದೆ. 2012 ವಿಶ್ವ ಅಭಿವೃದ್ಧಿ ವರದಿಯ ಮೇರೆಗೆ ಅಭಿವೃದ್ಧಿಶೀಲ ದೇಶಗಳ ಸರಾಸರಿ ತಲಾದಾಯವು 3,764 ಡಾಲರುಗಳಾಗಿದೆ. ಆದರೆ ಮುಂದುವರಿದ ದೇಶಗಳ ಸರಾಸರಿ ತಲಾ ಆದಾಯವು 38,658 ಡಾಲರುಗಳು ಅಥವಾ ಅದಕ್ಕಿಂತಲೂ ಅಧಿಕವಿದೆ. ಅದೇ ರೀತಿ ಅಭಿವೃದ್ಧಿಶೀಲ ದೇಶಗಳ ದೈನಂದಿನ ಸರಾಸರಿ ತಲಾ ಆದಾಯ 8 ರಿಂದ 9 ಡಾಲರುಗಳಾದರೆ ಮುಂದುವರಿದ ದೇಶಗಳದ್ದು 106 ಡಾಲರುಗಳಾಗಿದೆ. ಕಳೆದ 60 ವರ್ಷಗಳ ಅವಧಿಯಲ್ಲಿ ಸಾಧಿಸಲಾದ ಆರ್ಥಿಕ ಪ್ರಗತಿಯ ಕಾರಣದಿಂದಾಗಿ ಭಾರತದ ತಲಾದಾಯದಲ್ಲಿ ಕ್ರಮೇಣ ಏರಿಕೆ ಕಂಡಿದೆ. ಉದಾ: 1950–51ರ ರೂ. 264 ಗಳಿಂದ ಭಾರತದ ತಲಾದಾಯವು (ಪ್ರಸ್ತುತ ಬೆಲೆಗಳಲ್ಲಿ) 2000–01 ಕ್ಕೆ ರೂ 17,295ಕ್ಕೆ ಮತ್ತು 2010–11ಕ್ಕೆ ರೂ . 53,331ಕ್ಕೆ ಏರಿದೆ. ತಲಾದಾಯದಲ್ಲಿನ ಈ ಏರಿಕೆ ಅಷ್ಟೊಂದು ತೃಪ್ತಿಕರ ಅಲ್ಲದಿದ್ದರೂ ಸಹ ಭಾರತವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದು ತಲಾದಾಯದ ಈ ಅಂಕಿಅಂಶಗಳು ಸಾರುತ್ತಿವೆ. ಡಾಲರುಗಳ ಲೆಕ್ಕದಲ್ಲಿ ಭಾರತದ ತಲಾದಾಯವು 2010ರಲ್ಲಿ 1,340 ಡಾಲರುಗಳಾಗಿತ್ತು. ಇದೇ ವೇಳೆಯಲ್ಲಿ ನಾರ್ವೆ ದೇಶದ್ದು 85,380 ಡಾಲರುಗಳು, ಅಮೆರಿಕಾದ್ದು 47,140 ಡಾಲರುಗಳು, ಇಂಗ್ಲೆಂಡಿನದ್ದು 38,450 ಡಾಲರುಗಳು , ಜರ್ಮನಿಯದು 43,330 ಡಾಲರುಗಳು , ಜಪಾನಿನದು 42,150 ಡಾಲರುಗಳು , ಚೈನಾ ದೇಶದ್ದು 4,260 ಡಾಲರುಗಳು, ಬ್ರೆಜಿಲ್ನನ್ನದು 9,390 ಡಾಲರುಗಳು ಶ್ರೀಲಂಕಾದ್ದು 2,290 ಡಾಲರುಗಳು ದಕ್ಷಿಣ ಆಫ್ರಿಕಾದ್ದು 6,100 ದಾಲರುಗಳು ಮತ್ತು ಪಾಕಿಸ್ತಾನದ್ದು 1,050 ಡಾಲರುಗಳಾಗಿತ್ತು.

## 3. ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ

ಕೃಷಿ ಕ್ಷೇತ್ರದಲ್ಲಿ ಮಾಡಲಾದ ಕ್ರಾಂತಿಕಾರಿ ಬದಲಾವಣೆಯ ಕಾರಣದಿಂದಾಗಿ ಭಾರತದ ಕೃಷಿ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳವಾಗಿದೆ. ಭೂ ಸುಧಾರಣೆ ಕಾರ್ಯಕ್ರಮಗಳ ಅನುಷ್ಠಾನ, ವೈಜ್ಞಾನಿಕ ಬೇಸಾಯ ಕ್ರಮದ ಅಳವಡಿಕೆ, ನೀರಾವರಿ ಸೌಲಭ್ಯ, ಉತ್ತಮ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿ ಮತ್ತು ಕೀಟನಾಶಕಗಳ ಬಳಕೆ ಮುಂತಾದ ಕಾರಣಗಳಿಂದ ಈ ಅದ್ಭುತ ಪ್ರಗತಿ ಸಾಧ್ಯವಾಗಿದೆ, ಭಾರತದಲ್ಲಿ 1950–51ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಕೇವಲ 50.8ದಶಲಕ್ಷ ಟನ್ನುಗಳಾಗಿದ್ದಿತು. ಇದು 2000–01ರ ವೇಳೆಗೆ 196.8ದಶಲಕ್ಷ ಟನ್ನುಗಳಿಗೆ ಹಾಗೂ 2010–11ರ ವೇಳೆಗೆ 242 ದಶಲಕ್ಷ ಟನ್ನುಗಳಿಗೂ ಹೆಚ್ಚಿತು. ಭಾರತವು ಇಂದು ಆಹಾರ ಧಾನ್ಯ ಉತ್ಪಾದನೆ ವಿಷಯದಲ್ಲಿ ಸ್ವಾವಲಂಬನೆ ಸಾಧಿಸಿದೆ. ಈ ಅದ್ಭುತ ಪ್ರಗತಿಯು ಭಾರತದಲ್ಲಿನ ಕೃಷಿ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಲಾಗಿದ ಕ್ರಾಂತಿಕಾರಿ ಬದಲಾವಣೆಗಳ ಕಾರಣದಿಂದಾಗಿ ಸಾಧ್ಯವಾಯಿತು. ಇಷ್ಟಾಗಿಯೂ ರಾಷ್ಟ್ರೀಯ ಆದಾಯಕ್ಕೆ ಕೃಷಿ ವಲಯದ ಕೊಡುಗೆ ಗಣನೀಯವಾಗಿ ತಗ್ಗಿದೆ.



downloaded from: www.kpscvaani.com

## 4. ಕೈಗಾರಿಕಾ ಉತ್ಪಾದನೆಯಲ್ಲಿ ಹೆಚ್ಚಳ

ಇತ್ತೀಚಿನ ವರ್ಷಗಳಲ್ಲಿ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಅದ್ಭುತ ಪ್ರಗತಿ ಸಾಧಿಸಲಾಗಿದೆ. ದೇಶದ ಕೈಗಾರಿಕಾ ಕ್ಷೇತ್ರವು ಇಂದು ವಿಸ್ತಾರ ತಳಹದಿ ಹೊಮ್ಮಿದ್ದು, ಅದು ವೈವಿಧ್ಯಮಯ ಕೈಗಾರಿಕಾ ಸರಕುಗಳನ್ನು ಉತ್ಪಾದಿಸುವ ಮೂಲಕ ಅಧಿಕ ಆದಾಯ ಮತ್ತು ಉದ್ಯೋಗ ಅವಕಾಶವನ್ನು ಸೃಷ್ಟಿಸುತ್ತಿದೆ. ಇದರಿಂದಾಗಿ ಆದಾಯದಲ್ಲಿನ ಕೈಗಾರಿಕೆಗಳ ಪಾಲು ಸಹ ಹೆಚ್ಚಿದೆ. ಉದಾ: 2009ರಲ್ಲಿ ಒಟ್ಟು ದೇಶೀಯ ಉತ್ಪಾದನೆಯಲ್ಲಿನ ಕೈಗಾರಿಕೆಗಳ ಪಾಲು ಭಾರತದಲ್ಲಿ ಶೇಕಡ 28 ಆಗಿತ್ತು. ಭಾರತವು ಇಂದು ಜಗತ್ತಿನಲ್ಲಿ ಹತ್ತನೇ ಅತ್ಯಧಿಕ ಕೈಗಾರೀಕೃತ ದೇಶವಾಗಿ ಹೊರಹೊಮ್ಮಿದೆ. ಅದು ಕಬ್ಬಿಣ ಮತ್ತು ಉಕ್ಕು, ರಸಗೊಬ್ಬರ, ಭಾರೀ ರಾಸಾಯನಿಕಗಳು, ಮಷಿನ್ ಟೂಲ್ಸ್, ವಿದ್ಯುತ್ ಉಪಕರಣಗಳು, ಅಲ್ಯೂಮಿನಿಯಂ, ಸಿಮೆಂಟ್, ಕಾಗದ ವಾಹನಗಳು, ಎಲೆಕ್ಟ್ರಾನಿಕ್ ಸರಕುಗಳು , ಸಕ್ಕರೆ, ಪೆಟ್ರೋಲಿಯಂ ಮುಂತಾದ ಹಲವು ಹತ್ತು ಕೈಗಾರಿಕೆಗಳನ್ನು ಸ್ಥಾಪಿಸಿದೆ. ಭಾರತವು ಅನೇಕ ಕೈಗಾರಿಕಾ ಸರಕುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದಷ್ಟೇ ಅಲ್ಲದೆ ಸಾಕಷ್ಟು ಅಮೂಲ್ಯ ವಿದೇಶಿ ವಿನಿಮಯವನ್ನೂ ಗಳಿಸುತ್ತಿದೆ. ಪ್ರಸ್ತುತ ವಾರ್ಷಿಕ ಶೇಕಡ 7 ರಿಂದ 10ರ ದರದ ಕೈಗಾರಿಕಾ ಪ್ರಗತಿ ಸಾಧಿಸುತ್ತಿತುವ ಭಾರತ ವಿಶ್ವದ ಗಮನ ಸೆಳೆಯುತ್ತಿದೆ. ಈ ಅದ್ಭುತ ಪ್ರಗತಿಯನ್ನು ಗಮನಿಸಿದರೆ ಭಾರತವು ನಿಸ್ಸಂದೇಹವಾಗಿ ಒಂದು ಅಭಿದ್ಧಿಶೀಲ ದೇಶ ಎಂದು ಸಾರಬಹುದು.

## 5. ಸ್ಥಿರವಾಗಿ ಸುಧಾರಿಸುತ್ತಿರುವ ಬಂಡವಾಳ ಸಂಚಯನ ದರ

ಕಡಿಮೆ ಬಂಡವಾಳ ಸಂಚಯನ ಅಥವಾ ಬಂಡವಾಳದ ಕೊರತೆ ಎಂಬುದು ಅನೇಕ ಅಭಿವೃದ್ಧಿಶೀಲ ದೇಶಗಳ ಒಂದು ಗುಣ ಲಕ್ಷಣವಾಗಿತ್ತು. ಇದಕ್ಕೆ ಭಾರತದ ಕೂಡ ಹೊರತಾಗಿರಲಿಲ್ಲ. ಆದರೆ ಇತ್ತೀಚಿನ ಅಂಕಿ ಅಂಶಗಳು ಭಾರತದಲ್ಲಿ ಬಂಡವಾಳ ಸಂಚಯನ ದರವು ಸ್ಥಿರವಾಗಿ ಸುಧಾರಿಸುಸುತ್ತಿರುವುದನ್ನು ಬಹಿರಂಗಪಡಿಸಿವೆ. 2012ನೇ ವಿಶ್ವ ಅಭಿವೃದ್ಧಿ ವರದಿ ಪ್ರಕಾರ 2009ರಲ್ಲಿ ಬಂಡವಾಳ ಸಂಚಯನ ದರವು ಜಿ.ಡಿ.ಪಿ.ಯ ಶೇಕಡಾವಾರು ಪ್ರಮಾಣದಲ್ಲಿ ಚೈನಾದಲ್ಲಿ ಶೇಕಡ 48 ರಷ್ಟು, ಭಾರತದಲ್ಲಿ ಶೇಕಡ 36ರಷ್ಟು, ಬ್ರೆಜಿಲ್‌ನಲ್ಲಿ ಶೇಕಡ 17ರಷ್ಟು, ಅರ್ಜೆಂಟೈನಾದಲ್ಲಿ ಶೇಕಡ 21ರಷ್ಟು, ಪಾಕಿಸ್ತಾನದಲ್ಲಿ ಶೇಕಡ 19ರಷ್ಟು ಮತ್ತು ಶ್ರೀಲಂಕಾದಲ್ಲಿ ಶೇಕಡ 24ರಷ್ಟು ಆಗಿತ್ತು. ಭಾರತದ ಒಟ್ಟೂ ದೇಶಿಯ ಬಂಡವಾಳ ಸಂಚಯನ ಪ್ರಮಾಣವು ಜಿ.ಡಿ.ಪಿ.ಯ ಶೇಕಡಾವಾರು ಪ್ರಾಮಾದಲ್ಲಿ 2009–10ರಲ್ಲಿ ಗರಿಷ್ಠ ಶೇಕಡ 36.6 ರಷ್ಟಾಗಿತ್ತು. ಈ ಅಂಕಿ ಅಂಶಗಳು ಭಾರತವು ಇನ್ನು ಯಾವುದೇ ಕಾರಣಕ್ಕೂ "ಬಂಡವಾಳ ಕೊರತೆ" ಅಥವಾ "ಅಲ್ಪ ಉಳಿತಾಯ ಮತ್ತು ಅಲ್ಪ ಹೂಡಿಕೆಯ ಆರ್ಥಿಕತೆಯಲ್ಲ" ಎಂದು ಸಾಬೀತು ಪಡಿಸುತ್ತಿವೆ. ಭಾರತದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು ಸಾರ್ವಜನಿಕ ವಲಯದ ಹೂಡಿಕೆ ಕೇವಲ ರೂ 1,960 ಕೋಟಿಯಾಗಿತ್ತು. ಆದರೆ ಈ ಪ್ರಮಾಣ ಹನ್ನೊಂದನೇ ಪಂಚವಾರ್ಷಿಕ ಯೋಜನೆ (2007–12)ಯ ಅವಧಿಗೆ ರೂ. 36,44,718 ಕೋಟಿಗೆ ಏರಿತು.

## 6. ಮೂಲ ಸೌಕರ್ಯ ಸೌಲಭ್ಯಗಳ ಹೆಚ್ಚಳ

ಭಾರತದಲ್ಲಿ ಹಲವಾರು ಮೂಲ ಸೌಕರ್ಯ ಸೌಲಭ್ಯಗಳು ಗಣನೀಯವಾಗಿ ಹೆಚ್ಚಿವೆ. ಸಾರಿಗೆ ಮತ್ತು ಸಂಪರ್ಕ, ಇಂಧನ, ನೀರಾವರಿ ಸೌಲಭ್ಯ, ಆರೋಗ್ಯ ಮತ್ತು ನೈರ್ಮಲ್ಯ, ಶಿಕ್ಷಣ ಮತ್ತು ತರಬೇತಿ,



downloaded from: www.kpscvaani.com

ಸಂಶೋಧನೆ ಮತ್ತು ಅಭಿವೃದ್ಧಿ ಬ್ಯಾಂಕಿಗ್, ವಿಮೆ ಮತ್ತು ಹಣಕಾಸು ಮುಂತಾದ ಹಲವಾರು ಮೂಲ ಸೌಕರ್ಯ ಸೌಲಭ್ಯಗಳನ್ನು ವ್ಯಾಪಕವಾಗಿ ಒದಗಿಸಲಾಗಿದೆ. ಇದಲ್ಲದೆ ಅನೇಕ ರೀತಿಯ ಸಾಮಾಜಿಕ ಭದ್ರತೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈ ಕಾರಣದಿಂದಾಗಿ ರಸ್ತೆ ಸಾಂದ್ರತೆ (ಪ್ರತಿ ನೂರು ಕಿ.ಮಿ ಪ್ರದೇಶಕ್ಕೆ ರಸ್ತೆಗಳು) ಮತ್ತು ರೈಲು ಸಾರಿಗೆ ಸಾಂದ್ರತೆ (ಪ್ರತಿ ನೂರು ಕಿ.ಮಿ ಪ್ರದೇಶಲ್ಲಿ ರೈಲು ಸಾರಿಗೆ ಗಳು ಹೆಚ್ಚಿವೆ. ಉದಾ: ಚೈನಾ ದೇಶದಲ್ಲಿ ರಸ್ತೆ ಮತ್ತು ರೈಲು ಸಾಂದ್ರತೆಗಳು 2006ರಲ್ಲಿ ಕ್ರಮವಾಗಿ 20.7 ಮತ್ತು 0.8 ಕಿ.ಮಿ.ಗಳು ಹಾಗು ಭಾರತದಲ್ಲಿ 113.8 ಮತ್ತು 2.1 ಕಿ.ಮಿ.ಗಳು ಆಗಿದ್ದವು. ಅದೇ ರೀತಿ ವಿದ್ಯುಚ್ಛಕ್ತಿಯ ತಲಾ ಅನುಭೋಗವು (ಕಿ.ವ್ಯಾಟ್ ಗಂಟೆಗಳು) 2006ರಲ್ಲಿ 1,647 ಆಗಿತ್ತು. ಇದರ ಜಾಗತಿಕ ಸರಾಸರಿ ಇದೇ ವೇಳೆಯಲ್ಲಿ 2,750 ಆಗಿತ್ತು ಭಾರತದ ದೂರಸಂಪರ್ಕ ಜಾಲವು 2012ರ ಡಿಸೆಂಬರ್ ಅಂತ್ಯದ ವೇಳೆಗೆ 950 ದಶಲಕ್ಷ ಸಂಪರ್ಕದೊಂದಿಗೆ ವಿಶ್ವದಲ್ಲೇ ಎರಡನೇ ಅತ್ಯಂತ ದೊಡ್ಡ ಜಾಲವಾಗಿತ್ತು (ಚೈನಾ ಮೊದಲ ಸ್ಥಾನದಲ್ಲಿದೆ). ಭಾರತವು 1,54,979(2009–10) ಅಂಚೆ ಕಚೇರಿಗಳೊಂದಿಗೆ ವಿಶ್ವದ ಅತ್ಯಂತ ದೊಡ್ಡ ಅಂಚೆ ಜಾಲವಾಗಿ ಹೊರಹೊಮ್ಮಿದೆ. ಹೀಗೆ ಭಾರತದಲ್ಲಿನ ಮೂಲ ಸೌಕರ್ಯಗಳ ಕ್ಷೇತ್ರದಲ್ಲಿ ಅದ್ಭುತ ಪ್ರಗತಿ ಸಾಧಿಸಲಾಗಿದೆ.

## 7. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿ

ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅದ್ಭುತವಾದ ಪ್ರಗತಿ ಸಾಧಿಸಲಾಗಿದೆ. ಉದಾ: ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನ, ಇಂಜಿನಿಯರಿಂಗ್, ಅಣು ಸಂಶೋಧನೆ, ಬಾಹ್ಯಾಕಾಶ ಸಂಶೋಧನೆ, ಗಣಕಯಂತ್ರ ಮತ್ತು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ವೈದ್ಯಕೀಯ ಸಂಶೋಧನ ಹಾಗು ಇನ್ನೂ ಹಲವು ಕ್ಷೇತ್ರದಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ, ದೇಶದಲ್ಲಿ ಇಂದು ದೇಶೀಯ ತಂತ್ರಜ್ಞಾನ ಮತ್ತು ವೈಜ್ಞಾನಿಕ ಪ್ರಗತಿಯನ್ನು ಬಳಸಿಕೊಂಡು ಅನೇಕ ಉನ್ನತ ಯಂತ್ರಗಳು ಮತ್ತು ಉಪಕರಣಗಳನ್ನು ಉತ್ಪಾದಿಸಲಾಗಿದೆ. ಉಪಗ್ರಹ ಉಡಾವಣೆ ಕಾರ್ಯದಲ್ಲಿ ತೊಡಗಿರುವ ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳ ಪೈಕಿ ಭಾರತವೂ ಒಂದು. ಅನೇಕ ಪ್ರಯೋಗಾಲಯಗಳು, ಸಂಶೋಧನಾ ಕೇಂದ್ರಗಳು, ಸಂಸ್ಥೆಗಳು ಮತ್ತು ಸಂಘಟನೆಗಳು ಸ್ಥಾಪಿಸಿ ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನೆಯಲ್ಲಿ ತೊಡಗಿರುವ ಭಾರತವು ಜಗತ್ತಿನಲ್ಲಿ ಅತ್ಯಧಿಕ ಸಂಖ್ಯೆಯ ವಿಜ್ಞಾನಿಗಳು, ಇಂಜಿನಿಯರುಗಳು ಮತ್ತು ತಂತ್ರಜ್ಞರನ್ನು ಹೊಂದಿರುವ ದೇಶವಾಗಿದೆ. ಮಾಹಿತಿ ತಂತ್ರಜ್ಞಾನ ಮತ್ತು ಗಣಕಯಂತ್ರ ಕ್ಷೇತ್ರದಲ್ಲಿ ಭಾರತ ಮತ್ತು ಚೈನಾದೇಶಗಳು ಗಣನೀಯ ಪ್ರಗತಿ ಸಾಧಿಸಿವೆ.

## 8. ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಪ್ರಗತಿ

ಕಳೆದ ಮೂರರಿಂದ ನಾಲ್ಕು ದಶಕಗಳ ಅವಧಿಯಲ್ಲಿ ಭಾರತದ ಬ್ಯಾಂಕಿಂಗ್, ವಿಮೆ, ಹಣಕಾಸು ಮತ್ತು ಬಂಡವಾಳ ಮಾರುಕಟ್ಟೆ ಕ್ಷೇತ್ರದಲ್ಲಿ ವ್ಯಾಪಕ ಪ್ರಗತಿ ಸಾಧಿಸಲಾಗಿದೆ . ಭಾರತದಲ್ಲಿ ಹಣಕಾಸು ಮತ್ತು ಬಂಡವಾಳ ಮಾರುಕಟ್ಟೆಗಳಲ್ಲಿ ಸಾಕಷ್ಟು ಸುಧಾರಣೆಗಳಾವೆ ಮತ್ತು ಈ ಕ್ಷೇತ್ರವನ್ನು ಸುಸ್ಥಿರವಾಗಿ ಬಲಪಡಿಸಲಾಗಿದೆ. ಅನೇಕ ವಿಶೇಷ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಹಾಗು ಬ್ಯಾಂಕಿಂಗ್ ಮತ್ತು ವಿಮಾ ಸೇವೆಯನ್ನು ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳೆರಡರಲ್ಲೂ ವಿಸ್ತರಿಸಲಾಗಿದೆ. ಹಳ್ಳಿಗಾಡಿನ ಪ್ರದೇಶಗಳಿಗೂ ಈ ಸೇವೆ ಲಭ್ಯವಾಗುವಂತೆ ಮಾಡಲಾಗಿದೆ. ಬ್ಯಾಂಕು ಹಣಕಾಸು



downloaded from: www.kpscvaani.com

ಪೂರೈಕೆಯಲ್ಲಿ ಕೃಷಿ, ಗ್ರಾಮೀಣಾಭಿವೃದ್ಧಿ, ಗೃಹ ಮತ್ತು ಸಣ್ಣ ಕೈಗಾರಿಕೆಗಳಿಗೆ ಪ್ರಥಮಾದ್ಯತೆ ನೀಡಲಾಗಿದೆ. 2011 ಮಾರ್ಚ್ ಅಂತ್ಯದಲ್ಲಿ ಭಾರತದಲ್ಲಿ ಪ್ರತಿ ಒ೦ದು ಲಕ್ಷ ಜನಸಂಖ್ಯೆಗೆ 7 ಬ್ಯಾಂಕ್ ಶಾಖೆಗಳು ಲಭ್ಯವಿದ್ದವು. 2011ರಲ್ಲಿ ತಲಾ ಬ್ಯಾಂಕ್ ಸಾಲಗಳು ಕ್ರಮವಾಗಿ ರೂ. 46,321 ಮತ್ತು ರೂ.34,800 ಆಗಿದ್ದವು.

## 9. ಜೀವನ ಮಟ್ಟದಲ್ಲಿ ಸುಧಾರಣೆ

ಭಾರತದಲ್ಲಿ ಜನರ ಜೀವನಮಟ್ಟದಲ್ಲಿ ಕ್ರಮೇಣ ಸುಧಾರಣೆ ಕಂಡುಬರುತ್ತಿದೆ. ಭಾರತವು ತನ್ನ ಆರ್ಥಿಕತೆಯನ್ನು ಜಾಗತಿಕ ಪೈಪೋಟಿಗೆ ತೆರೆದಿಟ್ಟದೆ ಹಾಗೂ ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನವನ್ನು ತನ್ನತ್ತ ಸೆಳೆಯಲು ಶಕ್ತಿ ಮೀರಿ ಪ್ರಯತ್ನಿಸಿತ್ತಿದ್ದೆ. ಇದರಿಂದ ಭಾರತದ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳು ಸದೃಡವಾಗಿ ಏರಿಕೆಯಾಗುತ್ತಿವೆ. ಭಾರತದಲ್ಲಿನ ಜನರು ಇಂದು ಹಿಂದೆಂದಿಗಿಂತಲೂ ವೈವಿಧ್ಯಮಯ ಸರಕುಗಳನ್ನು ಅನುಭವಿಸುವುದು ಸಾಧ್ಯವಾಗುತ್ತಿದೆ. ಆರ್ಥಿಕ ಸುಧಾರಣೆ ಕಾರ್ಯಕ್ರಮವನ್ನು ಜಾರಿಗೊಳಿಸಿದ ತರುವಾಯ ಭಾರತವೂ ಸೇರಿದಂತೆ ಅನೇಕ ಅಭಿವೃದ್ಧಿಶೀಲ ದೇಶಗಳು ತ್ವರಿತಗತಿಯ ಬೆಳವಣಿಗೆ ದರವನ್ನು ಸಾಧಿಸುತ್ತಿವೆ. ಜನರು ಈಗ ಉತ್ತಮ ಶಿಕ್ಷಣ ತರಬೇತಿ, ವೈಧ್ಯಕೀಯ ಸೌಲಭ್ಯ, ನೈರ್ಮಲ್ಯ ವ್ಯವಸ್ಥೆ, ಯೋಗ್ಯ ಕುಡಿಯುವ ನೀರಿನ ಪೂರೈಕೆ. ಮುಂತಾದುವನ್ನು ಪಡೆಯುವುದು ಸಾಧ್ಯವಾಗಿದೆ, ಇದರಿಂದಾಗಿ, ಭಾರತದಲ್ಲಿ ಜನರ ಜೀವನಾಯುಷ್ಯ ಹೆಚ್ಚಿದೆ. ಪ್ರಸ್ತುತವಾಗಿ ಭಾರತ 150 ಅಗ್ರದೇಶಗಳಲ್ಲಿ ಒಂದಾಗಿದೆ.

## 10. ರಚನಾತ್ಮಕ ಬದಲಾವಣೆಗಳು

ಭಾರತವು ಕಳೆದ ಎರಡರಿಂದ ಮೂರು ದಶಕಗಳ ಅವಧಿಯಲ್ಲಿ ವ್ಯಾಪಕ ರಚನಾತ್ಮಕ ಬದಲಾವಣೆಗಳನ್ನು ಕಂಡಿದೆ. ರಾಷ್ಟ್ರೀಯ ಆದಾಯದಲ್ಲಿ ವಿವಿಧ ವಲಯಗಳ ಸಾಪೇಕ್ಷ ಕೊಡುಗೆಯು ಗಣನೀಯ ಪ್ರಮಾಣದ ಬದಲಾವಣೆ ಕಂಡಿದೆ. ದಿನೇ ದಿನೇ ಕೃಷಿಯ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ ಹಾಗು ಕೈಗಾರಿಕೆ ಮತ್ತು ಸೇವ ವಲಯದ ಪ್ರಾಮುಖ್ಯತೆ ಹೆಚ್ಚುತ್ತಿದೆ. ಉದಾ: ಭಾರತದ ರಾಷ್ಟ್ರೀಯ ಆದಾಯದಲ್ಲಿ ಕೃಷಿ, ಕೈಗಾರಿಕ ಮತ್ತು ಸೇವಾ ವಲಯದ ಪಾಲು 1950–51 ರಲ್ಲಿ ಕ್ರಮವಾಗಿ ಶೇಕಡ 56,16 ಮತ್ತು 28 ಆಗಿತ್ತು. ಆದರೆ 2009ರ ವೇಳೆಗೆ ಈ ಪಾಲು ಕ್ರಮವಾಗಿ ಶೇಕಡ 18,27 ಮತ್ತು 55ಕ್ಕೆ ಬದಲಾಗಿದೆ. ಇದರಿಂದಾಗಿ ಭಾರತವು ಖಂಡಿತವಾಗಿಯೂ ಒಂದು ಅಭಿವೃದ್ಧಿಶೀಲ ದೇಶವಾಗಿ ಮಾರ್ಪಟ್ಟಿದೆ.

## 11. ರಾಷ್ಟ್ರೀಯ ಆದಾಯದಲ್ಲಿ ಕಡಿಮೆಗೊಳ್ಳುತ್ತಿರುವ ಕೃಷಿ ಪಾಲು:

ಒಂದು ಕಾಲದಲ್ಲಿ ಭಾರತವು ಕೃಷಿ ಪ್ರಧಾನವಾದ ದೇಶವಾಗಿದ್ದಿತು. ಸುಮಾರು ಮೂರನೇ ಎರಡು(2/3) ಪ್ರಮಾಣಕ್ಕಿಂತ ಅಧಿತ ಜನರು ಕೃಷಿ ಮತ್ತು ಸಂಬಂಧಿ ಚಟುವಟಿಕೆಗಳನ್ನು ಅವಲಂಬಿಸಿದ್ದರು. ಕೃಷಿಯಿಂದಲೇ ಸೃಷ್ಟಿಯಾಗಬೇಕಿದ್ದಿತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಪರಿಸ್ಥಿಯಲ್ಲಿ ಅಗಾಧ ಪ್ರಮಾಣದ ಬದಲಾವಣೆಯುಂಟಾಗಿದೆ. ಕೃಷಿ ಇಂದಿಗೂ ಪ್ರಧಾನ ಕಸುಬಾಗಿದೆಯಾದರೂ ರಾಷ್ಟ್ರೀಯ ಆದಾಯಕ್ಕೆ ಅದರ ಕೊಡುಗೆ ವಿಚಾರದಲ್ಲಿ ಅದು ತನ್ನ ಮಹತ್ವವನ್ನು ಕಳೆದುಕೊಳ್ಳತ್ತಿದೆ. ಅಷ್ಟೇ



downloaded from: www.kpscvaani.com

ಅಲ್ಲದೆ ಭಾರತವು ಇಂದು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದೆ. ಭಾರತದಲ್ಲಿ ಇಂದಿಗೂ ಕೃಷಿ ನಮ್ಮ ಆರ್ಥಿಕತೆಯ ಬೆನ್ನೆಲುಬಾಗಿದ್ದು ಒಟ್ಟು ಉದ್ಯೋಗದಲ್ಲಿ ಶೇಕಡ 58ರ ಪಾಲು ಹೊಂದಿದೆ. ಅದು ಒಟ್ಟು ದೇಶೀಯ ಉತ್ಪನ್ನದಲ್ಲಿ 1950–51ರಲ್ಲಿ ಶೇಕಡ 56ರಷ್ಟು ಪಾಲು ಹೊಂದಿದೆ. ಆದರೆ 2010–11 ರ ವೇಳೆ ಅದರ ಪಾಲು ಶೇಕಡ 12.3ಕ್ಕೆ ಕುಸಿಯಿತು.

## 12. ಬಡತನ ಪ್ರಮಾಣದ ಇಳಿಕೆ

ಭಾರತದ ಬಡತನ ಪ್ರಮಾಣವು ದೃಢವಾಗಿ ಇಳಿಮುಖವಾಗುತ್ತಿದೆ. ತ್ವರಿತ ಆರ್ಥಿಕ ಪ್ರಗತಿ ಸಾಧನೆ, ಮೂಲ ಸೇವೆಗಳ ಪೂರೈಕೆ, ಗುರಿಗೊಳಿಸಿದ ಬಡತನ ನಿವಾರಣೆ ಕಾರ್ಯಕ್ರಮದ ಅನುಷ್ಠಾನ ಮುಂತಾದ ಕಾರಣಗಳಿಂದ ನಮ್ಮ ದೇಶದಲ್ಲಿ ಬಡತನ ಗಂಭೀರತೆಯನ್ನು ಕಡಿಮೆಗೊಳಿಸಲಾಗಿದೆ. ಉದಾಹರಣೆಗೆ ಭಾರತದಲ್ಲಿ 1977 – 78ರಲ್ಲಿ ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದವರ ಸಂಖ್ಯೆ ಶೇಕಡ 51.3 ಆಗಿತ್ತು. ಈ ಪ್ರಮಾಣವು 2009 –10ರ ವೇಳೆಗೆ ಶೇಕಡ 29.8ಕ್ಕೆ ಇಳಿಯಿತು. ಆದಾಗ್ಯೂ ನಮ್ಮ ದೇಶದಲ್ಲಿನ ಜನಸಂಖ್ಯಾ ಬೆಳವಣಿಗೆಯ ಕಾರಣದಿಂದಾಗಿ ಬಡಜನರ ಸಂಖ್ಯೆ ಮಾತ್ರ ಹೆಚ್ಚೂ ಕಡಿಮೆ ಅಷ್ಟೇ ಇದೆ.

## 13.ಅಧಿಕ ಜನಸಂಖ್ಯಾ ಒತ್ತಡ

ಅಧಿಕ ಜನಸಂಖ್ಯಾ ಒತ್ತಡವು ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಒಂದು ಪ್ರಮುಖ ಲಕ್ಷಣವಾಗಿದೆ. ಈತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಜನಸಂಖ್ಯಾ ಬೆಳವಣಿಗೆ ದರ ಕಡಿಮೆಯಾಗುತ್ತಿದೆ. ಆದರೆ ಜನಸಂಖ್ಯಾ ರಚನೆಯು ಮುಂದುವರಿದ ದೇಶಗಳಿಗಿಂತ ಭಿನ್ನವಾಗಿದೆ. ಈ ಭಿನ್ನತೆಯನ್ನು ನಾವು ಜನಸಂಖ್ಯಾ ಗಾತ್ರ, ಜನಸಾಂದ್ರತೆ, ವಯೋಮಾನ ಸಂಯೋಜನೆ, ಜನಸಂಖ್ಯಾ ಬೆಳವಣಿಗೆ ದರ, ನಗರ ಜನಸಂಖ್ಯೆ, ಜೀವನಾಯುಷ್ಯ ಮುಂತಾದ ವಿಚಾರಗಳಲ್ಲಿ ಕಾಣಬಹುದಾಗಿದೆ. ಅಲ್ಲದೆ ನಮ್ಮ ದೇಶದಲ್ಲಿ ಮಕ್ಕಳು ಮತ್ತು ವೃದ್ದರನ್ನು ಒಳಗೊಂಡ ಒಂದು ದೊಡ್ಡ ಅವಲಂಬಿ ಜನರ ಪಡೆಯೇ ಇದೆ. ಅಷ್ಟಲ್ಲದೆ ಮುಂದುವರಿದ ದೇಶಗಳಿಗೆ ಹೋಲಿಸಿಕೊಂಡರೆ ನಮ್ಮ ದೇಶದ ಜನರ ಜೀವನಾಯುಷ್ಯ ಕಡಿಮೆಯಿದೆ.

## 14. ಆಧಾಯ ಅಸಮಾನತೆ

ಆದಾಯ ಮತ್ತು ಸಂಪತ್ತಿನ ವಿತರಣೆಯಲ್ಲಿ ಅಸಮಾನತೆ ಉಂಟಾಗಿರುವುದು ಅಭಿವೃದ್ಧಿಶೀಲ ದೇಶವಾಗಿ ಭಾರತದ ಇನ್ನೊಂದು ಪ್ರಮುಖ ಲಕ್ಷಣವಾಗಿದೆ. ಖಾಸಗಿ ಆಸ್ತಿಯ ಹಕ್ಕು, ಉತ್ತರಾಧಿಕಾರದ ಕಾನೂನು, ಕೌಟುಂಬಿಕ ಪ್ರಭಾವ, ಸಮಾನ ಅವಕಾಶಗಳ ಕೊರತೆ, ಮುಂತಾದ ಹಲವಾರು ಕಾರಣದಿಂದಾಗಿ ನಮ್ಮ ದೇಶದಲ್ಲಿ ಆಧಾಯ ಮತ್ತು ಸಂಪತ್ತಿನ ವಿತರಣೆ ವಿಚಾರದಲ್ಲಿ ತೀವ್ರ ಅಸಮಾನತೆ ಕಂಡುಬಂದಿದೆ. ಇದರಿಂದಾಗಿ ನಮ್ಮ ಸಮಾಜವು ಉಳ್ಳರು ಮತ್ತು ಇಲ್ಲದವರು ಎಂಬುದಾಗಿ ವಿಭಜನೆಗೊಂಡಿದೆ. 2008ರ ವಿಶ್ವ ಮಾನವ ಅಭಿವೃದ್ಧಿ ವರದಿಯ ಅಂಕಿಅಂಶಗಳ ಪ್ರಾಕಾರ 2004–05ರಲ್ಲಿ ಭಾರತದ ಶೇಕಡ 30ರಷ್ಟು ಸಂಖ್ಯೆಯ ಅಂತ್ಯಂತ ಶ್ರೀಮಂತ ಜನರು ದೇಶದ ಸಂಪತ್ತಿನಲ್ಲಿ ಶೇಕಡ 76.4ರ ಪಾಲು ಹೊಂದಿದ್ದರೆ ಶೇಕಡ 30 ರಷ್ಟು ಸಂಖ್ಯೆಯ ಅತ್ಯಂತ ಬಡಜನರು ಕೇವಲ 11.7 ಪಾಲು ಹೊಂದಿದ್ದರು.



downloaded from: www.kpscvaani.com

### 15. ನಿರುದ್ಯೋಗ ಸಮಸ್ಯೆ

ನಿರುದ್ಯೋಗ ಮತ್ತು ಅರೆಉದ್ಯೋಗದ ಅನಿಶ್ಚಿತ್ವವು ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಇನ್ನೊಂದು ಲಕ್ಷಣವಾಗಿದೆ. ಒಂದು ಅಂದಾಜಿನ ಪ್ರಕಾರ ನಮ್ಮ ಒಟ್ಟು ಶ್ರಮಬಲದ ಶೇಕಡ 30ರಷ್ಟು ಮಂದಿ ನಿರುದ್ಯೋಗಿಗಳಿದ್ದಾರೆ. ವಾಸ್ತವವಾಗಿ, ನಮ್ಮ ಅರ್ಥಿಕತೆಯನ್ನು ಉದಾರೀಕರಿಸಿದ ತರುವಾಯ ನಿರುದ್ಯೋಗ ಪ್ರಮಾಣ ಹೆಚ್ಚಿದೆ ಎಂದು ಅಂಕಿಅಂಶಗಳು ಸಾರುತ್ತಿವೆ. ಉದಾಹರಣೆಗೆ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆ 66ನೇ ಸುತ್ತಿನ ಫಲಿತಾಂಶಗಳ ಪ್ರಕಾರ (2009–10) ಭಾರತದಲ್ಲಿ ಪೂರ್ಣ ನಿರುದ್ಯೋಗಿಗಳ ಪ್ರಮಾಣ 1993–94ರ 9.02 ದಶಲಕ್ಷದಿಂದ 2009–10ರ ವೇಳೆಗೆ 28 ದಶಲಕ್ಷಕ್ಕೆ ಹೆಚ್ಚಿದೆ. ನಿರುದ್ಯೋಗದ ಹೊರೆ ಸಹ (ಒಟ್ಟು ಶ್ರಮಬಲದಲ್ಲಿ ನಿರುದ್ಯೋಗಿಗಳ ಶೇಕಡಾವಾರು ಪ್ರಮಾಣದಲ್ಲಿ ವ್ಯಕ್ತಪಡಿಸಿದಂತೆ) 1993–94ರ ಶೇಕಡ 2.62ರಿಂದ 2004 –05ಕ್ಕೆ ಶೇಕಡ 3.06ಕ್ಕೆ ಹೆಚ್ಚಿದೆ. ಅದೇ ರೀತಿ ನಿರುದ್ಯೋಗ ದರವೂ ಸಹ ಇದೇ ವೇಳೆಯಲ್ಲಿ ಶೇಕಡ 6.06 ರಿಂದ ಶೇಕಡ 8.28ಕ್ಕೆ ಹೆಚ್ಚಿದೆ.

### 16. ಸುಧಾರಿಸುತ್ತಿರುವ ಮಾನವ ಬಂಡವಾಳದ ಗುಣಮಟ್ಟ

ಅಭಿವೃದ್ಧಿಶೀಲ ದೇಶವಾಗಿರುವ ಭಾರತದಲ್ಲಿ ಮಾನವ ಸಂಪತ್ತಿನ ಗುಣಮಟ್ಟವು ಈತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಸುಧಾರಿಸಿತ್ತಿದೆ. ಶಿಕ್ಷಣ, ನೈಪೂಣ್ಯತೆ ಸುಧಾರಣೆ, ಸಂಶೋಧನ ಮತ್ತು ಅಭಿವೃದ್ಧಿ, ವೈದ್ಯಕೀಯ ಸೌಲಭ್ಯ ಸುಧಾರಣೆ, ವಸತಿ, ನೈರ್ಮಲ್ಯ, ಮುಂತಾದವುಗಳ ಮೇಲಿನ ನಮ್ಮ ದೇಶದ ಒಟ್ಟು ವೆಚ್ಚ ಸಾಕಷ್ಟು ಹೆಚ್ಚಿದೆ. ಇದರಿಂದಾಗಿ, ಒಂದು ಉತ್ಪಾದಕ ಸಂಪನ್ಮೂಲವಾಗಿ ಜನರ ಗುಣಮಟ್ಟವು ಉತ್ಕೃಷ್ಟ ರೀತಿಯಲ್ಲಿ ಸುಧಾರಿಸುತ್ತದೆ. ಇದರಿಂದಾಗಿ ನಮ್ಮ ದೇಶದ ಮಾನವ ಅಭಿವೃದ್ಧಿ ಸೂಚಿ ದರ್ಜೆಯಲ್ಲೂ ಸಹ ಸುಧಾರಣೆ ಕಂಡುಬರುತ್ತದೆ. 2011ರ ಮಾನವ ಅಭಿವೃದ್ಧಿ ವರದಿ ಪ್ರಕಾರ ಭಾರತದ ಮಾನವ ಅಭಿವೃದ್ಧಿ ದರ್ಜೆ 134 ಆಗಿತ್ತು. ಆದ್ದರಿಂದ ಗುಣಮಟ್ಟ ಇನ್ನೂ ಸುಧಾರಿಸಬೇಕಿರುವ ಅಗತ್ಯವಿದೆ.

## ಆದಾಯ ಅಸಮಾನತೆ (Income Inequalities) :-

ವಿಚಾರವನ್ನು ಪರಿಗಣಿಸದೇ ಹೋದಲ್ಲಿ ರಾಷ್ಟ್ರೀಯ ಆದಾಯದ ಮೇಲಿನ ಚರ್ಚೆಯು ಅಪೂರ್ಣವಾಗುತ್ತದೆ. ಏಕೆಂದರೆ ಅಭಿವೃದ್ಧಿ ಯೋಜನೆಗಳ ಪ್ರತಿಫಲ ಜನರ ಆರ್ಥಿಕ ಯೋಗಕ್ಷೇಮದ ಮೇಲೆ ಪರಿಣಾಮ ಬೀರಿದೆ ಹಾಗೂ ದೇಶದ ಆರ್ಥಿಕ ಪ್ರಗತಿ ಲಾಭಗಳು ಹೇಗೆ ಹಂಚಲ್ಪಟ್ಟಿವೆ ಎಂಬುದನ್ನು ತಿಳಿಯುವುದು ಅವಶ್ಯಕ. ರಾಷ್ಟ್ರೀಯ ಆದಾಯದ ಏರಿಕೆಯಿಂದ ಯಾವ ವರ್ಗಗಳು ಹೆಚ್ಚು ಪ್ರಯೋಜನ ಪಡೆದಿವೆ ಮತ್ತು ಕಾಲಾನಂತರದಲ್ಲಿ ಆದಾಯ ಹಂಚಿಕೆಯು ಪ್ರಗತಿ ಸಾಧಿಸಿದೆಯೇ ಅಥವಾ ಇಲ್ಲವೇ ಎಂಬುದನ್ನು ಸರಿಯಾಗಿ ವಿಶ್ಲೇಷಿಸಿದಾಗಲೇ ರಾಷ್ಟ್ರೀಯ ಆದಾಯದ ಮೇಲಿನ ಚರ್ಚೆ ಪರಿಪೂರ್ಣವಾಗುವುದು. ಈ ಹಿನ್ನಲೆಯಲ್ಲಿ ಭಾರತದ ರಾಷ್ಟ್ರೀಯ ಆದಾಯ ಹೇಗೆ ಹಂಚಿಕೆಯಾಗಿದೆ,


downloaded from: www.kpscvaani.com

ಆದಾಯ ಏರಿಕೆಯ ಲಾಭವನ್ನು ಯಾರ್‍ಯಾರು ಎಷ್ಟೆಷ್ಟು ಅನುಭವಿಸುತ್ತಿದ್ದಾರೆ ಎಂಬುದನ್ನು ತಿಳಿಯುವುದು ತುಂಬಾ ಅವಶ್ಯಕವೆನಿಸುತ್ತದೆ.

ಭಾರತದಲ್ಲಿ ಆದಾಯ ಹಂಚಿಕೆಯ ವಿಚಾರವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲು ಪರಿಪೂರ್ಣ ಅಂಕಿ ಅಂಶಗಳು ಲಭ್ಯವಿಲ್ಲ. ಕಳೆದ ಆರು ದಶಕಗಳಿಂದ ಕೇಂದ್ರಿಯ ಅಂಕಿ ಅಂಶ ಸಂಸ್ಥೆಯು (CSO) ರಾಷ್ಟ್ರೀಯ ಆದಾಯವನ್ನು ಲೆಕ್ಕಾಚಾರ ಮಾಡುತ್ತಿದೆಯಾದರೂ ರಾಷ್ಟ್ರೀಯ ಆದಾಯ ಹಂಚಿಕೆಯ ವಿಚಾರಗಳನ್ನು ಪರಿಗಣಿಸಲು ಈ ಅಂಕಿ ಅಂಶಗಳು ಅಷ್ಟೊಂದು ಪ್ರಯೋಜನಕಾರಿಯಲ್ಲ. 1960ರಲ್ಲಿ ಆದಾಯ ಹಂಚಿಕೆ ಮತ್ತು ಜೀವನ ಮಟ್ಟದ ವಿಚಾರಗಳನ್ನು ಅಭ್ಯಸಿಸಲು ಪಿ.ಸಿ ಮಹಾಲನೋಬಿಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ 1964ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ಸಮಿತಿಯು ಅಧ್ಯಯನದ ಜೊತೆಗೆ ಭಾರತೀಯ ರಿಸರ್ವ್ ಬ್ಯಾಂಕ್, ಎನ್.ಸಿ.ಎ.ಆರ್. (National Council Od Applied Economic) ಮತ್ತು ಇತರೆ ಖಾಸಗಿ ಸಂಶೋಧನಾಕಾರರು ಬೇರೆ ಬೇರೆ ಕಾಲಗಳಲ್ಲಿ ಅಧ್ಯಯನ ಕೈಗೊಂಡರು. ಈ ಅಧ್ಯಾಯನಗಳು ಅಂಕಿ ಅಂಶಗಳು ಮತ್ತು ಅಧ್ಯಯನ ವಿಧಾನಗಳ ವ್ಯತ್ಯಾಸದಿಂದಾಗಿ ಹೋಲಿಕಾತ್ಮಕವಾಗಿಲ್ಲ. ಆದರೂ ಸಹ ಈ ಅಂಕಿ ಅಂಶಗಳು ಯೋಜನಾ ಅವಧಿಯಲ್ಲಿನ ಆದಾಯ ಹಂಚಿಕೆಯ ವಿಚಾರಗಳ ಮೇಲೆ ಬೆಳಕು ಬೀರುತ್ತದೆ.

ಆದಾಯ ಹಂಚಿಕೆಯ ಅಂಶಗಳ ಲೆಕ್ಕಾಚಾರಕ್ಕೆ ಬೇಕಾಗುವ ಅಂಕಿ ಅಂಶಗಳು ಭಾರತ ಸರ್ಕಾರದ ಬಳಿ ಲಭ್ಯವಿಲ್ಲ. ಆದ್ದರಿಂದಾಗಿ ಆದಾಯ ಹಂಚಿಕೆಯ ಮೇಲಿನ ಅನೇಕ ಅಧ್ಯಯನಗಳು ದುರದೃಷ್ಟವಶಾತ್ ಭಾರತದಲ್ಲಿ ಆದಾಯ ತೆರಿಗೆ ಕಟ್ಟುವವರ ಸಂಖ್ಯೆ ಶೇಕಡ 2 ಕ್ಕಿಂತಲೂ ಕಡಿಮೆ ಇದ್ದು. ಭಾರತದಲ್ಲಿ ತೆರಿಗೆಯನ್ನು ವಂಚಿಸುವವರ ಸಂಖ್ಯೆಯೇ ಅಧಿಕವಿದೆ. ಆದ್ದರಿಂದ ಆದಾಯ ತೆರಿಗೆ ಇಲಾಖೆಯ ಅಂಕಿ ಅಂಶಗಳು ಭಾರತದ ರಾಷ್ಟ್ರೀಯ ಆದಾಯ ಹಂಚಿಕೆಯ ವಿಚಾರದ ಅಧ್ಯಯನಕ್ಕೆ ಅಪೂರ್ಣವೆನಿಸುತ್ತದೆ.

ಇಷ್ಟೆಲ್ಲಾ ಮಿತಿಗಳ ನಡುವೆಯೂ ಭಾರತದಲ್ಲಿ ವಿವಿಧ ಕಾಲದಲ್ಲಿ ಖಾಸಗಿ ಸಂಶೋಧನಾಕಾರರು ಹಾಗೂ ಇತರೆ ಸಸ್ಥೆಗಳು ಆದಾಯ ವಿತರಣೆಯ ವಿಚಾರದ ಮೇಲೆ ನಡೆಸಿದ ಅಧ್ಯಯನಗಳ ಅಂಕಿ ಅಂಶಗಳನ್ನು ಪರಿಶೀಲಸಿ ದೇಶದಲ್ಲಿನ ಆದಾಯ ಹಂಚಿಕೆ ವಿಚಾರವನ್ನು ವಿಶ್ಲೇಷಿಸಲು ಪ್ರಯತ್ನಿಸಬಹುದು.



downloaded from: www.kpscvaani.com

## ಭಾರತದಲ್ಲಿ ಆದಾಯ ಅಸಮಾನತೆಯ ಲೆಕ್ಕಾಚಾರ :

| ಮೂಲ | ಓಜಾ ಮತ್ತು ಭಟ್ | ರಣದಿವೆ | ಆಹ್ಮದ್ ಮತ್ತು ಭಟ್ಟಾಚಾರ್ಯ | NCAER | ವಿಶ್ವಬ್ಯಾಂಕು | ವರದಿ |
|---|---|---|---|---|---|---|
| ಕಾಲಾವಧಿ | 1961–62 ರಿಂದ 1963–64 | 1961–62 | 1964–65 | 1964–65 | 1975–76 | 2004–05 |
| ಮೇಲ್ ಸ್ತರದ ಶೇ.10 ರ ಪಾಲು | 35 | 45.47 | 31.5 | 33.5 | 33.6 | 31.1 |
| ಕೆಳಸ್ತರದ ಶೇ. 20ರ ಪಾಲು | 7 | 7.60 | 7.5 | 7.5 | 7.0 | 8.1 |
| ಲೊರೆಂಜ್ ಅನುಪಾತ | 0.377 | 0.351 | 0.372 | 0.39 | – | – |

ಪಟ್ಟಿಯಲ್ಲಿ ಸ್ಪಷ್ಟವಾದಂತೆ ಭಾರತದಲ್ಲಿ ತೀವ್ರ ಪ್ರಮಾಣದ ಆದಾಯ ಅಸಮಾನತೆ ಇದೆ. ರಣದಿವೆ ಅವರ ಅಂದಾಜಿನ ಪ್ರಕಾರ ಮೇಲ್ ಸ್ತರದ ಶೇಕಡ 10ರಷ್ಟು ಜನ ಒಟ್ಟು ಶೇಕಡಾ45.47ರಷ್ಟು ಆದಾಯವನ್ನು ಕಬಳಿಸುತ್ತಾರೆ. ಆದರೆ ಕಳಸ್ತರದ ಶೇಕಡ 20ರಷ್ಟು ಜನರು ಕೇವಲ ಶೇಕಡಾ 7.6ರಷ್ಟು ಆದಾಯ ಪಡೆಯುತ್ತಾರೆ. ಆದಾಯ ಅಸಮಾನತೆಯನ್ನು 'ಲೊರೆಂಜ್ ಅನುಪಾತ' (Lorenge ratio)ದ ಸಹಾಯದಿಂದಲೂ ಅಳೆಯಲಾಗುತ್ತದೆ. ಹೆಚ್ಚಿನ ಲೊರೆಂಜ್ ಅನುಪಾತವು ಅತಿ ಹೆಚ್ಚಿನ ಆದಾಯ ಅಸಮಾನತೆಯನ್ನೂ, ಕಡಿಮೆ ಲೊರೆಂಜ್ ಅನುಪಾತ ಕಡಿಮೆ ಆದಾಯ ಅಸಮಾನತೆಯನ್ನೂ ತೋರಿಸುತ್ತವೆ. ಪಟ್ಟಿಯಲ್ಲಿ ತೋರಿಸಲಾದ ಅಧ್ಯಯನಗಳು ಲೊರೆಂಜ್ ಅನುಪಾತವನ್ನು ಸರಿಸುಮಾರು 0.35ರಲ್ಲಿ ತೋರಿಸುತ್ತವೆಯಾದ್ದರಿಂದ ಭಾರತದಲ್ಲಿ ಆದಾಯ ಅಸಮಾನತೆ ಹೆಚ್ಚಿರುವುದನ್ನು ತೋರಿಸುತ್ತದೆ.

ಭಾರತದಲ್ಲಿ ಪ್ರಸ್ತುತ ಇರುವ ಆದಾಯ ಅಸಮಾನತೆಯನ್ನು ಪ್ರತಿ ಕುಟುಂಬದ ಅನುಭೋಗ ವೆಚ್ಚದ ಆಧಾರದ ಮೇಲೆಯೂ ಅಳೆಯಬಹುದಾಗಿದೆ.



downloaded from: www.kpscvaani.com

| ವರ್ಷ | ಕೆಳಸ್ತರದ ಶೇ.30 | ಮಧ್ಯದ ಶೇ.40 | ಮೇಲ್ ಸ್ತರದ ಶೇ.30 | ಕೆಳಸ್ತರದ ಶೇ.30 | ಮಧ್ಯದ ಶೇ.40 | ಮೇಲ್ ಸ್ತರದ ಶೇ.30 |
|---|---|---|---|---|---|---|
| 1958–59 | 13.1 | 34.3 | 52.6 | 13.2 | 31.7 | 55.1 |
| 1961–62 | 14.7 | 33.2 | 52.1 | 12.9 | 31.4 | 55.7 |
| 1965–66 | 15.1 | 34.3 | 50.6 | 13.6 | 31.9 | 54.7 |
| 1970–71 | 15.4 | 35.1 | 49.5 | 13.7 | 31.8 | 54.5 |
| 1972–73 | 15.4 | 33.7 | 50.9 | 13.8 | 31.9 | 54.3 |
| 1977–78 | 14.3 | 35.3 | 50.4 | 13.4 | 31.2 | 55.4 |
| 1983 | 15.2 | 33.9 | 50.9 | 13.9 | 32.8 | 53.3 |

ಮೇಲಿನ ಪಟ್ಟಿಯಲ್ಲಿ ಗೋಚರಿಸುವಂತೆ ಮೇಲ್‌ಸ್ತರದ ಶೇಕಡಾ 30 ಜನರು ಅರ್ಧಕ್ಕಿಂತಲೂ ಹೆಚ್ಚಿನ ವೆಚ್ಚ ಮಾಡುತ್ತಿದ್ದರೆ ಕೆಳಸ್ತರದ ಶೇಕಡಾ 30ರಷ್ಟು ಜನರು ಕೇವಲ ಶೇಕಡಾ 15 ರಷ್ಟು ಹಾಗೂ ಮಧ್ಯದ ಶೇಕಡಾ 40 ಭಾಗ ಜನರು ಶೇಕಡಾ 33 ರಷ್ಟು ಅನುಭೋಗ ವೆಚ್ಚ ಮಾಡುತ್ತಿದ್ದಾರೆ. ಅದೇ ರೀತಿ ಕೆಳಸ್ತರದ ಶೇಕಡಾ 70 ರಷ್ಟು ಜನರು ಕೇವಲ ಶೇಕಡಾ 6 ರಷ್ಟು ಉಳಿತಾಯ ಮಾಡಿದರೆ ಮೇಲ್ ಸ್ತರದ ಶೇಕಡಾ 68ರಷ್ಟು ಉಳಿತಾಯ ಮಾಡುತ್ತಾರೆ. ನಗರ ಪ್ರದೇಶದ ಕೆಳಸ್ತರದ ಶೇಕಡಾ 45ರಷ್ಟು ಜನರು ಶೇಕಡಾ 4 ರಷ್ಟು ಮಾತ್ರ ಉಳಿತಾಯ ಮಾಡಿದರೆ, ಮೇಲ್‌ಸ್ತರದ ಶೇಕಡಾ 10ರಷ್ಟು ಜನರು ಶೇಕಡಾ 56 ರಷ್ಟು ಉಳಿತಾಯ ಮಾಡುತ್ತಾರೆ.

ರಿಸರ್ವ್ ಬ್ಯಾಂಕ್ 1961, 1971 ಮತ್ತು 1981ರ ದಶಕಗಳಿಗೆ ನಡೆಸಿದ ಸಮೀಕ್ಷೆಯ ಪ್ರಕಾರ ಕೆಳಸ್ತರದ ಶೇಕಡಾ 30ರಷ್ಟು ಗ್ರಾಮೀಣ ಕುಟುಂಬಗಳು ಶೇಕಡಾ 5ಕ್ಕಿಂತಲೂ ಕಡಿಮೆ ಪ್ರಮಾಣದ ಭೂ ಒಡೆತನ ಹೊಂದಿದ್ದರೆ, ಮೇಲ್‌ಸ್ತರದ ಶೇಕಡಾ 30ರಷ್ಟು ಕುಟುಂಬಗಳು ಶೇಕಡಾ 80 ಕ್ಕಿಂತಲೂ ಹೆಚ್ಚಿನ ಭೂಪ್ರದೇಶದ ಒಡೆತನ ಹೊಂದಿದ್ದಾರೆ. ನೀರಾವರಿ ಸಾಲ ಸೌಲಭ್ಯಗಳು, ಕೃಷಿ ಯಂತ್ರೋಪಕರಣಗಳು ಮುಂತಾದ ಸಂಪನ್ಮೂಲಗಳೂ ಸಹ ಮೇಲ್‌ಸ್ತರದ ಜನರ ಪರವಾಗಿಯೇ ಹಂಚಲ್ಪಟ್ಟಿವೆ. ನಗರ ಪ್ರದೇಶಗಳಲ್ಲಿ ಆದಾಯ ಅಸಮಾನತೆ ಗ್ರಾಮೀಣ ಪ್ರದೇಶಗಳಿಗಿಂತಲೂ ಹೆಚ್ಚಿದ್ದು ಅದು ತುಂಬಾ ತೀಕ್ಷ್ಣವಾಗಿದೆ. ನಗರ ಪ್ರದೇಶದ ಶೇಕಡಾ 45 ರಷ್ಟು ಜನರು ಶೇಕಡಾ 4 ರಷ್ಟು ಆಸ್ತಿಪಾಸ್ತಿಗಳನ್ನು ಹೊಂದಿದ್ದು ಆ ಆಸ್ತಿಗಳ ಸರಾಸರಿ ಮೌಲ್ಯ ರೂ. 10.000 ಕ್ಕಿಂತಲೂ ಜಾಸ್ತಿ ಇದೆ. ಇದರಿಂದ ತಿಳಿದುಬರುವುದೇನೆಂದರೆ ಪಟ್ಟಣ ಮತ್ತು ನಗರಗಳಲ್ಲಿ ಸಂಪತ್ತು ಕೆಲವೇ ಕೆಲವು ಜನರಲ್ಲಿ ಕೇಂದ್ರಿಕೃತಗೊಂಡಿರುವವುದು ಸ್ಪಷ್ಟ.



downloaded from: www.kpscvaani.com

ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ ಭಾರತದ 533 ಅತ್ಯಂತ ಶ್ರೀಮಂತ ಉದ್ಯಮಿಗಳ ಆಸ್ತಿಪಾಸ್ತಿಗಳ ಮೌಲ್ಯ 2007 ರ ಆಗಸ್ಟ್ ವೇಳೆಗೆ ರೂ. 12,32,130 ಕೋಟಿಗೇರಿದೆ. ರೂ 1,45,320 ಕೋಟಿ ಮೌಲ್ಯದ ಅಸ್ತಿಪಾಸ್ತಿಗಳನ್ನು ಹೊಂದಿರುವ ಮುಖೇಶ್ ಅಂಬಾನಿ ಭಾರತದ ಉದ್ಯಮಿಗಳ ವಲಯದಲ್ಲಿ ಅತ್ಯುನ್ನತ ಸ್ಥಾನದಲ್ಲಿದ್ದು, ರೂ 97.090 ಕೋಟಿ ಆಸ್ತಿ ಮೌಲ್ಯ ಹೊಂದಿರುವ ಅನಿಲ್ ಅಂಬಾನಿ ಎರಡನೇ ಸ್ಥಾನದಲ್ಲೂ ರೂ 90.821 ಕೋಟಿ ಆಸ್ತಿ ಮೌಲ್ಯ ಹೊಂದಿದ್ದ DLFನ ಕೆ.ಪಿ.ಸಿಂಗ್ ಮೂರನೇ ಸ್ಥಾನದಲ್ಲಿದ್ದರು. ಈಚಿನ ದಿನಗಳಲ್ಲಿ ಸಿನೋಲ್ ಮಿಟಲ್, ಅನಿಲ್ ಅಗರ್ವಾಲ್, ರಮೇಶ್ ಚಂದ್ರ, ಕೆ. ಬಿರ್ಲಾ, ಟಾಟಾ, ಯು.ಬಿ ಯ ವಿಜಯ್ ಮಲ್ಯ. ವಿಪ್ರೋ ಸಂಸ್ಥೆಯ ಅಜೀಂ ಪ್ರೇಮ್ ಜಿ, ಇನ್‌ಫೋಸಿಸ್‌ನ ನಾರಾಯಣಮೂರ್ತಿ ಮುಂತಾದ ಸಾಫ್ಟವೇರ್ ಉದ್ಯಮ ದೊರೆಗಳು ಮತ್ತು ಇತರರು ಸಂಪತ್ತಿನ ಗಳಿಕೆಯಲ್ಲಿ ಅತ್ಯಂತ ಯಶಸ್ವಿಯಾಗಿದ್ದಾರೆ.

UNDP 2013ರ HDI ವರದಿಯ ಮೇರಗೆ 2012 –13 ಅತ್ಯಂತ ಕೆಳಸ್ತರದ ಶೇಕಡ 10 ಜನರು ಆದಾಯದಲ್ಲಿ ಕೇವಲ ಶೇಕಡ 3.6 ರಷ್ಟು ಪಾಲು ಹೊಂದಿದ್ದರೆ ನಂತರದ ಕೆಳಸ್ತರದ ಶೇಕಡ 20 ರಷ್ಟು ಶೇಕಡ 8.1 ರಷ್ಟು ಪಾಲು ಹೊಂದಿದ್ದರು. ಅತ್ಯಂತ ಮೇಲ್‌ಸ್ತರದ ಶೇಕಡ 10 ರಷ್ಟು ಶ್ರೀಮಂತ ಜನರು ಶೇಕಡ 31.1 ರಷ್ಟು ಹಾಗೂ ನಂತರದ ಶೇಕಡ 20 ರಷ್ಟು ಶ್ರೀಮಂತ ಜನರು ಶೇಕಡ 45.3 ರಷ್ಟು ಪಾಲು ಹೊಂದಿದ್ದರು. ಈ ಅವಧಿಯ ಅನುಸೂಚಿ 36.8 ಆಗಿತ್ತು. ವಿಶ್ವಬ್ಯಾಂಕಿನ 2003 ರ ವರದಿಯ ಮೇರೆಗೆ 1997ರ ಸಮೀಕ್ಷೆ ವರ್ಷದಲ್ಲಿ ಅತ್ಯಂತ ಕೆಳಸ್ತರದ ಶೇಕಡ ರಷ್ಟು ಜನರು ಶೇ. ರಷ್ಟು ಆದಾಯಯದ ಪಾಲು ಹೊಂದಿದ್ದರೆ, ಅತ್ಯಂತ ಮೇಲ್ ಸ್ತರದ ಶೇಕಡ ರಷ್ಟು ಜನರು ಶೇಕಡ ಪಾಲು ಹೊಂದಿದ್ದರೆ, ಅತ್ಯಂತ ಮೇಲ್‌ಸ್ತರದ ಶೇಕಡ ಜನರು ಶೇಕಡವಾರು ಪಾಲು ಹೊಂದಿದ್ದರು. ಈ ಅವಧಿಯಲ್ಲಿನ ಅನುಸೂಚಿ 37.8 ಆಗಿತ್ತು.

ಹೀಗೆ ಭಾರತದಲ್ಲಿ ಆದಾಯ ಹಂಚಿಕೆಯಲ್ಲಿ ಅಸಮಾನತೆ ಬಹುತೀಕ್ಷ್ಣವಾಗಿದ್ದು ಶ್ರೀಮಂತರು ಶ್ರೀಮಂತರಾಗುತ್ತಲೇ ಹೋಗುತ್ತಿದ್ದು ಬಡವರು ಬಡವರಾಗುತ್ತಲೇ ಇದ್ದಾರೆ. ಇದೊಂದು ವಾಸ್ತವಿಕ ದುರಂತವಾಗಿದ್ದು ಈ ಪ್ರವೃತ್ತಿಯನ್ನು ತಡೆಯಲು ಸರ್ಕಾರ ಬಹುಬೇಗ ಮುಂದಾಗಬೇಕಿದೆ.

## ಆದಾಯ ಅಸಮಾನತೆಗೆ ಕಾರಣಗಳು :

ಆದಾಯ ಅಸಮಾನತೆ ಭಾರತಕ್ಕೆ ಹೊಸದೇನಲ್ಲ. ಇದು ಬಹಳ ಹಿಂದಿನಿಂದಲೂ ಅಸ್ತಿತ್ವದಲ್ಲಿರುವಂಥಹುದು. ಇದಕ್ಕೆ ಕಾರಣಗಳು ಹಲವಾರು. ಈ ಎಲ್ಲಾ ಕಾರಣಗಳನ್ನು ಕೆಳಗೆ ವಿವರಿಸಲಾಗಿದೆ.

### 1. ಆರ್ಥಿಕ ವ್ಯವಸ್ಥೆ ( Economic System)

ಯಾವುದೇ ಆರ್ಥಿಕ ವ್ಯವಸ್ಥೆ ಬಂದವಾಳಶಾಹಿ ಮಿಶ್ರ ಆರ್ಥಿಕ ವ್ಯವಸ್ಥೆ ಎಂದು ಕರೆಯಲ್ಪಟ್ಟಿದ್ದರೂ ಸಹ ಇದು ವಾಸ್ತವಿಕವಾಗಿ ಬಂಡವಾಳಶಾಹಿ ವ್ಯವಸ್ಥೆಯತ್ತ ವಾಲಿರುವಂತಹುದು. ಭಾರತದ ಆರ್ಥಿಕ



GNANADHARE IAS ACADEMY
downloaded from: www.kpscvaani.com

ವ್ಯವಸ್ಥೆಯಲ್ಲಿ ಕೆಲವೇ ಕೆಲವು ಜನರು ಉತ್ಪಾದನಾಂಗಗಳನ್ನು ಹೆಚ್ಚು ಪ್ರಮಾಣದಲ್ಲಿ ಒಡೆತನದಲ್ಲಿಟ್ಟಿಕೋಂಡಿದ್ದು ಸಂಪತ್ತಿನ ಕೇಂದ್ರೀಕರಣಕ್ಕೆ ಕಾರಣವಾಗಿದ್ದಾರೆ. ಆದ್ದರಿಂದ ಆದಾಯ ಅಸಮಾನತೆ ಅನಿರ್ವಾಯ ಎನಿಸಿದೆ.

## 2. ಖಾಸಗಿ ಆಸ್ತಿಯ ಹಕ್ಕು (Right to Private Property)

ಭಾರತವು ಈ ಮೊದಲೇ ತಿಳಿಸಿದಂತೆ ಒಂದು ಮಿಶ್ರ ಬಂಡವಾಳಷಾಹಿ ಅರ್ಥಿಕ ವ್ಯವಸ್ಥೆ. ಇಲ್ಲಿ ಜನರಿಗೆ ಖಾಸಗಿ ಅಸ್ತಿಹಕ್ಕನ್ನು ನೀಡಲಾಗಿದೆ. ಇದರಿಂದಾಗಿ ಭೂಮಿ, ಕಟ್ಟಡಗಳು, ವಾಹನಗಳು ಮತ್ತು ಉತ್ಪಾದನಾಂಶಗಳು ಹಾಗೂ ಉತ್ಪಾದನಾ ಸಾಧನಗಳು ಖಾಸಗಿ ಒಡೆತನಕ್ಕೆ ಒಳಪಟ್ಟಿವೆ. ಇದರಿಂದಾಗಿ ಸಮಾಜದಲ್ಲಿ ಆಸ್ತಿವಂತರ ಆದಾಯ ಸ್ಥಿರವಾಗಿ ಏರುತ್ತಿದ್ದು ಕಾರ್ಮಿಕರು ಎಂಬ ಎರಡು ಗುಂಪುಗಳು ಒಳಪಟ್ಟಿದೆ. ಇದರಿಂದಾಗಿ ಉಳ್ಳವರು ಮತ್ತು ಇಲ್ಲದಬರೆಂಬ ವರ್ಗಗಳು ಸೃಷ್ಟಿಯಾಗಿವೆ. ಈ ಪರಿಸ್ಥಿತಿಗೆ ಪ್ರಮುಖವಾಗಿ ಈ ಕೆಳಗಿನ ಅಂಶಗಳು ಕಾರಣವಾಗಿವೆ.

- ಭೂ ಹಿಡುವಳಿಯ ಒಡೆತನದಲ್ಲಿರುವ ಅಸಮಾನತೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಸಂಪತ್ತಿನ ಕೇಂದೀಕರಣ
- ಕೈಗಾರಿಕೆ, ವ್ಯಾಪಾರ ಮತ್ತು ಕಟ್ಟಡಗಳ ಖಾಸಗಿ ಒಡೆತನ.
- ಉದ್ಯೋಗಸ್ಥರಲ್ಲಿರುವ ತರಬೇತಿ ಮತ್ತು ವೇತನಗಳಲ್ಲಿನ ಅಸಮಾನತೆ, ಇತ್ಯಾದಿ.

## 3. ಪಿತ್ರಾರ್ಜಿತ ಅಸ್ತಿಯ ಹಕ್ಕು ( The Law of Inheritence )

ಭಾರತದಲ್ಲಿ ಅಸ್ತಿತ್ವದಲ್ಲಿರುವ ಪಿತ್ರಾರ್ಜಿತ ಆಸ್ತಿಯ ಹಕ್ಕು ಆದಾಯ ಅಸಮಾನತೆಯನ್ನು ಹೆಚ್ಚಿಸುತ್ತಿದೆ. ಪಿತ್ರಾರ್ಜಿತ ಆಸ್ತಿಯ ಹಕ್ಕಿನಿಂದಾಗಿ ತಂದೆಯ ಆಸ್ತಿ ಮಕ್ಕಳಿಗೆ ಹೋಗುತ್ತಿದೆ. ಇದರಿಂದಾಗಿ ಬಂಡವಾಳಷಾಹಿಯ ಮಗ ಬಂಡವಾಳಷಾಹಿ, ಕೈಗಾರಿಕೋದ್ಯಮಿಯ ಮಕ್ಕಳು ಕೈಗಾರಿಕೊದ್ಯಮಿಗಳು, ಜಮೀನ್ದಾರರ ಮಗ ಜಮಿನ್ದಾರ, ಕೂಲಿಕಾರನ ಮಗ ಕೂಲಿಕಾರರಾಗುತ್ತಿದ್ದಾರೆ. ಹೀಗಾಗಿ ಆದಾಯ ಅಸಮಾನತೆ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗಿ ಬೆಳೆಯುತ್ತಲೇ ಇದೆ. ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ವಾತಾವರಣದ ವ್ಯತ್ಯಾಸಗಳ ಕಾರಣಗಳಿಂದಾಗಿ ಎಲ್ಲರಿಗೂ ಸಮಾನ ಅವಕಾಶಗಳು ಲಭ್ಯವಾಗುತ್ತಿಲ್ಲ. ಆದ್ದರಿಂದ ಭಾರತದಲ್ಲಿನ ಆದಾಯ ಅಸಮಾನತೆಯು ಪಿತ್ರಾರ್ಜಿತ ಅಸ್ತಿಯ ಹಕ್ಕಿನಿಂದಾಗಿ ಇನ್ನೂ ಬೆಳೆಯುತ್ತಿದ್ದು ಬಡವ ಮತು ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಲೇ ಇದೆ.

## 4. ಏಕಾಸ್ವಾಮ್ಯ ಹತೋಟಿ ( Monopoly Control)

ಕೆಲವು ಜನರು ಕೆಲವು ಉತ್ಪಾದನಾ ಕ್ಷೇತ್ರಗಳಲ್ಲಿ ಏಕಸ್ವಮ್ಯ ಹತೋಟಿ ಹೊಂದಿರುವುದರಿಂದ ಆದಾಯ ಅಸಮಾನತೆ ಹೆಚ್ಚುತ್ತಲಿದೆ. ಬಂಡವಾಳಷಾಹಿ ವ್ಯವಸ್ಥೆ ಸ್ಥಾಪನೆಯಾಯಿತೆಂದರೆ ಏಕಸ್ವಾಮ್ಯ ಬೃಹತ್ ವ್ಯಾಪಾರ – ವ್ಯವಹಾರಗಳು, ಒತ್ತಡದ ಗುಂಪುಗಳು ಮುಂತಾದವು ಸ್ವಯಂಚಾಲಿತವಾಗಿ



downloaded from: www.kpscvaani.com

ಹುಟ್ಟಿಕೊಳ್ಳುತ್ತವೆ. ಇದರಿಂದಾಗಿ ಆದಾಯ ಅಸಮಾನತೆ ಹೆಚ್ಚುತ್ತಾ ಹೋಗುತ್ತದೆಯೇ ಹೊರೆತು ತಗ್ಗುವುದಿಲ್ಲ.

### 5. ಬಡತನ (Poverty)

ಆದಾಯ ಮತ್ತು ಸಂಪತ್ತಿನ ಹಂಚಿಕೆಯಲ್ಲಿನ ಅಸಮಾನತೆಗೆ ಕಾರಣವಾಗುವ ಪ್ರಮುಖ ಅಂಶವೆಂದರೆ ಬಡತನವಾಗಿದೆ. ಬಡತನದ ಕಾರಣದಿಂದಾಗಿ ಜನರು ಸಮಾನ ಅವಕಾಶಗಳನ್ನು ಪಡೆಯುವುದಿಲ್ಲ. ಇದರಿಂದಾಗಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಹೆಚ್ಚುತ್ತಲೇ ಹೋಗುತ್ತದೆ. ಬಡಜನರು ಬಡವರಾಗಿಯೇ ಉಳಿಯುವ ಸಾಧ್ಯತೆಗಳು ಹೆಚ್ಚಿರುತ್ತದೆ. ಬಡತನಕ್ಕೆ ಬಡತನವೇ ಕಾರಣ ಮತ್ತು ಪರಿಣಾಮವಾಗಿರುತ್ತದೆ.

### 6. ಸಂಪತ್ತಿನ ಕೇಂದ್ರೀಯಕರಣ (Concentration of Wealth):

ಭಾರತದಲ್ಲಿ ಸಂಪತ್ತು ಕೆಲವೇ ಕೆಲವು ಜನರ ಕೈಯಲ್ಲಿ ಕೇಂದ್ರೀಕೃತವಾಗಿದೆ, ಆರ್ಥಿಕ ಅಭಿವೃದ್ಧಿಯ ಅತ್ಯಲ್ಪ ಪ್ರಮಾಣದ ಲಾಭಗಳನ್ನು ಕೆಲವೇ ಕೆಲವು ಮಧ್ಯಮ ವರ್ಗದ ಜನರು ಮತ್ತು ಶ್ರೀಮಂತರು ಅನುಭವಿಸುತ್ತಿದ್ದಾರೆ. ಇದರಿಂದಾಗಿ ಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ ಹಾಗೂ ಬಡವರು ಬಡವಾಗಿಯೇ ಉಳಿಯುತ್ತಿದ್ದಾರೆ. ಈ ರೀತಿಯ ಸಂಪತ್ತಿನ ಕೇಂದ್ರೀಕರಣಕ್ಕೆ ಮುಖ್ಯವಾಗಿ ದೋಷಪೂರಿತ ಪರವನಿಗೆ ನೀತಿ, ಅಪ್ರಸ್ತುತ ಕೈಗಾರಿಕರಣ, ಪಿತ್ರಾರ್ಜಿತ ಆಸ್ತಿಯ ಹಕ್ಕು ಮುಂತಾದವು ಕಾರಣವಾಗಿವೆ.

### 7. ತೆರಿಗೆಗಳ್ಳತನ ( Tax Evasion ):

ಭಾರತದಲ್ಲಿ ಆದಾಯ ಅಸಮಾನತೆಗೆ ಕಾರಣವಾಗುತ್ತಿರುವ ಮತ್ತೊಂದು ಅಂಥವೆಂದರೆ ತೆರಿಗೆಗಳ್ಳತನವಾಗಿದೆ , ಶ್ರೀಮಂತ ಮತ್ತು ಮೇಲ್ವರ್ಗದ ಜನರು ಸುಳ್ಳು ಲೆಖನಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ತೆರಿಗೆಯನ್ನು ವಂಚಿಸುತ್ತಿದ್ದರು, ಕಪ್ಪು ಹಣದ ಪ್ರಾಬಲ್ಯ ಹೆಚ್ಚಾಗಿದೆ. ಇದರಿಂದಾಗಿ ಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ.

### 8. ಉತ್ಪಾದನಾ ಸಾಧನಗಳ ಅಸಮರ್ಪಕ ಹಂಚಿಕೆ (mal-distribution of resource)

ಭಾರತದಲ್ಲಿ ಉತ್ಪಾದನಾ ಸಾಧನಗಳು ಸಮಾನವಾಗಿ ಹಂಚಲ್ಪಟ್ಟಿಲ್ಲ. ಭೂಮಿ, ಬಂದವಾಳ, ವ್ಯಾಪಾರ, ವಾಹನಗಳು, ಯಂತ್ರಗಳು, ಕಟ್ಟಡಗಳು ಮುಂತಾದ ಸಾಧನಗಳು ಕೇವಲ ಕೆಲವೇ ಕೆಲವು ಜನರ ಬಳಿ ಉಳಿದುಕೊಂಡಿವೆ. ಇದರಿಂದಾಗಿ ಹೆಚ್ಚಿನ ಪಾಲಿನ ಜನರು ಉತ್ಪಾದನೆಯಲ್ಲಿ ಸಮಾನ ಅವಕಾಶಪಡೆಯುತ್ತಿಲ್ಲ. ತತ್ಪರಿಣಾಮವಾಗಿ ಆದಾಯ ಅಸಮಾನತೆ ಹೆಚ್ಚುತ್ತಿದೆ.



downloaded from: www.kpscvaani.com

### 9. ನಿರುದ್ಯೋಗ (Unemployment )

ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಅರೆ ಉದ್ಯೋಗಗಳು ಆದಾಯ ಅಸಮಾನತೆಯನ್ನು ಉಲ್ಬಣಗೊಳಿಸುತ್ತಿವೆ. ಕೈಗಾರಿಕೀಕರಣ ಅಭಾವ, ಬಂಡವಾಳಸಾಂದ್ರ ತಂತ್ರಜ್ಞಾನದ ಬಳಕೆ, ಅಲ್ಪ ಅಭಿವೃದ್ಧಿ ಮುಂತಾದುವು ವ್ಯಾಪಕ ನಿರುದ್ಯೋಗಕ್ಕೆ ಕಾರಣವಾಗಿದೆ.

### 10.ಹಣದುಬ್ಬರ (Inflation)

ಹಣದುಬ್ಬರ ಮತ್ತು ಬೆಲೆಏರಿಕೆಗಳು ಆದಾಯ ಅಸಮಾನತೆ ಕೊಡುಗೆ ಸಲ್ಲಿಸುತ್ತಿರುವ ಪ್ರಮುಖ ಅಂಶಗಳಾಗಿವೆ. ಬೆಲೆ ಏರಿಕೆಯಿಂದಾಗಿ ಕೆಳವರ್ಗದ ಜನರು ಇನ್ನೂ ಕನಿಷ್ಟ ಮಟ್ಟದ ಜೀವನವನ್ನು ನಡೆಸಬೇಕಾಗಿ ಬಂದರೆ ಶ್ರೀಮಂತರು ಇನ್ನೂ ಹೆಚ್ಚಿನ ಸಂಪತ್ತನ್ನು ಗಳಿಸಿ ಇನ್ನೂ ಶ್ರೀಮಂತರಾಗುತ್ತಿದ್ದಾರೆ.

### 11.ಜನಸಂಖ್ಯಾ ಬೆಳವಣಿಗೆ (Population Growth )

ಆದಾಯ ಅಸಮಾನತೆಗೆ ಕಾರಣವಾಗುತ್ತಿರುವ ಇನ್ನೊಂದು ಪ್ರಮುಖ ಅಂಶವೆಂದರೆ ಜನಸಂಖ್ಯಾ ಬೆಳವಣಿಗೆಯಾಗಿದೆ. 1950–51 ರಿಂದ ಸತತವಾಗಿ ಜನಸಂಖ್ಯೆ ಬೆಳೆಯುತ್ತಲೇ ಸಾಗಿದೆ. ಅದೂ ಕೆಳವರ್ಗದ ಜನರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ ಅವರು ಇನ್ನೂ ಬಡತನದ ವಿಷವೃತ್ತಕ್ಕೆ ತಳ್ಳಲ್ಪಟ್ಟಿದ್ದಾರೆ.

### 12.ಅಲ್ಪ ಉತ್ಪಾದಕತೆ ( Low Productivity )

ಭಾರತೀಯ ಕಾರ್ಮಿಕ ಉತ್ಪಾದಕತೆ ತುಂಬಾ ಕಡಿಮೆ ಪ್ರಮಾಣವಿದ್ದು, ಅಲ್ಪ ಉತ್ಪಾದಕತೆಯು ಕಾರ್ಮಿಕರ ಆದಾಯವನ್ನು ಕಡಿಮೆ ಪ್ರಮಾಣದಲ್ಲಿರಿದುತ್ತದೆ. ಇದರಿಂದಾಗಿ ಅವರು ಬಡವರಾಗಿಯೇ ಉಳಿಯಬೇಕಾಗುತ್ತದೆ.

### 13.ಅತ್ಯಲ್ಪ ಅಭಿವೃದ್ಧಿ (Inadequate Development)

ಕಳೆದ ಆರು ದಶಕಗಳ ಯೋಜಿತ ಅಭಿವೃದ್ಧಿ ಕಾಲದಲ್ಲಿ ಸಾಧಿಸಿರುವ ಆರ್ಥಿಕ ಅಭಿವೃದ್ಧಿ ಏನೇನೂ ಸಾಲದು. ಅಲ್ಪ ಪ್ರಮಾಣದ ಅಭಿವೃದ್ಧಿಯ ಲಾಭಗಳನ್ನು ಶ್ರೀಮಂತ ವರ್ಗದವರು ಕಬಳಿಸಿದ್ದಾರೆ. ಇದರಿಂದಾಗಿ ಅದಾಯ ಅಸಮಾನತೆಯ ಅಂತರ ಇನ್ನೂ ಹೆಚ್ಚಿದೆ.

ಹೀಗೆ ಅನೇಕ ಕಾರಣಗಳು ಭಾರತದಲ್ಲಿ ತೀಕ್ಷ್ಣ ಆದಾಯ ಅಸಮಾನತೆಗೆ ಕಾರಣವಾಗಿವೆ. ಈ ಎಲ್ಲಾ ಅಂಶಗಳ ಸಂಯುಕ್ತ ಕಾರ್ಯಾಚರಣೆಯ ಫಲವೇ ಆದಾಯ ಅಸಮಾನತೆ.



downloaded from: www.kpscvaani.com

## ಆದಾಯ ಅಸಮಾನತೆಯ ಪರಿಣಾಮಗಳು( Effects of Income Inequalities) :

ನಿರಂತರವಾಗಿ ಮುಂದುವರಿಯುತ್ತಿರುವ ಅದಾಯ ಅಸಮಾನತೆಯು ಅನೇಕ ದುಷ್ಪರಿಣಾಮಗಳಿಗೆ ದಾರಿಮಾಡುತ್ತದೆ. ಅದಾಯ ಅಸಮಾನತೆಯ ಅನಿಷ್ಟಗಳು ಕೆಳಕಂಡಂತಿವೆ.

1. ಆದಾಯ ಅಸಮಾನತೆಯು ಉಳ್ಳವರು ಮತ್ತು ಇಲ್ಲದವರು ಎಂಬ ವರ್ಗಗಳನ್ನು ಸೃಷ್ಟಿಸಿ ವರ್ಗ ಸಂಘರ್ಷಕ್ಕೆ ದಾರಿಮಾಡುತ್ತದೆ.
2. ಆದಾಯ ಅಸಮಾನತೆಯು ಬಡಜನರ ಶೋಷಣೆಗೆ ದಾರಿಮಾಡುತ್ತದೆ.
3. ಆದಾಯ ಅಸಮಾನತೆ ರಾಜಕೀಯ ವ್ಯವಸ್ಥೆಯನ್ನು ಭ್ರಷ್ಟಗೊಳಿಸುತ್ತದೆ.
4. ಸಾಮಾಜಿಕ ಅಸಮಾನತೆ, ಅನ್ಯಾಯ ಮತ್ತು ದುಷ್ಕೃತ್ಯಗಳಿಗೆ ಎಡೆಮಾಡುತ್ತದೆ.
5. ಆದಾಯ ಅಸಮಾನತೆ ರಾಜಕೀಯ ಪ್ರಜಾಪ್ರಭುತ್ವವನ್ನು ಕೇವಲ ಒಂದು ಭ್ರಮೆಯನ್ನಾಗಿ ಮಾರ್ಪಡಿಸುತ್ತದೆ.
6. ಆದಾಯ ಅಸಮಾನತೆ ವ್ಯರ್ಥ ಅನುಭೋಗಕ್ಕೆ ದಾರಿಮಾಡುತ್ತದೆ.
7. ಆದಾಯ ಅಸಮಾನತೆ ಆರ್ಥಿಕ ಅಭಿವೃದ್ಧಿಯನ್ನು ತಡೆಹಿಡಿಯುತ್ತದೆ.
8. ಆದಾಯ ಅಸಮನತೆ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ ಮತ್ತು ಪೋಲಾಗುವಿಕೆಗೆ ಕಾರಣವಾಗುತ್ತದೆ.
9. ಆದಾಯ ಅಸಮಾನತೆ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳ ಕೇಂದ್ರೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ.
10. ಮಾನವ ಬಂಡವಾಳ ಆದಾಯ ಅಸಮಾನತೆಯಿಂದ ವ್ಯರ್ಥವಾಗುತ್ತದೆ.
11. ಆದಾಯ ಅಸಮಾನತೆ ಅತ್ಯಾವಶ್ಯಕ ಸಾಮಗ್ರಿಗಳ ಕೊರತೆಗೆ ಕಾರಣವಾಗುತ್ತದೆ.

ಹೀಗೆ ಆದಾಯ ಅಸಮಾನತೆ ಅನೇಕ ದುಷ್ಪರಿಣಾಮಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಅದನ್ನು ನಿಯಂತ್ರಿಸುವುದು ಒಳ್ಳೆಯದು.

## ಅಸಮಾನತೆಯ ನಿವಾರಣೋಪಾಯಗಳು : ಸರ್ಕಾರದ ಕ್ರಮ :

ಆದಾಯ ಮತ್ತು ಸಂಪತ್ತಿನ ಹಂಚಿಕೆಯಲ್ಲಿ ಕಂಡುಬರುತ್ತಿರುವ ಅಸಮಾನತೆಯನ್ನು ನಿವಾರಿಸುವುದು ಭಾರತ ಸರ್ಕಾರದ ಧ್ಯೇಯೋದ್ದೇಶಗಳಲ್ಲಿ ಒಂದಾಗಿದೆ. ಇದನ್ನು ಪ್ರಮುಖವಾಗಿ ಆದಾಯ ಹಂಚಿಕೆ ಮತ್ತು ವೃದ್ಧಿಯ ಕ್ರಮಗಳ ಮೂಲಕ ನಿವಾರಿಸಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ : ಭೂ ಸುಧಾರಣೆ, ಉದ್ಯೋಗ ನಿರ್ಮಾಣ, ವೇತನ ನೀತಿ, ಬೆಲೆ ನೀತಿ, ಸಾಮಾಜಿಕ ಭದ್ರತೆ, ಜನಸಂಖ್ಯಾ ನಿಯಂತ್ರಣ, ಶ್ರಮಸಾಂದ್ರ ತಂತ್ರಜ್ಞಾನದ ಅಳವಡಿಕೆ, ಖಜಾನೆ ನೀತಿ, ಸಂಪತ್ತಿನ ಕೇಂದ್ರೀಕರಣನ್ನು ಕಡಿಮೆಗೊಳಿಸುವುದು, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮುಂತಾದ ಕ್ರಮಗಳು ಸೇರಿವೆ.



downloaded from: www.kpscvaani.com

ಭಾರತದಲ್ಲಿ ಆದಾಯ ಅಸಮಾನತೆಯ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ಚರ್ಚಿಸುವುದು ಈ ಹಿನ್ನೆಲೆಯಲ್ಲಿ ಸೂಕ್ತವೆನಿಸುತ್ತದೆ. ಆರ್ಥಿಕ ಯೋಜನೆಗಳ ಪ್ರಾರಂಭಿಕ ಹಂತದಲ್ಲಿ ಸರ್ಕಾರದ ನಿಲುವು ಭಿನ್ನವಾಗಿದ್ದುದನ್ನು ನೆಹರೂರವರ ಹೇಳಿಕೆಯಲ್ಲಿ ತಿಳಿದುಕೊಳ್ಳಬಹುದಾಗಿದೆ.

ನೆಹರು ಅವರ ಪ್ರಕಾರ "ಬಡರಾಷ್ಟ್ರದಲ್ಲಿ ಬಡತನವೊಂದೇ ವಿತರಣೆಗಿರುವುದು". ಆದ್ದರಿಂದ ಪ್ರಾರಂಭದಲ್ಲಿ ಅದಾಯ ಮರುಹಂಚಿಕೆಯ ವಿಚಾರಕ್ಕೆ ಸರ್ಕಾರ ಅಷ್ಟೇನೂ ಪ್ರಾಮುಖ್ಯತೆ ನೀಡಲಿಲ್ಲ ತ್ವರಿತ ಅರ್ಥಿಕಾಭಿವೃದ್ಧಿಯನ್ನು ಸಾಧಿಸುವುದೇ ಸರ್ಕಾರದ ಅದ್ಯ ಗುರಿಯಾಗಿತ್ತು. 1960ರ ದಶಕದ ನಂತರ ಸರ್ಕಾರ ಆಧಾಯ ಅಸಮಾನತೆಯನ್ನು ತಗ್ಗಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಅವುಗಳಲ್ಲಿ ಪ್ರಮುಖ ಕ್ರಮಗಳು ಮುಂದಿನಂತಿವೆ.

## 1. ಭೂ ಸುಧಾರಣೆ

ಭಾರತದಲ್ಲಿ ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು ಕೃಷಿಯನ್ನೇ ಪ್ರಮುಖ ಕಸುಬನ್ನಾಗಿ ಅಳವಡಿಸಿಕೊಂಡಿರುವುದರಿಂದ ಆದಾಯ ಅಸಮಾನತೆಯನ್ನು ತಗ್ಗಿಸಲು ಭೂ ಸುಧಾರಣೆ ಕ್ರಮವನ್ನು ಅನುಸರುವುದು ಸೂಕ್ತವೆನಿಸುತ್ತದೆ. 1950ರಲ್ಲಿ ಜಮೀನ್ದಾರಿ ಪದ್ಧತಿಯ ರದ್ಧತಿ, 1970 ರ ದಶಕದ ಭೂ ಒಡೆತನದ ಮೇಲಿನ ಮಿತಿ, ಉಳುವವನೇ ಹೊಲದೊಡೆಯ ಎಂಬ ನೀತಿಯ ಜಾರಿ ಮುತಾದವು ಭೂ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಆದರೂ ಸಹ ಇನ್ನೂ ಶೆಕಡ 40ರಷ್ಟು ಭೂಮಿ ಶೇಕಡ 5ರಷ್ಟು ಜನರ ಒಡೆತನದಲ್ಲಿದೆ. ಅದ್ದರಿಂದ ಭೂ ಒಡೆತನದ ವಿಚಾರದಲ್ಲಿ ಸರ್ಕಾರ ದೃಢ ನಿಲುವು ತಾಳಬೇಕಾಗಿದೆ. ಕೃಷಿ ಭೂಮಿಯನ್ನು ಮರುವಿತರಣೆ ಮಾಡುವುದರಿಂದ ಅಸಮಾನೆತೆಯ ಪ್ರಮಾಣವನ್ನು ತಗ್ಗಿಬಹುದಾಗಿದೆ.

## 2. ಏಕಸ್ವಾಮ್ಯ ಹತೋಟಿಯ ನಿಯಂತ್ರಣ

ಆದಾಯ ಅಸಮಾನತೆಯನ್ನು ತೊಲಗಿಸಲು ಏಕಸ್ವಾಮ್ಯ ಹತೋಟಿಯನ್ನು ನಿಯಂತ್ರಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯ ಬಂದು ಎರಡು ದಶಕಗಳ ಕಾಲ ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳಲಿಲ್ಲ. 1969ರಲ್ಲಿ "ಏಕಸ್ವಾಮ್ಯ ಮತ್ತು ನಿಯಂತ್ರಿತ ವ್ಯಾಪಾರ ಆಚರಣೆಯ ಕಾನೂನನ್ನು" ಜಾರಿ ಮಾಡಲಾಯಿತು. ಸರ್ಕಾರ ಕೆಲವೇ ಜನರ ಕೈಲಿ ಸಂಪತ್ತು ಕೇಂದ್ರೀಕರಣವಾಗುವುದನ್ನು ತಡೆಯಲು ಹಾಗೂ ಸಣ್ಣ ಉದ್ದಿಮೆದಾರರ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ಈ ಕಾನೂನನ್ನು ರಚಿಸಿತು.

## 3. ಉದ್ಯೋಗ ಮತ್ತು ವೇತನ ನೀತಿ

ಉದ್ಯೋಗ ಸೃಷ್ಟಿ ಮತ್ತು ಪರಿಣಾಮಕಾರಿ ವೇತನ ನೀತಿಯ ಆದಾಯ ಅಸಮಾನತೆಯ ನಿವಾರಣೆಗೆ ಅತ್ಯಾವಶ್ಯಕ. ನಾಲ್ಕನೇ ಯೋಜನೆಯಿಂದಿಚೆಗೆ ಗ್ರಾಮೀಣ ಉದ್ಯೋಗ ಯೋಜನೆ, ಬರಗಾಲ ಪ್ರದೇಶ ಅಭಿವೃದ್ಧಿ ಯೋಜನೆ, ಸ್ವಉದ್ಯೋಗ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ,



downloaded from: www.kpscvaani.com

ಜವಹರ್ ರೋಜ್‌ಗಾರ್ ಯೋಜನೆ ಮುಂತಾದ ಯೋಜನೆಗಳನ್ನು ಕಾರ್ಯಗತಗೊಳಿಸಲಾಯಿತು. ಸಂಘಟಿತ ವಲಯದ ಕಾರ್ಮಿಕರಿಗೆ ಸರಿಹೊಂದುವಂತಹ ವೇತನ ನೀತಿಯನ್ನು ಪ್ರಕಟಿಸಲಾಗಿದೆಯಾದರೂ ಅಸಂಘಟಿತ ಕಾರ್ಮಿಕರಿಗೆ ಅನುಕೂಲವಾಗುವಂತಹ ವೇತನ ನೀತಿಯನ್ನು ಪ್ರಕಟಿಸಲಾಗಿಲ್ಲ. ಕೆಲವು ಪ್ರಕಟಿತ ನೀತಿಗಳನ್ನು ಕಾರ್ಯಗತಗೊಳಿಸುವುದು ಕಷ್ಟವಾಗುತ್ತಿದೆ. ಈತ್ತೀಚಿನ ದಿನಗಳಲ್ಲಿ ಮುಂತಾದ ನೂತನ ಯೋಜನೆಗಳು ಜಾರಿಯಲ್ಲಿವೆ.

## 4. ಸಾಮಾಜಿಕ ಭದ್ರತೆಗಳು

ಭಾರತದಲ್ಲಿ ಅನೇಕ ಸಾಮಾಜಿಕ ಭದ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ ಅಪಘಾತ ಪರಿಹಾರ ಮತ್ತು ವಿಮೆ, ಹೆರಿಗೆ ಅನುಕೂಲ ಸೌಲಭ್ಯಗಳು, ಉದ್ಯೋಗಿಗಳ ಭವಿಷ್ಯ ನಿಧಿ, ಆಸ್ಪತ್ರೆ ಸೌಲಭ್ಯಗಳು, ನಿರುದ್ಯೋಗ ಭತ್ಯೆ, ವಿಧವಾ ವೇತನ, ವೃದ್ಧಾಪ್ಯವೇತನ, ಅಂಗವಿಕಲ ವೇತನ ಮುಂತಾದುವುಗಳು, ಆದರೂ ಸಹ ಅಸಂಘಟಿತ ವಲಯದ ಜನ್ರಿಗೆ ಸಾಕಷ್ಟು ಸೌಲಭ್ಯಗಳು ಲಭ್ಯವಿಲ್ಲವಾಗಿದೆ.

## 5. ಕನಿಷ್ಠ ಅವಶ್ಯಕತೆಯ ಯೋಜನೆ

5ನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಕನಿಷ್ಟ ಅವಶ್ಯಕತೆಯ ಯೋಜನೆಯನ್ನು ಜಾರಿಗೆ ತರಲಾಗಿದ್ದು ಇದನ್ನು ವ್ಯಾಪಕವಾಗಿ ಕಾರ್ಯಗತಗೊಳಿಸಲಾಗಿತ್ತಿದೆ. ಇದರ ಮುಖ್ಯ ಉದ್ದೇಶ ಬಡತನ ಮತ್ತು ಅಸಮಾನತೆಯನ್ನು ತೊಲಗಿಸುವುದಾಗಿದೆ. ಇತ್ತೀಚಿನ ಅಂತ್ಯೋದಯ ಅನ್ನ ಯೋಜನೆ ಇನ್ನೊಂದು ಇಂತಹ ಕಾರ್ಯಕ್ರಮವಾಗಿದೆ.

## 6. ಗ್ರಾಮೀಣ ಬಡಜನರಿಗೆ ಕಾರ್ಯಕ್ರಮಗಳು

ಗ್ರಾಮೀಣ ಬಡಜನರ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಸಂಪನ್ಮೂಲ ಮತ್ತು ಆದಾಯ ಅಭಿವೃದ್ಧಿಯೋಜನೆ, ವಿಶೇಷ ವಲಯ ಅಭಿವೃದ್ಧಿ ಯೋಜನೆ, ಉದ್ಯೋಗ ವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಗಿದೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಉದ್ಯೋಗ ಭರವಸೆ ಯೋಜನೆ, ವಿಶೇಷ ಘಟಕ ಯೋಜನೆ ಮುಂತಾದುವುಗಳನ್ನೂ ಜಾರಿಗೆ ತರಲಾಯಿತು. ಇತ್ತೀಚೆಗೆ ಜಾರಿಗೆ ತರಲಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ ಗಾರ್ ಯೋಜನೆ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಮುಂತಾದವು ಕೆಲ ಮಹತ್ವದ ಉದ್ಯೋಗ ದೃಢೀಕರಣ ಯೋಜನೆಯಾಗಿವೆ.

## 7. ಬೆಲೆ ನಿತಿ

ಬಡಜನರಿಗೆ ಅನುಕೂಲವಾಗುವಂತಹ ದ್ವಿಮುಖ ಬೆಲೆ ನೀತಿಯನ್ನು ಜಾರಿಗೆ ತರಲಾಯಿತು. ಬಡಜನರಿಗೆ ಅತ್ಯಾವಶ್ಯಕ ಸಾಮಗ್ರಿಗಳನ್ನು ಕಡಿಮೆ ಬೆಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗಿತ್ತಿದೆ. ರೈತರಿಗೆ ಕಮ್ಯುನಿಷ್ಟ್ ಬೆಂಬಲ ಬೆಲೆಯನ್ನು ಘೋಷಿಸಲಾಗುತ್ತಿದೆ.



downloaded from: www.kpscvaani.com

### 8. ಜನಸಂಖ್ಯಾ

ಆದಾಯ ಅಸಮಾನತೆ ಮತ್ತು ಬಡತನವನ್ನು ಹೋಗಲಾಡಿಸಲು ಜನಸಂಖ್ಯಾ ಹತೋಟಿ ಬಹಳ ಮುಖ್ಯ. ಸರ್ಕಾರ ಜನಸಂಖ್ಯ ಹತೋಟಿಗಾಗಿ ಸಣ್ಣ ಕುಟುಂಬ ವ್ಯವಸ್ಥೆ, ಕುಟುಂಬ ಯೋಜನಾ ಪದ್ಧತಿ, ಜನಸಂಖ್ಯಾ ನಿಯಂತ್ರಣಕ್ಕೆ ಅನೇಕ ಉತ್ತೇಜಕಗಳನ್ನು ನೀಡವುದು ಗರ್ಭಪಾತವನ್ನು ಸಕ್ರಮಗೊಳಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೋಂಡಿದೆ.

### 9. ಖಜಾನೆ ನೀತಿ

ಆದಾಯ ಅಸಮಾನತೆಯನ್ನು ಹೋಗಲಾಡಿಸಲು ಪ್ರಗತಿ ಪರ ಖಜಾನೆ ನೀತಿ ಅನುಸರಿಸುವುದು ಬಹಳ ಅವಶ್ಯಕ. ಪ್ರಗತಿಪರ ತೆರಿಗೆ ನೀತಿಯ ನಿರೂಪಣೆ, ನೇರ ತೆರಿಗೆಗಳಿಗೆ ಪ್ರಾಮುಖ್ಯತೆ ನೀಡುವುದು, ಕಪ್ಪು ಹಣದ ಹತೋಟಿ, ಪ್ರಗತಿಪರ ಸಾರ್ವಜನಿಕ ವೆಚ್ಚನೀತಿ, ನಗರ ಸಮಿತಿಯ ಹೇರಿಕೆ ಮುಂತಾದ ಕ್ರಮಗಳನ್ನು ಸರ್ಕಾರ ಕೈಗೋಂಡಿದೆ. ಅದರೂ ಸಹ ಈ ನಿಟ್ಟಿನಲ್ಲಿ ಅಂತಹ ಪ್ರಗತಿ ಕಂಡುಬಂದಿಲ್ಲ.

### 10.ಹಿಂದುಳಿದ ಪ್ರದೇಶಗಳ ಅಭಿವೃದ್ಧಿ

ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ರಿಯಾಯಿತಿಗಳನ್ನು ನೀಡುವುದರ ಮೂಲಕ ಈ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಗಮನಹರಿಸಲಾಗಿದೆ. ಅಲ್ಲದೆ ಈ ಪ್ರದೇಶಗಳಲ್ಲಿ ಕೃಷಿ ಅಭಿವೃದ್ಧಿ ವಿಶೇಷ ಪ್ರಾಶಸ್ತ್ಯ ನೀಡಲಾಗಿದೆ. ಇದರಿಂದಾಗಿ ಆದಾಯ ಅಸಮಾನತೆ ತಗ್ಗಬಹುದೆಂದು ನಿರೀಕ್ಷಿಸಲಾಗಿದೆ.

ಕಳೆದ ಮೂರು ದಶಕಗಳಲ್ಲಿ ಸರ್ಕಾರ ಜಾರಿಗೆ ತಂದ ವ್ಯಾಪಕ ಕಾರ್ಯಕ್ರಮಗಳು ಆದಾಯ ಅಸಮಾನತೆಯ ಮೇಲೆ ಕನಿಷ್ಟ ಪರಿಣಾಮ ಬೀರಲೂ ಯಶಸ್ವಿಯಾಗಿಲ್ಲ. ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಹೆಚ್ಚುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಖಾಸಗಿ ಆಸ್ತಿಯ ಹಕ್ಕಿನ ರದ್ದತಿ ಮತ್ತು ಪಿತ್ರಾರ್ಜಿತ ಆಸ್ತಿ ಹಕ್ಕಿನ ರದ್ದತಿಗಳು ಜಾರಿಗೆ ಬಂದ ಹೊರತೆ ಆದಾಯ ಅಸಮಾನತೆ ಕಣ್ಮರೆಯಾಗುವುದಿಲ್ಲ ಆದರೆ ಇಂತಹ ತೀವ್ರ ಕ್ರಮಗಳನ್ನು ಜಾರಿಗೆ ತರಲು ಯಾವ ಸರ್ಕಾರಕ್ಕೆ ತಾನೆ ಧೈರ್ಯವಿದೆ. ಇನ್ನುಳಿದ ಏಕೈಕ ದಾರಿ ಎಂದರೆ ಹಿಂದುಳಿದ ಮತ್ತು ಬಡಜನರು ತಮ್ಮೊಳಗಿನ ಎಲ್ಲ ಭೇಧಗಳನ್ನು ಮರೆತು ಒಗ್ಗಟ್ಟಾಗಿ ಮತ್ತು ಸಂಘಟಿತರಾಗಿ ಸರ್ಕಾರದ ಮೇಲೆ ಒತ್ತಡ ಹೇರುವುದು ಮತ್ತು ತಮ್ಮ ಹಕ್ಕುಗಳಿಗಾಗಿ ಸಂಘಟಿತ ಹೋರಾಟ ನಡೆಸುವುದಾಗಿದೆ.



downloaded from: www.kpscvaani.com

## ಭಾರತದಲ್ಲಿ ಬಡತನ :–

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಡತನ ಒಂದು ಗಂಭೀರ ಸಮಸ್ಯೆಯಾಗಿದೆ. ಅದು ಕೇವಲ ಅರ್ಥಿಕ ವಿಚಾರವಾಗಿರದೆ ಮಾನವ ಪರಿಸ್ಥಿತಿಯಾಗಿದೆ. ಬಡತನ ನೋವು, ಹಸಿವು, ನರಳುವಿಕೆ ಮತ್ತು ವಿಚಾರವಾಗಿದರೆ ಮಾನವ ಪರಿಸ್ಥಿತಿಯಾಗಿದೆ. ಭಾರತದಲ್ಲಿ ಬಡತನ ಎಂಬುದು ಒಂದು ಜ್ವಲಂತ ಸಮಸ್ಯೆಯಾಗಿದ್ದು ಅದು ಇತರೆ ಹಿಂದುಳಿದ ರಾಷ್ಟ್ರಗಳಂತೆ ಭಾರತವನ್ನು ಹತಾಶೆಯ ಪರಿಸ್ಥಿತಿಗೆ ತಳ್ಳಿದೆ. ಅನಕ್ಷರತೆ, ಹಸಿವು, ನೀವು, ನರಳುವಿಕೆ, ಪೌಷ್ಟಿಕಾಂಶದ ಕೊರತೆ ಇವುಗಳು ಭಾರತದಲ್ಲಿ ಸಾಮಾನ್ಯ ಪರಿಸ್ಥಿತಿಗಳಾಗಿವೆ. ಹೊಟ್ಟೆ ಬಿರಿಯುವಷ್ಟು ತಿಂದು ಕೊಬ್ಬಿರುವ ಅಲ್ಪ ಸಂಖ್ಯೆಯ ಜನರು ಒಂದು ಕಡೆಯಾದರೆ ದಿನಕ್ಕೆ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದ ಅದೆಷ್ಟೋ ಕೋಟಿ ಜನರಿಂದ ಕೂಡಿರುವ ದ್ವಂದ್ವ ಆರ್ಥಕ ವ್ಯವಸ್ಥೆ ಭಾರತದ್ದಾಗಿದೆ. ಸ್ವಾತಂತ್ರ್ಯ ಬಂದು ಐದು ದಶಕಗಳು ಪೂರ್ಣಗೊಂಡಿದ್ದರೂ ಬಡತನ ಇಷ್ಟೊಂದು ಅಗಾದ ಪ್ರಮಾಣದಲ್ಲಿರುವುದು ಆಂತಕದ ಪರಿಸ್ಥಿಯಾಗಿದೆ.

## ಬಡತನದ ಪರಿಕಲ್ಪನೆ ಮತ್ತು ಬಡತನ ರೇಖೆ :

ಬಡತನ ಎಂಬ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭದ ಕೆಲಸವಲ್ಲ ಬಡತನವೆಂಬುದು ಜೀವನದ ಅತ್ಯಾವಶ್ಯಕ ವಸ್ತುಗಳನ್ನು ಪಡೆಯಲಾಗದ ಒಂದು ಹತಾಶೆಯ ಪರಿಸ್ಥಿತಿಯಾಗಿದೆ. ಬಡತನ ಒಂದು ಸಾಪೇಕ್ಷ ವಿಷಯವಾಗಿದ್ದು ಅದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗಿದೆ. ವಿಸ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ ಮಹಾನಿರ್ದೇಶ ಲಾರ್ಡ್ ಬಾಯಿಡಾರ್ ಅವರು 1945ರಲ್ಲಿ ಮೊದಲಬಾರಿಗೆ ಬಡತನದ ರೇಖೆಯನ್ನು ವ್ಯಾಖ್ಯಾನಿಸಿದರು. ಅವರ ಪ್ರಕಾರ ಒಬ್ಬ ವ್ಯಕ್ತಿ ಒಂದು ದಿನಕ್ಕೆ 2300 ಕ್ಕಿಂತಲೂ ಕಡಿಮೆ ಕ್ಯಾಲೊರಿ ಆಹಾರವನ್ನು ಸೇವಿಸುತ್ತಿದ್ದಾನೆ ಆತ ಬಡತನ ರೇಖೆಗಿಂತಲೂ ಕೆಳಗಿದ್ದಾನೆಂದು ಪರಿಗಣಿಸಬೇಕಾಗುತ್ತದೆ.

ಭಾರತದ ಯೋಜನಾ ಅಯೋಗವು ಬಡತನ ರೇಖೆಯನ್ನು ಪೌಷ್ಟಿಕಾಂಶಗಳ ಅವಶ್ಯಕತೆಯ ಆಧಾರದ ಮೇಲೆ ವ್ಯಾಖ್ಯಾನಿಸಿತು. ಯೋಜನಾ ಆಯೋಗದ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ 2400 ಕ್ಯಾಲರಿ ಆಹಾರ ಮತ್ತು ಪಟ್ಟಣಗಳಲ್ಲಿ 2100 ಕ್ಯಾಲರಿ ಆಹಾರಕ್ಕಿಂತಲೂ ಕಡಿಮೆ ಆಹಾರ ಅನುಭೋಗಿಸುತ್ತಿರುವವರು ಬಡತನ ರೇಖೆಗಿಂತಲೂ ಕೆಳಗಿರುವವರು. ಪ್ರೋ. ಗಾಡ್ಗೀಳ್ ಡಾ॥ ವಿ.ಕೆಆರ್.ವಿ.ರಾವ್, ಡಾ॥ ಪಿ. ಎಸ್. ಲೋಕನಾಥನ್, ಡಾ॥ ಗಂಗೂಲಿ ಮತ್ತು ಅಶೋಕ್ ಮೆಹತಾ ಅವರನ್ನೊಳಗೊಂಡ ಕಾರ್ಯಕಾರಿ ತಂಡವು ವರ್ಷಕ್ಕೆ ಖಾಸಗಿ ಅನುಭೋಗಕ್ಕೆ ರೂ. 240ಕ್ಕಿಂತಲೂ ಕಡಿಮೆ ಹಣ ಖರ್ಚುಮಾಡುವವರು ಬಡಜನರು ಎಂದು ತೀರ್ಮಾನಿಸಿತು. ಈ ಅಂದಾಜಿನ ಪ್ರಕಾರ ದಿನವೊಂದಕ್ಕೆ 67 ಪೈಸೆಗಿಂತಲೂ ಕಡಿಮೆ ಅನುಬೋಗ ವೆಚ್ಚ ಮಾಡುವವರು ಬಡಜನರು, ನಾಲ್ಕನೇ ಪಂಚವಾರ್ಷಿಕ ಯೋಜನೆಯು ತಿಂಗಳ ಅನುಭೋಗದ ವೆಚ್ಚದ ಮಿತಿಯನ್ನು ರೂ. 20 ಕ್ಕೂ(1960–61ರ ಬೆಲೆಯಲ್ಲಿ), ಐದನೇ ಯೋಜನೆ ರೂ.40.6 ಕ್ಕೂ ( 1972 – 73ರ ಬೆಲೆಯಲ್ಲಿ), ಆರನೇ ಯೋಜನೆಯು ರೂ. 51.3ಗ್ರಾಮೀಣ ಪ್ರದೇಶಕ್ಕೂ ಮತ್ತು ರೂ. 59.7 ನಗರ ಪ್ರದೇಶಗಳಿಗೂ (1979 – 80 ರ ಬೆಲೆಯಲ್ಲಿ ) ಹೆಚ್ಚಿಸಿದವು.



downloaded from: www.kpscvaani.com

ಒಟ್ಟಿನಲ್ಲಿ ಹೇಳುವುದಾದರೆ ದಿನಕ್ಕೆ ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ ಜನರು ಬಡಜನರಾಗುತ್ತಾರೆ. ಅಂದರೆ ಜೀವನದ ಅತ್ಯಾವಶ್ಯಕಗಳಾವುವು ಎಂಬುದನ್ನು ನಿರ್ಧರಿಸುವುದು ಕಷ್ಟದ ವಿಚಾರವಾದರೂ ಆಹಾರ, ಬಟ್ಟೆ, ವಸತಿ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆಯನ್ನು ಅನುಭವಿಸುತ್ತಿರುವವರು ಬಡವರೆನಿಸಿಳ್ಳುತ್ತಾರೆ. ಇದರಿಂದಾಗಿ ಈ ವರ್ಗದ ಜನರ ಆರೋಗ್ಯ ಮತ್ತು ದಕ್ಷತೆಯ ಅಂಶಗಳು ಹಾನಿಗೊಳಗಾಗುತ್ತವೆ. ಮನುಷ್ಯವೆಂಬ ಪ್ರಾಣಿ ಬದುಕಲು ಬೇಕಾದ ಕನಿಷ್ಟ ಪೌಷ್ಟಿಕಾಂಶಗಳನ್ನು ಪಡೆಯಲು ಬೇಕಾದ ಆಹಾರವನ್ನು ಸೇವಿಸಲು ಸಾಧ್ಯವಾಗದ ಜನರು ಬಡತನ ರೇಖೆಗಿಂತ ಕೆಳಗಿನವರಾಗುತ್ತಾರೆ.

## ಬಡತನಕ್ಕೆ ಕಾರಣಗಳು :

ಭಾರತದಲ್ಲಿ ಬಡತನಕ್ಕೆ ಹಲವಾರು ರೀತಿಯ ಕಾರಣಗಳಿವೆ ಅವುಗಳಲ್ಲಿ ಪ್ರಮುಖವಾದುವುಗಳನ್ನು ಕೆಳಗೆ ಚರ್ಚಿಸಲಾಗಿದೆ.

### .1. ಮಿತಿಮೀರಿದ ಜನಸಂಖ್ಯೆ

ಭಾರತದಲ್ಲಿ ಜನಸಂಖ್ಯ ಬೆಳೆಯುತ್ತಿರುವ ದರವು ಅರ್ಥಿಕಾಭಿವೃದ್ಧಿ ದರಕ್ಕಿಂತಲೂ ಅಧಿಕವಾಗಿದೆ. ಇದರಿಂದ ಜೀವನ ಮಟ್ಟದಲ್ಲಿ ಸುಧಾರಣೆಯಾಗುತ್ತಿಲ್ಲ. 1951–61ರ ಧಶಕದಲ್ಲಿ ಶೇಕಡ 21.98ರ ದಶದಲ್ಲಿ ಶೇಕಡಾ 23.50, 1971–81ರ ದಶಕದಲ್ಲಿ ಢೇ.21.34ರ ದರದಲ್ಲಿ ಜನಸಂಖ್ಯೆ ಏರಿದೆ ಇಷ್ಟೊಂದು ಅಗಾದ ಪ್ರಮಾಣದಲ್ಲಿ ಏರುತ್ತಿರುವ ಜನಸಂಖ್ಯೆ ಮತ್ತು ಶೇಕಡ 9 ಕ್ಕಿಂತಲೂ ಕಡಿಮೆ ಆರ್ಥಿಕ ಪ್ರಗತಿಯು ತಲಾದಾಯ ಕಡಿಮೆಯಾಗುವಂತೆ ಮಾಡಿ ಬಡತನ ಪ್ರಮಾಣವನ್ನು ಹೆಚ್ಚಿಸಿದೆ.

### 2. ಹಿಂದುಳಿದಿರುವಿಕೆ

ಭಾರತದಲ್ಲಿ ಆರ್ಥಿಕ ವ್ಯವಸ್ಥೆಯ ಹಿಂದುಳಿದಿರುವವಿಕೆ ಮತ್ತು ಅಪೂರ್ಣ ಅಭಿವೃದ್ಧಿಯು ಭಾರತದ ಬಡತನಕ್ಕೆ ಪ್ರಮುಖ ಕಾರಣವಾಗಿದೆ. ಭಾರತದ ಜನಸಂಖ್ಯೆ ಪ್ರಮಾಣಕ್ಕೆ ಇದು ಜನರ ಅನುಭೋಗದ ವೆಚ್ಚ ಸಹ ಕಡಿಮೆ ಇದೆ. ಇದರಿಂದಾಗಿ ಅವರ ಜೀವನ ಮಟ್ಟ ಕನಿಷ್ಟ ಮಟ್ಟದಲ್ಲಿದೆ.

### 3. ಆದಾಯ ಅಸಮಾನತೆ

ಭಾರತದಲ್ಲಿನ ಬಡತನಕ್ಕೆ ಇನ್ನೊಂದು ಪ್ರಮುಖ ಕಾರಣವೆಂದರೆ ಅದಾಯ ಅಸಮಾನತೆಯಾಗಿದೆ. ಭಾರತದಲ್ಲಿ ಅದಾಯ ಮತ್ತು ಸಂಪತ್ತು ಸಮಾನವಾಗಿ ಹಂಚಲ್ಪಟ್ಟಿತು. ಅದು ಕೆಲವೇ ಕೆಲವು ಜನರ ಬಳಿ ಕೇಂದ್ರೀಕೃತವಾಗಿದೆ. ಆದ್ದರಿಂದ ದೇಶದಲ್ಲಿ ಉಳ್ಳವರು ಮತ್ತು ಇಲ್ಲದವರೆಂಬ ವರ್ಗಗಳು ಸೃಷ್ಟಿಯಾಗಿದೆ.



downloaded from: www.kpscvaani.com

## 4. ಕಡಿಮೆ ತಲಾದಾಯ ತುಂಬಾ ಕಡಿಮೆ ಇದೆ.

2010–11ರಲ್ಲಿ ಭಾರತೀಯರ ತಲಾದಾಯ ರೂ. 53,331 ಗಳಾಗಿವೆ. ಅಂದರೆ ಢಾಲರುಗಳ ರೂಪದಲ್ಲಿ ಇದು 1.340 ಡಾಲರುಗಳಿಗಿಂತಲೂ ಕಡಿಮೆ. ಆದರೆ ಮುಂದುವರಿದ ರಾಷ್ಟ್ರಗಳ ಸರಾಸರಿ ತಲಾದಾಯ 38.658 ಡಾಲರುಗಳಿಂಗಿಂತಲೂ ಅಧಿಕವಾಗಿದೆ. ಇದರಿಂದಾಗಿ ಭಾರತೀಯ ಜೀವನ ಮಟ್ಟತೀರಾ ಕೆಳಮಟ್ಟದಲ್ಲಿದೆ.

## 5. ತೃಪ್ತಿಕರವಲ್ಲದ ಪ್ರಗತಿ ದರ

ಭಾರತದಲ್ಲಿ ಆರ್ಥಿಕ ಯೋಜನೆಗಳ ಹೊರತಾಗಿಯೂ ಅಭಿವೃಧಿಯ ದರ ತೃಪಿಕರವಾಗಿಲ್ಲ. ಹೆಚ್ಚೂ ಕಡಿಮೆ ಶೇಕಡಾ 9 ರಷ್ಟು ಅಭಿವೃಧ್ಧಿಯ ದರವನ್ನು ಸಾಧಿಸಲಾಗಿದೆ ಯಾದರೂ ಭಾರತದಲ್ಲಿನ ತೀವ್ರ ಜನಸಂಖ್ಯೆಯ ಬೆಳವಣಿಗೆಯ ಕಾರಣದಿಂದಾಗಿ ಈ ಅಭಿವೃಧ್ಧಿದರ ಏನೇನು ಸಾಲದಾಗಿದೆ. ಇದರಿಂದಾಗಿ ಬಡತನ ಪ್ರಮಾಣ ಹೆಚ್ಚುತ್ತಿದೆ.

## 6. ನಿರುದ್ಯೋಗ

ನಿರುದ್ಯೋಗದ ಪ್ರಮಾಣ ಹೆಚ್ಚಾದಂತೆಲ್ಲಾ ಬಡತನ ಹೆಚ್ಚುತಿದೆ. ಪ್ರತಿ ಯೋಜನೆ ಅವಧಿ ಕಾಲದಲ್ಲೂ ನಿರುದ್ಯೋಗ ಹೆಚ್ಚುತ್ತಲೆ ಇದೆ. ಭಾರತದಲ್ಲಿ ಪ್ರತಿ ವಾರಕ್ಕೆ ಒದು ಲಕ್ಷ ಜನರು ವಾರ್ಷಿಕ 28 ಮಿಲಿಯನ್ ಜನರು ನಿರುದ್ಯೋಗಿಗಳಾಗಿದ್ದಾರೆ. ಇದರಿಂದಾಗಿ ಬಡತನ ಹೆಚ್ಚುತ್ತದೆ.

## 7. ಕನಿಷ್ಟ ಅನುಭೋಗ ವೆಚ್ಚ

ಭಾರತದಲ್ಲಿ ಜನರ ಅನುಭೋಗ ವೆಚ್ಚ ತುಂಬಾ ಕಡಿಮೆ ಇದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ 1977 –78 ರಲ್ಲಿ ಗ್ರಾಮೀಣ ಭಾಗದಲ್ಲಿ ಮಾಸಿಕ ರೂ.69 ಹಾಗೂ ನಗರ ಪ್ರದೇಶಗಳಲ್ಲಿ ರೂ96 ಗಳಷ್ಟು ಅನುಭೋಗ ವೆಚ್ಚವಾಗಿದ್ದರೆ. ಇದು 1990–91ರ ವೇಳೆಗೆ ಗ್ರಾಮೀಣ ಭಾಗದಲ್ಲಿ ಮಾಸಿಕ ರೂ. 244 ಹಾಗೂ ನಗರ ಪ್ರದೇಶಗಳಲ್ಲಿ ರೂ. 370 ಆಗಿದ್ದಿತು. 5ನೇ ಯೊಜನೆಯ ಅಂಕಿ ಅಂಶಗಳ ಪ್ರಕಾರ ಕೆಳಸ್ತರದ ಶೇಕಡಾ 30ರಷ್ಟು ಜನರ ತಿಂಗಳ ಅನುಭೋಗದ ವೆಚ್ಚ ರೂ . 25ಕ್ಕಿಂತಲೂ ಕಡಿಮೆ ಇತ್ತು. ಇದರಿಂದಾಗಿ ಜನರು ಕಡಿಮೆ ಪ್ರಮಾಣದ ಅತ್ಯಾವಶ್ಯಕ ಮತ್ತು ಹಿತದಾಯಕ ಸರಕುಗಳನ್ನು ಅನುಬೋಗಿಸಲು ಸಾಧ್ಯವಾಗುತ್ತಿದೆ ಅವರ ಜೀವನಮಟ್ಟ ಸುಧಾರಿಸುತ್ತಿಲ್ಲ.

## 8. ಪ್ರಾದೇಶಿಕ ಅಸಮತೋಲನ

ಭಾರತದಲ್ಲಿನ ತೀವ್ರ ಪ್ರಾದೇಶಿಕ ಅಸಮತೋಲನವೂ ಸಹ ಬಡತನಕ್ಕೆ ಕಾರಣವಾಗುತ್ತಿದೆ. ಪಂಜಾಬ್, ಹರ್ಯಾಣ ಮುಂತಾದ ರಾಜ್ಯಗಳು ಹೆಚ್ಚು ಪ್ರಗತಿ ಸಾದಿಸಿದ್ದರೆ ಬಿಹಾರ್, ಒರಿಸ್ಸಾ, ರಾಜಸ್ಥಾನ್ , ಮಧ್ಯಪ್ರದೇಶಗಳು ಇನ್ನೂ ಹಿಂದುಳಿದಿವೆ . ಈ ಕಾರಣದಿಂದಾಗಿ ಬಡತನದ ಪ್ರಮಾಣದಲ್ಲಿ ವಿವಿಧ ರಾಜ್ಯಗಳ ನಡುವೆ ವ್ಯತ್ಯಾಸಗಳಿವೆ.



downloaded from: www.kpscvaani.com

### 9. ಹಣದುಬ್ಬರ

ಹಣದುಬ್ಬರ ಭಾರತದ ಅರ್ಥಿಕ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ನಿರಂತರವಾಗಿ ಏರುತ್ತಿರುವ ಬೆಲೆಗಳು ಬಡತನವನ್ನು ಹೆಚ್ಚಿಸುತ್ತವೆ. ಏಕೆಂದರೆ ಹಣದುಬ್ಬರದಿಂದಾಗಿ ಕೆಳವರ್ಗದ ಜನರ ಕೊಂಡುಕೊಳ್ಳುವ ಶಕ್ತಿ ಕುಗ್ಗುತಿದೆ.

### 10. ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆ

ಭಾರತದಲ್ಲಿ ಬಳಕೆಯಲ್ಲಿರುವ ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆಯ ಅಂಶಗಳು ಭಾರತದಲ್ಲಿ ಅಭಿವೃದ್ಧಿಯನ್ನು ತಡೆಹಿಡಿಯುತ್ತಿವೆ. ಇದರಿಂದಾಗಿ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಾಗುತ್ತಿಲ್ಲ. ಆದ್ದರಿಂದ ಭಾರತ ಹಿಂಧುಳಿದಿದೆ ಹಾಗೂ ಬಡತನ ಹೆಚ್ಚುತ್ತದೆ.

## ಬಡತನ ನಿರ್ಮೂಲನೆ :

ಬಡತನ ನಿರ್ಮೂಲನೆ ಅಷ್ಟೊಂದು ಸುಲಭದ ಕಾರ್ಯವಲ್ಲ. ಬಡತನ ನಿರ್ಮೂಲನೆ ಕಾರ್ಯಕ್ರಮಗಳು ವಿವಿಧ ಕ್ಷೇತ್ರಗಳಲ್ಲಿ ಜಾರಿಗೆ ಬರಬೇಕಾಗುತ್ತದೆ ಹಾಗೂ ಈ ಕಾರ್ಯಕ್ಕೆ ಬಲಿಷ್ಟ ರಾಜಕೀಯ ಪ್ರೇರಣಾಶಕ್ತಿ ಬೇಕಾಗುತ್ತದೆ. ತೀವ್ರ ಆದಾಯ ಅಸಮಾನತೆಯ ನಿರ್ಮೂಲನೆ, ಬಡಜನರಿಗೆ ವಿಶೇಷ ಸವಲತ್ತುಗಳ ಪೂರೈಕೆ, ಬಡಜನರ ಸಂಘಟನೆ, ಶಿಕ್ಷಣ, ಆರ್ಯೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ, ಸಮರ್ಥ ಅರ್ಥಿಕ ಮತ್ತು ಸಾಮಾಜಿಕ ನೀತಿಯ ನಿರೂಪಣೆ, ದಕ್ಷ ಹಣಕಾಸಿನ ಮತ್ತು ಖಜಾನೆ ನೀತಿಯ ಅನಿಷ್ಠಾನ ಮುಂತಾದ ಕ್ರಮಗಳನ್ನು ಅನುಸರಿಸಿ ಬಡತನವನ್ನು ನಿರ್ಮೂಲನೆಗೊಳಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಕೈಗೋಂಡ ಕ್ರಮಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

## ಪ್ರಾದೇಶಿಕ ಅಸಮತೋಲನೆ :–

ಪ್ರತಿಯೊಂದು ದೇಶದಲ್ಲೂ ಆರ್ಥಿಕವಾಗಿ ಮುಂದುವರಿದ ಮತ್ತು ಹಿಂದುಳಿದ ಪ್ರದೇಶಗಳನ್ನು ಕಾಣಬಹುದಾಗಿದೆ. ಇದಕ್ಕೆ ಭಾರತ ಕೂಡ ಹೊರತಾಗಿಲ್ಲ. ಪ್ರಾದೇಶಿಕ ಅಸಮತೋಲನವು ಭಾರತದ ಆರ್ಥಿಕ ವ್ಯವಸ್ಥೆ ಒಂದು ಪ್ರಮುಖ ಲಕ್ಷಣವಾಗಿದೆ, ಭಾಷೆಯ ಆಧಾರದ ಮೇಲೆ ಅಗಾಧ ವ್ಯತ್ಯಾಸ ಮತ್ತು ಏರುಪೇರುಗಳಿವೆ. ಈ ಏರುಪೇರುಗಳನ್ನು ಹಾಗೇ ಮುಂದುವರಿಯಲು ಬಿಟ್ಟರೆ ದೇಶದ ಏಕತೆ ಮತ್ತು ಏರುಪೇರುಗಳಿಗೆ ಸವಾಲಾಗಿ ಪರಿಣಮಿಸಬಹುದು. ಪ್ರಾದೇಶಿಕ ಅಸಮತೋಲನ ವಿಚಾರವು ಸ್ವಾಂತತ್ರ್ಯ ನಂತರದ ದಿನಗಳಲ್ಲಿ ಅನೇಕ ವರ್ಷಗಳವರೆಗೆ ಕಡೆಗಣಿಸಲ್ಪಟ್ಟಿತ್ತು. ಬ್ರಿಟಿಷರ ಕಾಲದಿಂದಲೇ ಅವರ ನಿತಿಯಿಂದಾಗಿ ಪ್ರಾದೇಶಿಕ ಅಸಮತೋಲನೆ ಇತ್ತಾದರೂ ಇತ್ತೀಚಿನ ದಿನಗಳಲ್ಲಿ ಭಾರತ ಸರ್ಕಾರ ಈ ವಿಚಾರದತ್ತ ಗಮನ ಹರಿಸಲು ಪ್ರಯತ್ನಸುತ್ತಿದೆ.



downloaded from: www.kpscvaani.com

## ಪ್ರಾದೇಶಿಕ ಅಸಮತೋಲನದ ಕಾರಣಗಳು :

ಭಾರತದಲ್ಲಿ ಪ್ರಾದೇಶಿಕ ಅಸಮತೋಲನಕ್ಕೆ ಹಲವಾರು ಕಾರಣಗಳಿವೆ. ಅವುಗಳನ್ನು ವಿಶಾಲವಾಗಿ ಸಾಮಾಜಿಕ , ಆರ್ಥಿಕ , ನೈಸರ್ಗಿಕ ಮತ್ತು ರಾಜಕೀಯ ಕಾರಣಗಳೆಂದು ವರ್ಗೀಕರಿಸಬಹುದಾಗಿದೆ.

### 1. ಸಾಮಾಜಿಕ ಕಾರಣಗಳು

ದೇಶದ ಪ್ರಾದೇಶಿಕ ಅಸಮಾನತೆಗೆ ಸಾಮಾಜಿಕ ಅಂಶಗಳು ಕಾರಣವಾಗಿವೆ. ಅವುಗಳೆಂದರೆ ಜಾತಿ ಪದ್ಧತಿ: ಪ್ರಾಚೀನ ಲಾಲದಿಮ್ದಲೂ ಅಸ್ತಿತ್ವದಲ್ಲಿರುವ ಜಾತಿಪದ್ಧತಿಯು ಇಲ್ಲಿನ ಪ್ರಾದೇಶಿಕ ಅಸಮತೋಲನಕ್ಕೆ ತನ್ನದೇ ಆದ ಕಾಣಿಕೆ ಸಲ್ಲಿಸಿದೆ. ವಿವಿಧ ವರ್ಗದ ಜನರ ನಡುವೆ ಕಂದಕ ಹಾಗೂ ಅಭೇದ್ಯ ಗೋಡೆಗಳನ್ನು ನಿರ್ಮಿಸಿದ ಜಾತಿ ವ್ಯವಸ್ಥೆಯು ಅಭಿವೃದ್ಧಿಗೆ ಎಂದಿಗೂ ಹೆಚ್ಚಾಗಿಲ್ಲದ ಹಾಗೂ ಕೆಳವರ್ಗದ ಜನರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದವು.

### 2. ಆರ್ಥಿಕ ಕಾರಣಗಳು

ದೇಶದ ಪ್ರಾದೇಶಿಕ ಅಸಮಾನತೆಯ ಹಲವಾರು ಆರ್ಥಿಕ ಅಂಶಗಳೂ ಕಾರಣವಾಗಿವೆ ಅವುಗಳನ್ನು ಈ ಮುಂದೆ ನೀಡಲಾಗಿದೆ.

- **ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಬಳಕೆ:**

ದೇಶದ ಎಲ್ಲಾ ಭಾಗಗಳಲ್ಲೂ ಲಭ್ಯವಿರುವ ನೈಸರ್ಗಿಕ ಸಂಪಸ್ಮೂಲಗಳನ್ನು ಸಮರ್ಕವಾಗಿ ಬಳಸಿಕೊಳ್ಳಲು ನಮ್ಮ ಸರ್ಕಾರ ವಿಫಲವಾಗಿದೆ. ಇದರಿಂದಾಗಿ ನೈಸರ್ಗಿಕ ಸಂಪನ್ಮೂಲಗಳು ಸಾಕಷ್ಟು ಲಭ್ಯವಿದ್ದಾಗ್ಯೂ ರಾಜ್ಯದ ಕೆಲ ಪ್ರದೇಶಗಳು ಹಿಂದುಳಿದಿದೆ.

- **ದೋಷಪುರಿತ ಆರ್ಥಿಕ ನೀತಿ:**

ನಮ್ಮ ಸರ್ಕಾರಗಳು ಅನುಸರಿಸುತ್ತಾ ಬಂದ ಆರ್ಥಿಕ ನೀತಿಗಳು ಹೆಚ್ಚಾಗಿ ದೇಶದ ಕೆಲ ಭಾಗಗಳ ಅಭಿವೃದಿಗೆ ಮಾತ್ರ ಪೂರಕವಾಗಿ ಕಾರ್ಯ ನಿರ್ವಸಿವೆ.

### 3. ನೈಸರ್ಗಿಕ ಕಾರಣಗಳು

ದೇಶದಲ್ಲಿ ಪ್ರಾದೇಶಿಕ ಅಸಮತೋಲನಕ್ಕೆ ಕೆಲ ನೈಸರ್ಗಿಕ ಅಂಶಗಳೂ ಕಾರಣವಾಗಿದೆ.

- **ನೈಸರ್ಗಿಕ ಸಂಪನ್ಮೂಲಗಳ ಅಸಮಾನ ಹಂಚಿಕೆ:**

ದೇಶದ ಎಲ್ಲಾ ಪ್ರದೇಶಗಳ ನಡುವೆ ನೈಸರ್ಗಿಕ ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗಿಲ್ಲ ಹೇರಳವಾಗಿ ನೈಸರ್ಗಿಕ ಸಂಪನ್ಮೂಲಗಳು ಲಭ್ಯವಿರುವ ಪ್ರದೇಶಗಳು ಅವುಗಳ ಸಮರ್ಪಕ ಬಳಕೆಯಿಂದ



downloaded from: www.kpscvaani.com

ಅಭಿವೃದ್ಧಿಗೊಳ್ಳುತ್ತಿದ್ದರೆ, ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ ವಿರಳವಾಗಿರುವ ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದುಳಿದಿವೆ.

- **ಭೌಗೋಳಿಕ ಸ್ಥಾನೀಕರಣ:**

ನೈಸರ್ಗಿಕ ಸಂಪನ್ಮೂಲ ವಿರಳವಿರುವ ಗುಡ್ಡಗಾಡು ಪ್ರದೇಶಗಳು ಹಾಗೂ ಮಲತಾಯಿ ಧೋರಣೆಗೆ ತುತ್ತಾಗಿರುವ ಗಡಿನಾಡ ಭಾಗಗಳು ಅಭಿವೃದ್ಧಿ ವಿಚಾರದಲ್ಲಿ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರ ವಿವಿಧ ಕಾರಣಗಳಿಂದ ಹಿಂದೇಟು ಹಾಕುತ್ತಿದೆ.

- **ಮಳೆಯ ಅಭಾವ:**

ದೇಶದಲ್ಲಿ ಹಿಂದುಳಿದಿರುವ ಬಹಿತೇಕ ಪ್ರದೇಶಗಳು ಮಳೆಯ ಕೊರತೆಯನ್ನು ಅನುಭವಿಸುತ್ತಿರುವ ಭಾಗಗಲಾಗಿವೆ. ಮಳೆಯ ಕೊರತೆಯು ಅಭಾವ ಮತ್ತು ಬರಗಾಲ ಪರಿಸ್ಥಿತಿಗಳಿಗೆ ಕಾರಣವಾಗಿದ್ದು, ಆ ಪ್ರದೇಶಗಳ ಆರ್ಥಿಕಾಭಿವೃದ್ಧಿ ಮೆಲೆ ದುಷ್ಪರಿಣಾಮ ಬೀರಿದೆ.

## 4. ರಾಜಕೀಯ ಕಾರಣಗಳು

ದೇಶದ ಕೆಲವು ಭಾಗಗಳಲ್ಲಿ ನಿಸ್ವಾರ್ಥ , ದಕ್ಷ ದೂರದೃಷ್ಟಿಯ ನಾಯಕರ ಕೊರತೆಯು ಆ ಭಾಗಗಳ ಹಿಂದುಳಿದಿರುವಿಕೆಗೆ ಕಾರಣಗಳಾಗಿವೆ. ಅಲ್ಲದೆ ಅಧಿಕಾರಸ್ಥನಾಯಕರು ದೇಶದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತ ಬಂದಿರುವುದು ದೇಶದ ಉತ್ತರ ಭಾಗಗಳು ಹಿಂದುಳಿಯಲು ಕಾರಣಗಳಾಗಿವೆ. ಅಲ್ಲದೆ ದಕ್ಷ ನಾಯಕತ್ವದ ಕೊರತೆಯಿಂದಾಗಿ ಕೇಂದ್ರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸವಲ್ಲಿ ವಿಫಲರಾಗಿದ್ದಾರೆ.

## 5. ರಾಷ್ಟ್ರೀಯ ಜನಸಂಖ್ಯಾ ನೀತಿ

ನೂತನ ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ಕೇಂದ್ರ ಸರ್ಕಾರ 2000ರ ಫೆಬ್ರವರಿ 15 ರಂದು ಘೋಷಿಸಿತು ಆರೋಗ್ಯ ಪಾಲನೆ ಮೂಲ ಸೌಕರ್ಯ ನಿರ್ಮಾಣ, ಜನನ ನಿಯಂತ್ರಣ ಮುಂತಾದ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಗಮನಹರಿಸುವುದು ಈ ನೀತಿಯ ತಕ್ಷಣದ ಉದ್ದೇಶವಾಗಿದೆ.

2045ರ ವರೆಗೆ ಜನಸಂಖ್ಯೆಯನ್ನು ಸ್ಥಿರಗೊಳಿಸುವುದು ಈ ನೀತಿಯ ದಿರ್ಘಾವಧಿ ಉದ್ದೇಶವಾಗಿದೆ.

1. 14ನೇ ವಯಸ್ಸಿನವರೆಗೆ ಶಾಲಾ ಶಿಕ್ಷಣವನ್ನು ಕಡ್ಡಾಯಗೊಳಿಸುವುದು.
2. ಶಿಶುಮರಣ ಸಂಖ್ಯೆಯನ್ನು ಪ್ರತಿ ಸಾವಿರಕ್ಕೆ 30 ಕ್ಕಿ0ತ ಕಡಿಮೆಗೊಳಿಸುವುದು.
3. ತಡೆಗಟ್ಟಬಹುದಾದ ಎಲ್ಲಾ ಖಾಯಿಲೆಗಳ ನಿಯಂತ್ರಣಕ್ಕಾಗಿ ಮಕ್ಕಳಿಗೆ ಸಾರ್ವತ್ರಿಕವಾಸಗಿ ಚುಚ್ಚುಮದ್ದು ಹಾಕಿಸುವುದು.



downloaded from: www.kpscvaani.com

4. ಹೆಣ್ಣು ಮಕ್ಕಳ ವಿವಾಹವನ್ನು ಸಾದ್ಯಾವಾದಷ್ಟು ಮಟ್ಟಿಗೆ 20ನೇ ವಯಸ್ಸಿನ ಒಳಗಾಗದಂತೆ ನೋಡುವುದು.
5. ಸಾರ್ವತ್ರಿಕ ಮಾಹಿತಿ ಒದಗಣೆ.
6. ಜನನ, ಮರಣ, ವಿವಾಹ ಮತ್ತು ಗರ್ಭಧಾರಣೆಯನ್ನು ಶೇ. 100ಕ್ಕೆ ನೂರರಷ್ಟು ನೋಂದಾಣೆಗೆ ಪ್ರಯತ್ನಿಸುವುದು.
7. ಏಡ್ಸ್ ಖಾಯಿಲೆಯ ಹರಡುವಿಕೆಯನ್ನು ತಡೆಗಟ್ಟುವುದು
8. ಜನಸಂಖ್ಯೆಯ ಮೇಲೆ ರಾಷ್ಟ್ರೀಯ ಆಯೋಗವನ್ನು ರಚಿಸುವುದು.
9. ಬಡತನ ರೇಖೆಯಿಂದ ಕೆಳಗೆ ಜೀವಿಸುವ ದಂಪತಿಗಳಿಗೆ ರೂ 5000 ದವರಿಗೆ ಆರೋಗ್ಯ ವಿಮೆ ನಿಡುವುದು ಮತ್ತು 21 ನೇ ವಯಸ್ಸಿನ ನಂತರ ಮಕ್ಕಳಾದವರಿಗೆ ಪುರಸ್ಕಾರ ನೀಡುವುದು.
10. ಬಾಲ್ಯ ವಿವಾಹವನ್ನು ಸಂಪೂರ್ಣ ತಡೆಗಟ್ಟುವುದು, ಇತ್ಯಾದಿ.

## ವಿಮರ್ಶೆ

ಜನಸಂಖ್ಯೆ ನಿಯಂತ್ರಣಕ್ಕೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಯತ್ನ ನಡೆಸಿರುವುದೇನೋ ನಿಜವಾದರೂ ಸರ್ಕಾರ ಕೆಲವು ವಿಷಯಗಳಲ್ಲಿ ಎಡವಿರುವುದು ಸ್ಪಷ್ಟ. ಮುಖ್ಯವಾಗಿ: ಸರ್ಕಾರ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲು ಮೀಸಲಿರಿಸುತ್ತಿರುವ ಹಣ ಏನೇನೂ ಸಾಲದಾಗಿದೆ. ಸರ್ಕಾರ ಪ್ರಚಾರ ಕಾರ್ಯ ಸರಿಯಾಗಿ ಕೈಗೊಳ್ಳುತ್ತಿಲ್ಲ ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳುವವರಿಗೆ ಸರ್ಕಾರ ನೀಡುತ್ತಿರುವ ಉತ್ತೇಜಕಗಳು ಹಾಗೂ ಪ್ರೋತ್ಸಾಹಗಳು ಆರ್ಕಷಕಣೀಯವಾಗಿಲ್ಲ. ಕುಟುಂಬ ಯೋಜನಾ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ವಿವಿಧ ಕಾರಣಗಳಿಂದ ಹಿಂದೇಟು ಹಾಕುತ್ತಿದೆ. ಸಂಪ್ರದಾಯಗಳು ಹಾಗೂ ಜಾತಿ ಮತ್ತು ನಿರ್ಲಕ್ಷ ಕೂಡಾ ತನ್ನದೇ ಆದ ಕೊಡುಗೆ ಹಾಗೂ ಮಹಿಳಾ ಶಿಕ್ಷಣ ವಿಶೇಷ ಒತ್ತು ನೀಡಬೇಕು. ಆಗ ಮಾತ್ರ ಜನಸಂಖ್ಯಾ ಸಮಸ್ಯೆ ಬಗೆ ಹರಿದೀತು.

## ವೃತ್ತಿಗನುಸಾರ ಜನಸಂಖ್ಯೆಯ ಹಂಚಿಕೆ

ವೃತ್ತಿಗನುಸಾರ ಜನಸಂಖ್ಯೆಯ ಹಂಚಿಕೆ ಅಥವಾ ಉದ್ಯೋಗ ಹಂಚಿಕೆ ಪರಿಕಲ್ಪನೆ ಬಹುಮುಖ್ಯವಾದುದಾಗಿದೆ. ಅದು ದೇಶವೊಂದರ ಅಭಿವೃದ್ಧಿ ಸ್ವರೂಪ ಮತು ಅಭಿವೃದ್ಧಿ ಹಂತದ ಮೇಲೆ ಬೆಳಕು ಬೀರುತ್ತದೆ.



downloaded from: www.kpscvaani.com

## ಪ್ರಾಥಮಿಕ ವಲಯ

ಈ ವಲಯವು ಕೃಷಿ, ಮೀನುಗಾರಿಕೆ, ತೋಟಗಾರಿಕೆ, ಹೈನುಗಾರಿಕೆ, ಅರಣ್ಯ, ಗಣಿಗಾರಿಕೆ ಮತ್ತು ಇತರೆ ಕಸುಬುಗಳನ್ನು ಒಳಗೋಂಡಿರುತ್ತದೆ. ಈ ವಲಯವು ಮುಖ್ಯವಾಗಿ ಭೂಮಿ ಅಥವಾ ಪ್ರಕೃತಿಯನ್ನು ಅವಲಂಬಿಸಿರುತ್ತದೆ.

## ಮಾಧ್ಯಮಿಕ ವಲಯ

ಮಾಧ್ಯಮಿಕ ಅಥವಾ ದ್ವಿತೀಯ ವಲಯವು ತಯಾರಿಕೆ, ನಿರ್ಮಾಣ ವಿದ್ಯುತ್ ಮುಂತಾದ ಕೈಗಾರಿಕ ಚಟುವಟಿಕೆಗಳಿಗೆ ಸಂಬದಿಸಿದ ಕಸುಬುಗಳನ್ನು ಒಳಗೊಂಡಿರುತ್ತದೆ ಈ ವಲಯವು ಮುಖ್ಯವಾಗಿ ಬಂಡವಾಳ ಅವಲಂಬಿತವಾಗಿರುತ್ತದೆ.

## ತೃತೀಯ ವಲಯ

ತೃತೀಯ ವಲಯವು ವ್ಯಾಪಾರ ಸಾರಿಗೆ ಸಂಪರ್ಕ ಬ್ಯಾಂಕಿಂಗ್ ವಿಮೆ ಶಿಕ್ಷಣ ಆರೋಗ್ಯ ಮುಂತಾದ ಸರ್ಕಾರಿ ಮತ್ತು ಸರ್ಕಾರೇತರ ಸೇವೆಗಳನ್ನು ಒಳಗೊಂಡಿರುತ್ತದೆ. ಈ ವಲಯವು ಪ್ರಾಥಮಿಕ ಮತ್ತು ಮಾಧ್ಯಮಿಕ ವಲಯದ ಅವಶ್ಯಕತೆಗಳನ್ನು ಪೂರೈಸಲು ಮುಂದಾಗುತ್ತದೆ.

ಭಾರತದ ಒಟ್ಟು ಜನಸಂಖ್ಯೆಯನ್ನು ಕಾರ್ಯನಿರತ ಜನಸಂಖ್ಯೆ ಅಥವಾ ಶ್ರಮಬಲ ಮತ್ತು ಒಟ್ಟು ಶಕ್ತಿಯ ಅಥವಾ ಅಧಿಕ ದಿನಗಳು ದುಡಿಯುವವನು, ಬಹುಭಾಗ ಭಾರತದ ಒಟ್ಟು ಶ್ರಮ ಬಲವನ್ನು 2001ರಲ್ಲಿ ಶ್ರಮಬಲದ ಶೇಕಡ 77.8 ಮಹಿಳೆಯರಲ್ಲಿ ಇದು ಕ್ರಮವಾಗಿ ಶೇಕಡ ಸೀಮಂತ ಕಾರ್ಮಿಕರಿದ್ದರು (54.4 ದಶಲಕ್ಷ) ಆಗಿದ್ದಿತು.

## ಉದ್ಯೋಗ ಸಂರಚನೆ ಸುಧಾರಣ ಕ್ರಮಗಳು

ಭಾರತದ ಉದ್ಯೋಗ ಸಂರಚನೆಯು ಅಷ್ಟೇನೂ ಆಶಾದಾಯಕವಾಗಿಲ್ಲ. ಅದು ಇನ್ನೂ ಹಿಂದುಳಿದ ದೇಶದ ಗುಣಲಕ್ಷಣಗಳನ್ನು ಬಿಂಬಿಸುತ್ತಿದ್ದು ಅದನ್ನು ಶೀಘ್ರವಾಗಿ ಸುಧಾರಿಸಬೇಕಾದ ಅಗತ್ಯ ಕಂಡು ಬರುತ್ತಿದೆ. ಅದನ್ನು ಸುಧಾರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

- ತ್ವರಿತ ಕೈಗಾರಿಕ ಅಭಿವೃದ್ಧಿ ಸಾಧನೆ
- ತೃತೀಯ ವಲಯದ ಅಭಿವೃದ್ಧಿ
- ಉದ್ಯೋಗಾವಕಾಶ ವಿಸ್ತರಣೆ
- ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ
- ಜನಸಂಖ್ಯೆಯ ನಿಯಂತ್ರಣ
- ನಗರ ಮತ್ತು ಪಟ್ಟಣಗಳ ಅಭಿವೃದ್ಧಿ
- ಮಾನವ ಶಕ್ತಿ ಯೋಜನೆ ಅನುಷ್ಠಾನ ಇತ್ಯಾದಿ.



downloaded from: www.kpscvaani.com

## ಭಾರತದ ಕೈಗಾರಿಕಾ ರಂಗ :–

- ❖ ಭಾರತದ ಆರ್ಥಿಕತೆಯಲ್ಲಿ ಕೈಗಾರಿಕೆಗಳ ಮಹತ್ವ
- ❖ ಕೈಗಾರಿಕಾ ನೀತಿ : 1991
- ❖ ಸಾರ್ವಜನಿಕ ರಂಗದ ಉದ್ಯಮಗಳ ಸಮಸ್ಯೆಗಳು
- ❖ ಹೂಡಿಕೆ ಹಿಂತೆಗೆತ
- ❖ ಸಣ್ಣ ಕೈಗಾರಿಕೆಗಳು
- ❖ ಮಾಹಿತಿ ತಂತ್ರಜ್ಞಾನ ಕೈಗಾರಿಕ
- ❖ ಶಿಕ್ಷಣ
- ❖ ಕೈಗಾರಿಕ ರೋಗಗ್ರಸ್ತತೆ
- ❖ ಕಾರ್ಮಿಕರ ಸಮಸ್ಯೆಗಳು

ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ವಾಸ್ತವವಾಗಿ ಕೈಗಾರಿಕೀಕಣ ಮತ್ತು ಆರ್ಥಿಕಾಭಿವೃದ್ಧಿ ಒಂದೇ ಎಂದು ಭಾವಿಸಿಲಾಗಿದೆ. ಯಾವುದೇ ದೇಶದ ತ್ವರಿತ ಅಭಿವೃದ್ಧಿ ಕೈಗಾಕಿಕರಣದಿಂದ ಮಾತ್ರ ಸಾಧ್ಯವಾಗುತ್ತದೆ. ಜಗತ್ತಿನಲ್ಲಿ ಇಂದು ಮುಂದುವರಿದ ಶ್ರೀಮಂತ ರಾಷ್ಟ್ರಗಳು ಎಂದು ಕರೆಸಿಕೊಳ್ಳುತ್ತಿರುವ ಎಲ್ಲಾ ದೇಶಗಳೂ ಕೈಗಾರಿಕಾ ರಂಗದಲ್ಲಿ ಮುಂದುವರಿದ ದೇಶಗಳೇ ಆಗಿವೆ. ಕೈಗಾರಿಕೆಗಳಿಲ್ಲದೆ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂಬುದು ಅನೇಕ ಹಿಂದುಳಿದ ರಾಷ್ಟ್ರಗಳ ಸ್ಥಿತಿಗತಿಗಳಿಂದ ಸಾಬೀತಾಗಿದೆ, ವಾಸ್ತವವಾಗಿ ಹಿಂದುಳಿದ ರಾಷ್ಟ್ರಗಳು ಮತ್ತು ಮುಂದುವರಿದ ರಾಷ್ಟ್ರಗಳು ಎಂದು ವರ್ಗೀಕರಿಸುವುದೇ ಕೈಗಾರಿಕಾ ಬೆಳವಣಿಗೆಯ ಆಧಾರದ ಮೇಲೆ. ಕೈಗಾರಿಕೆಗಳು ಬೇಕೇ ಬೇಕು. ಒಂದು ದೇಶದ ಭೌತಿಕ ಶ್ರೀಮಂತಿಕೆ ಮತ್ತು ಕೈಗಾರಿಕಾಭಿವೃದ್ಧಿ ಜೊತೆ ಜೊತೆಯಲ್ಲೇ ಸಾಗುತ್ತವೆಂಬುದು ನೈಜ ಸಂಗತಿಯಾಗಿದೆ. ಕೈಗಾರಿಕೀಕರಣ ಇಲ್ಲವೇ ವಿನಾಶ ಎಂದು ಭಾರತದ ಸರ್ ಎಂ ವಿಶ್ವೇಶ್ವರಯ್ಯ ಅವರು ಹೇಳಿರುವ ಮಾತು ಸತ್ಯವಾದ ಮಾತಗಿದೆ.

### ಭಾರತದ ಆರ್ಥಿಕತೆಯಲ್ಲಿ ಕೈಗಾರಿಕೆಗಳ ಮಹತ್ವ :

ಕೈಗಾರಿಕೆಗಳು ಒಂದು ದೇಶದ ಶರಿರದ ಮೂಳೆಗಳಿದ್ದಂತೆ. ಕೃಷಿ ಎಂಬ ದೇಶದ ಶರೀರದ ಶಕ್ತಿ ಮತ್ತು ಚೈತನ್ಯವನ್ನು ಹೆಚ್ಚಿಸಲು ಕೈಗಾರಿಕೆಗಳು ಅತ್ಯಾವಶ್ಯಕ, ಕೈಗಾರಿಕೀಕರಣವು ಯಾವುದೇ ದೇಶದ ಆರ್ಥಿಕಾಬಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಿರಂತರವಾಗಿ ಸೃಷ್ಟಿಯಾಗದ ಉದ್ಯಮಗಳು, ಕಾರ್ಖಾನೆಗಳು, ವಿದ್ಯುತ್ ಉತ್ಪಾದನೆ ಗಣಿಗಾರಿಕೆ ಮುಂತಾದ ಚಟುವಟಿಗಳನ್ನು ಕೈಗಾರಿಕೀರಣ ಎನ್ನಲಾಗುವ ಉದಾ;– ಭಾರತದದಂತಹ ಕೃಷಿ ಪ್ರಧಾನ ರಾಷ್ಟ್ರದಲ್ಲಿ ಕೈಗಾರಿಕೆಗಳು ವಹಿಸಿವ ಪಾತ್ರವನ್ನು ಈ ಕೆಳಗೆ ಚರ್ಚಿಸಲಾಗಿದೆ.



downloaded from: www.kpscvaani.com

## 1. ಉದ್ಯೋಗ ಸೃಷ್ಟಿ

ಆಧುನಿಕ ಯುಗವನ್ನು ಕೈಗಾರಿಕಾ ಯುಗವೆಂದು ಕರೆಯಲಾಗುತ್ತದೆ, ಕೈಗಾರಿಕೆಗಳು ಆರ್ಥಿಕಭಿವೃದ್ಧಿಯ ಜೀವನವಿದ್ದಂತೆ. ಕೈಗಾರಿಕೆಗಳ ಸ್ಥಾಪನೆ ಮತ್ತು ಬೆಳವಣಿಗೆಯಿಂದ ಸಾವಿರಾರು ಜನರಿಗೆ ಉದ್ಯೋಗ ಲಭ್ಯವಾಗುತ್ತದೆ. ಸೃಷ್ಟಿ ಕೈಗಾರಿಕೆಯ ಪ್ರಮುಖ ಕೊಡುಗೆಯಾಗಿದೆ ಅದರಲ್ಲೂ ವ್ಯಾಪಕ ನಿರುದ್ಯೋಗ ಮತ್ತು ಅರೆ ಉದ್ಯೋಗವಿರುವ ಭಾರತದಲ್ಲಿ ಕೈಗಾರಿಕೆಗಳು ಬಹಳ ಹಿಂದುಳಿದಿರುವಿಕೆ ಕಾರಣದಿಂದಾಗಿ ಧೇಶದಲ್ಲಿ ನಿರುಪಯೋಗ ಬೃಹದಾಕಾರವಾಗಿ ಹಿಂದುಳಿದಿರುವಿಕೆಯ ಕಾರಣದಿಂದಾಗಿ ಧೇಶದಲ್ಲಿ ನಿರುಪಯೋಗ ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ಪರಿಸ್ಥಿಯನ್ನು ಸುಧಾರಿಸಲು ಕೈಗಾರಿಕಗಳ ಅಭಿವೃದ್ಧಿ ಅವಶ್ಯವೆನಿಸುತ್ತದೆ.

## 2. ಆಧಿಕ ಉತ್ಪಾದನೆ

ಕೈಗಾರಿಕ ಸ್ಥಾಪನೆಯಿಂದ ಅಧಿಕ ಉತ್ಪಾದನೆ ಸಾಧ್ಯವಾಗುತ್ತದೆ ಕೈಗಾರಿಕೆಗಳಲ್ಲಿ ವ್ಯಾಪಕ ಪ್ರಮಾಣದಲ್ಲಿ ಯಂತ್ರೋಪಕರಣಗಳು ಆಧುನಿಕ ತಂತ್ರಜ್ಞಾನ ಮುಂತಾದದುವನ್ನು ಬಳಸಿ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಮಾಡಲಾಗುತ್ತದೆ. ಇದರಿಂದಾಗಿ ಶ್ರಮ ವಿಭಜನೆ ಮತ್ತು ಮಿತವ್ಯಯದ ಲಾಭವನ್ನು ಪಡೆದು ಸರಕುಗಳನ್ನು ಕಡಿಮೆ ಉತ್ಪಾದನಾ ವೆಚ್ಚದಲ್ಲಿ ಉತ್ಪಾದಿಸುವುದು ಸಾಧ್ಯವಾಗುತ್ತದೆ ಈ ಕಾರದಿಂದಾಗಿ ದೇಶದಲ್ಲಿ ಉತ್ಪಾದನೆ ಹೆಚ್ಚಾಗಿ ಸರಕುಗಳ ಕೊರತೆಯ ಸಮಸ್ಯೆ ನೀಗುತ್ತದೆ,

## 3. ರಾಷ್ಟ್ರಾದಾಯ ಮತ್ತು ತಲಾದಾಯದ ಹೆಚ್ಚಳ

ಕೈಗಾರಿಕೆಗಳ ಬೆಳವಣಿಗೆ ದೇಶದ ರಾಷ್ಟ್ರೀಯ ಆದಾಯ ಮತ್ತು ತಲಾದಾಯಗಳು ಹೆಚ್ಚುವಲ್ಲಿ ಪ್ರಮುಖವಾಗಿವೆ ಹಿಂದುಳಿದ ರಾಷ್ಟ್ರವಾದ ಭಾರತದಲ್ಲಿ ರಾಷ್ಟ್ರಾದಾಯ ಮತ್ತು ತಲಾದಾಯಗಳನ್ನು ವೇಗವಾಗಿ ವೃದ್ಧಿಗೊಳಿಸುತ್ತದೆ.

ಸಮತೋಲನ ಅಭಿವೃದ್ಧಿ ಭಾರತದ ವಿವಿಧ ಪ್ರದೇಶಗಳ ಮತ್ತು ವಿವಿಧ ರಾಜ್ಯಗಳ ನಡುವೆ ಅಸಮತೋಲನೆ ಪರಿಸ್ಥಿತಿ ಇದೆ. ಅದರೆ ಅಭಿವೃದ್ದಿ ವಿಚಾರದಲ್ಲಿ ಪ್ರಾದೇಶಿಕ ಅಸಮತೋಲನ ಬೃಹದಾಕಾರಾವಾಗಿ ಅಲ್ಲದೆ ದೇಶದಲ್ಲಿನ ವಿವಿಧ ವಲಯಗಳ ಅಭಿವೃದ್ಧಿ ಏಕರೀತಿಯದಾಗಿಲ್ಲ ಆದ್ದರಿಂದ ದೇಶದಲ್ಲಿ ತ್ವರಿತವಾಗಿ ಸಾಧಿಸಬೇಕಾಗಿದೆ, ಪ್ರಾಧೇಶಿಕ ಅಸಮತೊಲನದ ನಿವಾರಣೆಗೆ ಕೈಗಾರಿಕೆಗಳು ಸಹಾಯಕವಾಗುತ್ತದೆ.

## 4. ತ್ವರಿತ ಆರ್ಥಿಕಭಿವೃದ್ಧಿ :

ಭಾರತ ಒಂದು ಹಿಂದುಳಿದ ಧೇಶವಾಗಿದ್ದರಿಂದ ಅದು ಅಭಿವೃದ್ಧಿ ಪಥದಲ್ಲಿ ಅತ್ಯಂತ ವೇಗವಾಗಿ ಮುನ್ನಡೆಯಬೇಕೆಂದರೆ ತ್ವರಿತ ಆರ್ಥಿಕಾಭಿವೃದ್ಧಿಯನ್ನು ಸಾಧಿಸಬೆಕೆಂದರೆ ಕೈಗಾರಿಕೆಗಳ ಬೆಳವಣಿಗೆಯಿಂದ ಮಾತ್ರ ಸಾಧ್ಯ.


downloaded from: www.kpscvaani.com

ಹೀಗೆ ಔದ್ಯೋಗೀಕರಣವು ಭಾರತದ ಆರ್ಥಿಕ ವ್ಯವಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಅತ್ಯವಶ್ಯಕ. ದೇಶ ಇಂದು ಎದುರಿಸುತ್ತಿರುವ ಗಂಬೀರ ಸಮಸ್ಯೆಗಳಾದ ಬಡತನ , ನಿರುದ್ಯೋಗ ಆದಾಯ ಅಸಮಾನತೆ ಪ್ರಾದೇಶೀಕ ಅಸಮಾತೋಲನ ತಾಂತ್ರಿಕ ಹಿಂದುಳಿದಿರುವಿಕೆ ಮುಂತಾದ ಸಮಸ್ಯೆಗಳ ಶೀಘ್ರ ಪರಹಾಕ್ಕೆ ಔದ್ಯೋಗಿಕರಣ ಸಿದ್ಧೌಷಧಿಯಾಗಬಲ್ಲದು. ಔದ್ಯೋಗಿಕರಣ ಭಾರತದ ಆರ್ಥಿಕಾಭಿವೃದ್ಧಿಯ ಮೂಲಮಂತ್ರವಾಗ ಬೇಕಾಗುತ್ತಸದೆ.

## ಕೈಗಾರಿಕ ನೀತಿ :–

ಆಧುನಿಕ ಕೈಗಾರಿಕ ರಂಗವು ತುಂಬಾ ಕಿಷ್ಟಗೊಂಡಿದ್ದು ಅದರ ಕಾರ್ಯಕ್ಷೇತ್ರ ಮತ್ತು ಚಟುವಟಿಕೆ ವಿಸ್ತಾರಗೊಳ್ಳುತ್ತಿದೆ. ಅಲ್ಲದೆ ಕೈಗಾರಿಕ ಬೆಳವಣಿಗೆಯ ಜವಬ್ದಾರಿಯನ್ನು ಖಾಸಗಿಯವರು ಹೊರಬೇಕೇ ಅಥವಾ ಸರ್ಕಾರ ಹೊರಬೇಕೇ ಎಂಬ ಜಿಜ್ಞಾಸೆ ಇದೆ. ಭಾರತ ಸ್ವಾತಂತ್ರ್ಯ ನಂತರ 'ಮಿಶ್ರ ಆರ್ಥಿಕ ವ್ಯವಸ್ಥೆ ಪದ್ಧತಿ'ಯನ್ನು ಅನುಸರಿಸಿತಾದ್ದರೂ ಭಾರತದಲ್ಲಿ ಸಾರ್ವಜನಿಕ ಮತ್ತು ಖಾಸಗಿ ರಂಗಗಳೆರಡು ಅಸ್ತಿತ್ವದಲ್ಲಿದೆ. ಈ ಹಿನ್ನೆಯಲ್ಲಿ ಯಾರು ಯಾವ ಚಟುವಟಿಕೆಗಳಲ್ಲಿ ತೊಡಗಬೇಕು ಎಂಬುದು ಮೊದಲೇ ನಿರ್ಧರಿತವಾಗಿರಬೇಕಾಗುತ್ತದೆ. ಭಾರತ ಸ್ವಾಂತಂತ್ಯ ನಂತರ ಹಲವಾರು ಕೈಗಾರಿಕ ನೀತಿಗಳನ್ನು ಘೋಷಿಸಿ ಆರ್ಥಿಕ ವ್ಯವಸ್ಥೆಗೆ ಸೂಕ್ತ ನಿರ್ದೇಶನಗಳನ್ನು ಕೊಡಲು ಪ್ರಯತ್ನಿಸಿದೆ. ಈ ಹಿನ್ನೆಲೆಯಲ್ಲಿ ಕೈಗಾರಿಕ ನೀತಿ ಎಂದರೇನು ಎಂಬುದು ತೀರಾ ಅವಶ್ಯಕವಾಗಿದೆ.

ಕೈಗಾರಿಕ ಸ್ಥಾಪನೆ, ಬೆಳವಣಿಗೆ ಅವುಗಳ ಕಾರ್ಯಚರಣೆ ಮತ್ತು ಆಡಳಿತ ನಿರ್ವಹಣೆಯ ವಿಚಾರಗಳಿಗೆ ಸಂಬಂಧಿಸಿದ ಸರ್ಕಾರದ ಧೋರಣೆ ಮತ್ತು ನೀತಿಯು ಕೈಗಾರಿಕ ನಿತಿಯಾಗಿದೆ. ಸರ್ಕಾರದ ಕೈಗಾರಿಕ ನಿತಿಯು ಕೈಗಾರಿಕ ಸ್ಥಾಪನೆ ಮತ್ತು ನಿರ್ವಹಣೆಗೆ ಸಂಬಂಸಿದುದನ್ನು ಒಳಗೊಂಡಿರುರುವ ಎಲ್ಲ ತತ್ವಗಳು ನಿತಿಗಳು ನಿಯಮಗಳು ಮತ್ತು ನಕ್ಷೆಗಳ ವಿಷಯಗಳನ್ನು ಒಳಗೊಂಡಿರುತ್ತದೆ. ಖಾಸಗಿಯವರು ಯಾವ ಕೈಗಾರಿಕಗಳನ್ನು ಸ್ಥಾಪಿಸಬಹುದು ಕೈಗಾರಿಕ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ಮುಂತಾದ ವಿಷಯಸಗಳನ್ನು ಕೈಗಾರಿಕಾ ನಿತಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ವೇಳೆಯಲ್ಲಿ ಭಾರತದ ಕೈಗಾರಿಕ ರಂಗ ತುಂಬಾ ಚಿಕ್ಕದಾಗಿತ್ತು ಹಾಗೂ ಅದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿತ್ತು ಭಾರತದಲ್ಲಿ ಸ್ವಾತಂತ್ಯ ಬರುತ್ತಲೇ ಭಾರತ ಸರ್ಕಾರ 1947 ರ ಡಿಸೆಂಬರ್‌ನಲ್ಲಿ ಕೈಗಾರಿಕ ಸಮಾನತೆವೊಂದನ್ನು ಕೈಗೊಂಡಿತಲ್ಲದೆ ಸಾರ್ವಜನಿಕ ಮತ್ತು ಖಾಸಗಿ ರಂಗದ ಕೈಗಾರಿಕೆಗಳನ್ನು ವ್ಯವಸ್ಥಿತವಾಗಿ ವಿಭಜಿಸಿತು ತತ್ಪರಿಣಾಮವಾಗಿ ಸ್ವಾತಂತ್ರ ಭಾರತದ ಮೊದಲ ಕೈಗಾರಿಕೆ ನೀತಿ 1948ರ ಏಪ್ರಿಲ್ 6 ರಂದು ಘೋಷಿಸಲ್ಪಟಿತು.

## 1991ರ ನೂತನ ಕೈಗಾರಿಕ ನೀತಿ :

ಭಾರತ ಸರ್ಕಾರದ ಕೈಗಾರಿಕೆಗಳ ಅಭಿವೃದ್ಧಿ 1991 ರಿಂದ ಹೊಸ ಕಾರ್ಯನಿತಿಯನ್ನು ಅನುಸರಿಸುತ್ತಿದೆ. ಕೈಗಾರಿಕ ನೀತಿಯಲ್ಲಿ ಅಗತ್ಯ ಸುಧಾರಣೆಗಳನ್ನು ತರುವ ಸಲುವಾಗಿ ಸರ್ಕಾರ' 1991 ರ ಜುಲೈ 24 ರಂದು ತನ್ನ ನೂತನ ಕೈಗಾರಿಕ ನೀತಿಯನ್ನು ಘೋಷಿಸಿತು ಈ ನೀತಿಯು 1956ರ ಕೈಗಾರಿಕ



downloaded from: www.kpscvaani.com

ನೀತಿಗಿಂತ ತೀರಾ ಭಿನ್ನವಾಗಿದ್ದು ಅದು ಆರ್ಥಿಕತೆಯಲ್ಲಿ ವ್ಯಾಪಕ ಬದಲಾವಣೆಯನ್ನು ಪರಿಚಯಿಸಿತು, ನೂತನ ನೀತಿಯ ಮೂಲಭೂತ ತತ್ವ ಬದಲಾವಣೆಯೊಂದಿಗೆ ವಿಸ್ತರಣೆ ಎಂಬುದಾಗಿದೆ, ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ಎಂಬುವು ಈ ನೂತನ ನೀತಿಯ ಮೂರು ಪ್ರಮುಖ ಘೋಷಣೆಗಳಾಗಿವೆ.

## 1991 ನೂತನ ಕೈಗಾರಿಕ ನೀತಿಯ ಉದ್ದೇಶಗಳು :

1991 ನೂತನ ಕೈಗಾರಿಕ ನೀತಿಯ ಪ್ರಮುಖ ಧ್ಯೇಯೋದ್ದೇಶಗಳು ಈ ಮುಂದಿನಂತಿವೆ.

- ಕಳೆದ 40 ವರ್ಷಗಳ ಯೋಜನಾವಧಿಯಲ್ಲಿ ಸಾಧಿಸಿದಲಾದ ಸಮರ್ಥ್ಯವನ್ನು ಇನ್ನೂ ಬಲಪಡಿಸುವುದು ಹಾಗೂ ಈಗಾಗಲೆ ಲಭ್ಯವಿರುವ ಲಾಭಗಳನ್ನು ಬಳಸಿಕೊಂಡು ಕೈಗಾರಿಕಾಭಿವೃದ್ಧಿ ಸಾಧಿಸುವುದು.
- ಆರ್ಥಿಕ ವ್ಯವಸ್ಥೆಯಲ್ಲಿರುವ ಏರುಪೇರುಗಳು ಮತ್ತು ಬಲಹೀನತೆಗಳನ್ನು ಸರಿಪಡಿಸುವುದು
- ಉತ್ಪಾದನಾ ಸಾಮರ್ಥ್ಯ ಮತ್ತು ಉದ್ಯೋಗಗಳಲ್ಲಿ ಸುರಕ್ಷಿತ ಪ್ರಗತಿ ಸಾಧಿಸುವುದು ಮತ್ತು
- ತಾಂತ್ರಿಕ ಚಲನಾತ್ಮಕತೆ ಮತ್ತು ಅಂತರರಾಷ್ಟ್ರೀಯ ಪೈಪೋಟಿ ಸಾಮರ್ಥ್ಯವನ್ನು ವೃದ್ದಿಸಿಕೊಳ್ಳುವುದು.

1991 ಆಗಸ್ಟ್‌ನಿಂದ 2007ರ ನವಂಬರ್‌ವರೆಗಿನ ಕ್ಷೇತ್ರವಾರು ಅಥವಾ ವಲಯವಾರು ವಿದೇಶಿ ನೇರ ಹೂಡಿಕೆಯ ಒಳಹರಿವನ್ನು ಗಮನಿಸಿದರೆ ಅತಿ ಹೆಚ್ಚು ಒಳಹರಿವು ದತ್ತಾಂಶ ಪರಷ್ಕರಣೆ ಸಾಫ್ಟ್ ವೇರ್ ಮತ್ತು ಕನ್ಸಲ್ಟೆನ್ಸಿ ಸೇವೆಗಳಿಗೆ ನಂತರ ಔಷಧ ಕೈಗಾರಿಕೆ ಮತ್ತು ವಾಹನ ತಯಾರಿಕೆ ಕೈಗಾರಿಕೆ ಹೊಂದಿರುವುದು ಕಂಡುಬರುತ್ತದೆ.

## ಖಾಸಗಿ ವಲಯದ ಪಾಲ್ಗೊಳ್ಳುವಿಕೆ :

ನೂತನ ಆರ್ಥಿಕ ನೀತಿ ಮತ್ತು ಆರ್ಥಿಕ ಸುಧಾರಣೆಗಳು ಖಾಸಗಿ ವಲಯದ ಬೆಳವಣಿಗೆಗೆ ಅಪಾರ ಅವಕಾಶಗಳನ್ನು ಕಲ್ಪಿಸಿವೆ. ಪ್ರಸ್ತುತ ಕೇವಲ ಮೂರು ಕೈಗಾರಿಕಗಳನ್ನು ಮಾತ್ರ ಸಾರ್ವಜನಿಕ ವಲಯಕ್ಕೆ ಮಿಸಲಿಡಲಾಗಿದೆ. ಅವುಗಳೆಂದರೆ ಅಣುವಿದ್ಯುತ್ ಇಲಾಖೆಯಿಂದ ಪ್ರಕಟಿಸಿರುವ ಪದಾರ್ಥಗಳನ್ನು ಮತ್ತು ರೈಲ್ವೇ ಸಾರಿಗೆ ಇನ್ನುಳಿದ ಎಲ್ಲಾ ಕೈಗಾರಿಕ ಕ್ಷೇತ್ರದಲ್ಲಿ ಖಾಸಗಿ ಬಂಡವಾಳಕ್ಕೆ ಮಿತವಾಗಿ ಅನುಮತಿ ನೀಡಲಾಗಿದೆ

ತಾತ್ವಿಕವಾಗಿ ಸರ್ಕಾರದ ಹತೋಟಿಯ ನಷ್ಟ ಅಥವ ನಷ್ಟವಿಲ್ಲದೆ ರಾಷ್ಟ್ರೀಕೃತ ಕೈಗಾರಿಕೆಗಳು ಅಥವಾ ವಾಣಿಜ್ಯ ಉದ್ಯಮಗಳಲ್ಲಿ ಸರ್ಕಾರಿ ಮಾಲಿಕತ್ವದ ಸಮ ಬಂಡವಾಳವನ್ನು ಖಾಸಗಿ ಹೂಡಿಕೆ ಮಾಡುವುದನ್ನು ಖಾಸಗಿಕರಣ ಅಥವಾ ಖಾಸಗಿ ವಲಯದ ಭಾಗವಹಿಸುವಿಕೆ ಎನ್ನಲಾಗುತ್ತದೆ ಖಾಸಗಿ ವಲಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಅಳಪಡಿಸಿಕೊಳ್ಳಲಾದ ಪ್ರಮುಖ ಕ್ರಮಗಳು ಈ ಮುಂದಿನಂತಿವೆ



downloaded from: www.kpscvaani.com

- ಉಕ್ಕು, ದೂರಸಂಪರ್ಕ ಬಂದರು ಅಭಿವೃದ್ಧಿ ವಾಯುಯಾನ ಮತ್ತು ಇಂಧನ ಕ್ಷೇತ್ರದಲ್ಲಿ ಖಾಸಗಿ ಕಾರ್ಪೋರೇಟ್ ವಲಯದ ಪ್ರವೇಶಕ್ಕೆ ಅನುಮತಿ ನೀಡುವುದು
- ಸಾರ್ವಜನಿಕ ವಲಯಕ್ಕೆ ಯಾವುದೇ ಹೊಸ ಬಜೆಟರಿ ಬೆಂಬಲ ನೀಡದಿರುವುದು
- ಸಾರ್ವಜನಿಕ ಉದ್ಯಮಗಳ ಸಮ ಬಂಡವಾಳದ ಒಂದು ಭಾಗವನ್ನು ಖಾಸಗಿ ಕ್ಷೇತ್ರದಲ್ಲಿ ಮಾರಟ ಮಾಡುವುದು.
- ಅಂತರಾಷ್ಟ್ರೀಕರಣ ಅಂದರೆ ಸಾರ್ವಜನಿಕ ಉದ್ಯಮಗಳ ಮಾಲಿಕತ್ವವನ್ನು ಖಾಸಗಿಯವರಿಗೆ ಹಸ್ತಾಂತರಿಸುವುದು ಮತ್ತು
- ಸಾರ್ವಜನಿಕ ಕ್ಷೇತ್ರದಲ್ಲಿ ಹೊಸ ಘಟಕಗಳ ಸ್ಥಾಪನೆ ಮತ್ತು ಭವಿಷ್ಯದ ವಿಸ್ತರಣೆ ಮೇಲೆ ನಿರ್ಬಂಧ.

## ಸಾರ್ವಜನಿಕ ರಂಗದ ಉದ್ಯಮಗಳ ಸಮಸ್ಯೆಗಳು :

ಭಾರತ ಒಂದು ಮಿಶ್ರ ಆರ್ಥಿಕ ವ್ಯವಸ್ಥೆ ಆದ್ದರಿಂದ ಇಲ್ಲಿ ಸಾರ್ವಜನಿಕ ಖಾಸಗಿ ಮತ್ತು ಸಂಯುಕ್ತ ವಲಯ ಮತ್ತು ಖಾಸಗಿ ವಲಯಗಳು ಸಹ ಅಸ್ತಿತ್ವ ಹೊಂದಿರುವ ಭಾರತದ ಆರ್ಥಿಕತೆಯಲ್ಲಿ ಕೆಲ ಉದ್ಯಮಗಳು ಸಾರ್ವಜನಿಕ ವಲಯದಲ್ಲೂ ಕೆಲ ಉದ್ಯಮಗಳು ಖಾಸಗಿ ವಲಯದಲ್ಲೂ ಸ್ಥಾಪಿಸಲ್ಪಟ್ಟಿವೆ. ದೇಶದಲ್ಲಿ ಕಾರ್ಯನಿರತವಾಗಿರುವ ಈ ವಲಯಗಳು ವಿಶಿಷ್ಟ ಗುಣ ಲಕ್ಷಣಗಳನ್ನು ಹೊಂದಿವೆ .

## ಸಾರ್ವಜನಿಕ ಉದ್ಯಮಗಳ ಅರ್ಥ ವಿವರಣೆ :

ಸರ್ಕಾರದ ನಿಯಂತ್ರಣ ಹಾಗೂ ಒಡೆತನಕ್ಕೆ ಒಳಪಟ್ಟಿರುವ ಕೈಗಾರಿಕೆಗಳಿಗೆ ಸಾರ್ವಜನಿಕ ವಲಯದ ಕೈಗಾರಿಕಗಳೆಂದು ಹೆಸರು. ಸಾರ್ವಜನಿಕ ವಲಯ ಎಂದರೆ ಸರ್ಕಾರಿ ವಲಯದಲಾಗಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವೇ ಕೆಲ ಉದ್ಯಮಗಳನ್ನು ಸ್ಥಾಪಿಸಲು ಮುಂದಾಗುತ್ತದೆ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸರ್ಕಾರಗಳ ಸಂಯುಕ್ತ ಒಡೆತನದಲ್ಲಿರುವ ಅಥವಾ ಯಾವುದೇ ಸರ್ಕಾರದ ಸ್ಥಾಪಿಸಿದ ಉದ್ಯಮ ಸಾರ್ವಜನಿಕ ಅನುಸರಿಸಿತವಾದ್ದರಿಂದ ತೀವ್ರ ಕೈಗಾರಿಕಾಭಿವೃದ್ಧಿ ಸಾಧನೆಗೆ ಸಾರ್ವಜನಿಕ ವಲಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು.

## ಸಾರ್ವಜನಿಕ ವಲಯದ ಉದ್ದೇಶಗಳು :

ಭಾರತದಲ್ಲಿ ಸಾರ್ವಜನಿಕ ವಲಯ ಈ ಕೆಳಗಿನ ಧ್ಯೇಯೊದ್ದೇಶಗಳ ಸಾಧನೆಗಾಗಿ ಅಸ್ತಿತ್ವಕ್ಕೆ ಬಂದಿದೆ.

1. ಏಕಸ್ವಾಮ್ಯ ಹತೋಟಿಯ ನಿಯಂತ್ರಣ
2. ಬೆಳವಣಿಗೆ ದರವನ್ನು ಹೆಚ್ಚಿಸುವುದು



downloaded from: www.kpscvaani.com

3. ಸಮಾಜವಾದಿ ಸ್ವರೂಪ ಆರ್ಥಿಕ ವ್ಯವಸ್ಥೆ ಸಾಧನೆ
4. ಪ್ರಾದೇಶಿಕ ಅಸಮತೋಲನ ನಿವಾರಣೆ
5. ಆರ್ಥಿಕ ಅಸಮಾನತೆಯನ್ನು ತಗ್ಗಿಸುವುದು
6. ಆರ್ಥಿಕ ಅಭಿವೃದ್ಧಿ
7. ಸಾಮಾಜಿಕ ಪರಿವರ್ತನೆಯ ಸಾಧನೆ ಇತ್ಯಾದಿ

## ಸಾರ್ವಜನಿಕ ವಲಯದ ಅವಶ್ಯಕತೆ :

ಸಾರ್ವಜನಿಕ ವಲಯ ಈ ಕೆಗಿನ ಕಾರಣಗಳಿಂದಾಗಿ ಬೇಕಾಗುವುದು

1. ಭಾರಿ ಹೂಡಿಕೆ ಮತ್ತು ಅಲ್ಪ ಪ್ರತಿಫಲ ನೀಡುವ ಕೈಗಾರಿಕೆಗಳನ್ನು ಸ್ಥಾಪಿಸಲು
2. ಮೂಲಭೂತ ಆಗತ್ಯ ಕೈಗಾರಿಕಗಳನ್ನು ಸ್ಥಾಪಿಸಲು
3. ಪ್ರಾದೇಶಿಕ ಆಸಮತೋಲನದ ನಿವಾರಣೆ
4. ಸಮಾಜವಾದಿ ಸ್ವರುಪ ಸಮಾಜದ ನಿರ್ಮಾಣ
5. ಉಳಿತಾಯ ಮತ್ತು ಬಂಡವಾ ಸಂಚಯನ ಹಾಗು
6. ಖಾಸಗಿ ವಲಯದ ಅವ್ಯವಹಾರ ಅಕ್ರಮಗಳ ನಿಯಂತ್ರಣ

## ಸಾರ್ವಜನಿಕ ಉದ್ಯಮಗಳ ಸಮಸ್ಯೆಗಳು :

ಭಾರತದಲ್ಲಿ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಎಲ್ಲವೂ ನೆಟ್ಟಗಿಲ್ಲ ಅವುಗಳು ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿವೆ. ಪ್ರಮುಖ ಸಮಸ್ಯೆಗಳ ಪರಿಚಯ ಮುಂದಿನಂತಿದೆ.

### 1. ಅಧಿಕಗೊಳ್ಳುತ್ತಿರುವ ನಷ್ಟ

ಹಲವಾರು ಸಾರ್ವಜನಿಕ ಉದ್ಯಮಗಳು ನಷ್ಟ ಕೂಪಗಳಾಗಿ ಮಾರ್ಪಟ್ಟವೆ. ಅದಕ್ಷತೆ ಭ್ರಷ್ಟಾಚಾರ ಸರ್ಕಾರಿ ಬಂಡವಾಳದ ಸಮಸ್ಯೆ ಮುಂತಾದ ಕಾರಣಗಳಿಂದಾಗಿ ಅನೇಕ ಸಾರ್ವಜನಿಕ ಉದ್ಯಮಗಳು ಸತತ ನಷ್ಟ ಅನುಭವಿಸತ್ತಿವೆ ಇದು ಸರ್ಕಾರಕ್ಕೆ ಹೊರಲಾಗದ ಹೊರೆಯಾಗಿ ಪರಿನಮಿಸಿದೆ.

### 2. ಇಳೀಮುಖವಾಗುತ್ತಿರುವ ಪಾಲು

ಒಟ್ಟು ದೇಶಿಯ ಉತ್ಪನ್ನ ಮತ್ತು ಉಳಿತಾಯ ಹಾಗೂ ಒಟ್ಟು ಯೋಜಿತ ಹೀಡಿಕೆಯಲ್ಲಿ ಸಾರ್ವಜನಿಕ ಉದ್ಯಮಗಳ ಪಾಲು ದಿನೇ ದಿನೇ ಇಳಿಮುಖವಾಗುತ್ತದೆ. ಇದು ಅತ್ಯಂತ ಅತಂಕಕಾರಿ ಬೆಳವಣಿಗೆಯಾಗಿ ಪರಿಣಮಿಸಿದೆ.



downloaded from: www.kpscvaani.com

### 3. ಗುರಿ ತಲುಪುವುವಲ್ಲಿ ವಿಫಲ

ಅನೇಕ ಸಾರ್ವಜನಿಕ ಉದ್ಯಮಗಳು ತಮಗೆ ನಿಗದಿಗೊಳಿಸಲಾಗುವ ಉತ್ಪಾದನೆಯ ಭೌತಿಕ ಗುರಿಗಳನ್ನು ತಲುಪುವಲ್ಲಿ ವಿಫಲವಾಗಿರುವುದು ಈ ಬೆಳವಣಿಗೆ ದಿನದಿಂದ ದಿನಕ್ಕೆ ಅಧಿಕಗೋಳ್ಳುತ್ತಿದೆ.

### 4. ಸಾಮರ್ಥ್ಯದ ಅಪೂರ್ಣ ಉಪಯೋಗ

ಹೆಚ್ಚಿನ ಸಾರ್ವಜನಿಕ ಉದ್ಯಮಗಳಲ್ಲಿ ಅವುಗಳ ಸ್ಥಾಪಿತ ಸಾಮರ್ಥ್ಯದ ಸಂಪೂರ್ಣ ಬಳಕೆ ವಿವಿಧ ಕಾರಣಗಳಿಂದಾಗಿ ಸಾಧ್ಯವಾಗುತ್ತಿಲ್ಲ ಅವುಗಳ ಸಾಮರ್ಥ್ಯದ ಬಳಕೆ ಕೆಲವೊಮ್ಮೆ ಶೇಕಡ 50ನ್ನೂ ಮೀರುವುದಿಲ್ಲ

### 5. ಉದ್ಯೋಗಿಗಳ ಹೊರೆ

ಅನೇಕ ಸಾರ್ವಜನಿಕ ಉದ್ಯಮಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಉದ್ಯೋಗಿಗಳನ್ನು ನೇಮಿಸಿಕೊಳ್ಳಲಾಗಿದೆ. ಅದು ದೊಡ್ಡ ಹೊರೆಯಾಗಿ ಪರಿಣಮಿಸಿದ್ದು ಹಲವಾರು ಉದ್ಯಮಗಳನ್ನು ನಷ್ಟದ ಕೂಪಕ್ಕೆ ತಳ್ಳಿದೆ. ಅನಾನುಕೂಲಕರ ಬಂಡವಾಳ ಉತ್ಪನ್ನ ಅನುಪಾತ

ಬಹುತೇಕ ಸಾರ್ವಜನಿಕ ಉದ್ಯಮಗಳಲ್ಲಿ ಬಂಡವಾಳ ಉತ್ಪನ್ನದ ಅನುಪಾತ ಅನಾನುಕೂಲಕರವಾಗಿದೆ. ಈ ಉದ್ಯಮಗಳಲ್ಲಿ ಪ್ರತಿ ಘಟಕದ ಬಂಡವಾಳದ ಉತ್ಪನ್ನದ ಪ್ರಮಾಣ ಅತ್ಯಂತ ಕಡಿಮೆಯಿರುವುದು ಶೋಚನೀಯ ಸಂಗತಿಯಾಗಿದೆ.

## ಸಣ್ಣಕೈಗಾರಿಕೆಗಳ ಮಹತ್ವ :

ಭಾರತವು ಮೂಲತಃ ಹಳ್ಳಿಗಳಿಂದ ಕೂಡಿದ ದೇಶ ಆಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆ ಬಡತನ ನಿರುದ್ಯೋಗ ಆದಾಯ ಅಸಮಾನತೆ ಪ್ರಾದೇಶಿಕ ಅಸಮಾನತೆ ಮುಂತಾದ ಜ್ವಲಂತ ಸಮಸ್ಯೆಗಳಿರುವ ಭಾರತದಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳು ವಿಶೇಷ ಮಹತ್ವ ಪಡೆದಿವೆ ರಾಷ್ಟ್ರಪಿತ ಮಹಾತ್ಮಾ ಗಾಂದೀಜಿಯವರು ಹೇಳಿರುವಂತೆ ಭಾರತ ದೇಶದ ಉದ್ಧಾರ ಸಣ್ಣ ಮತ್ತು ಗೃಹ ಕೈಗಾರಿಕಗಳ ಅಭಿವೃದ್ಧಿಯಿಂದ ಮಾತ್ರ ಸಾಧ್ಯ. ಈ ಕೈಗಾರಿಕಗಳು ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸಬಲ್ಲವು ಎಂಬುದು ಈ ಕೆಳಗಿನ ಅಂಶಗಳಿಂದ ಸ್ಪಷ್ಟವಾಗುತ್ತದೆ.

## ಗೃಹ ಮತ್ತು ಸಣ್ಣ ಕೈಗಾರಿಕಗಳ ಸಮಸ್ಯೆಗಳು :

ಸಣ್ಣ ಮತ್ತು ಗೃಹ ಕೈಗಾರಿಕೆಗಳು ಅನೇಕ ಸಮಸ್ಯೆಗಳಿಂದ ನರಳುತ್ತಿವೆ. ಅನೇಕ ಸಣ್ಣ ಕೈಗಾರಿಕೆಗಳು ವಿವಿಧ ಕಾರಣಗಳಿಂದಾಗಿ ರೊಗಗ್ರಸ್ಥಗೊಂಡಿದೆ 2001 ಮಾರ್ಚ್ ವೇಳೆಗೆ ರೋಗಗ್ರಸ್ಥ ಘಟಕಗಳ ಸಂಖ್ಯೆ ಸುಮಾರು 2.49 ಲಕ್ಷದಷ್ಟಿದ್ದುವು. ಸಣ್ಣ ಮತ್ತು ಗೃಹ ಕೈಗಾರಿಕಗಳು ಎದುರಿಸಿತ್ತಿರುವ ಪ್ರಮುಖ ಸಮಸ್ಯೆ ಈ ಕೆಳಕಂಡತಿದೆ.



downloaded from: www.kpscvaani.com

- **ಬಂಡವಾಳದ ಕೊರತೆ**

ಸಣ್ಣ ಮತ್ತು ಗೃಹ ಕೈಗಾರಿಕಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಹಣಕಾಸಿನ ಕೊರತೆಯು ತುಂಬಾ ಗಂಭೀರ ಸಮಸ್ಯೆಯಾಗಿದೆ . ಈ ಕೈಗಾರಿಕಗಳಿಗೆ ಹಣಕಾಸನ್ನು ಪೂರೈಸುವ ಹಣಕಾಸಿನ ಸಂಸ್ಥೆಗಳು ಸಾಕಷ್ಟು ಸಂಖ್ಯೆಯಲ್ಲಿ ಬೆಳೆದಿಲ್ಲ ಇದರಿಂದಾಗಿ ಈ ಕೈಗಾರಿಕೆಗಳು ಅನಿವಾರ್ಯವಾಗಿ ಲೇವಾದೇವಿಗಾರರಿಂದ ಮತ್ತು ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆಯಬೇಕಾಗಿದೆ.

- **ಮಾರುಕಟ್ಟೆ ಸಮಸ್ಯೆ**

ಸಣ್ಣ ಕೈಗಾರಿಕೆಗಳು ಮಾರುಕಟ್ಟೆ ಸಮಸ್ಯೆಯನ್ನು ಎದುರಿಸುತ್ತಿವೆ ಈ ಕೈಗಾರಿಕೆಗಳು ಯಾವುದೇ ರೀತಿಯ ಸಂಘಟಿತ ಮಾರುಕಟ್ಟೆ ವ್ಯವಸ್ಥೆ ಹೊಂದಿಲ್ಲ ಉತ್ಪನ್ನಗಳ ನಿಷ್ಕರ್ಷೆ ವಿಂಗಡಣೆ ಪ್ರಚಾರ ಮತ್ತು ಸಾರಿಗೆ ವ್ಯವಸ್ಥೆಗಳು ಲಭ್ಯವಿಲ್ಲ. ಇದರಿಂದಾಗಿ ಸಣ್ಣ ಕೈಗಾರಿಕಗಳು ತಮ್ಮ ಸರಕುಗಳನ್ನು ಹತಾಶವಾಗಿ ಮಾರಬೇಕಾಗಿದೆ.

## ಸಣ್ಣ ಕೈಗಾರಿಕಳಿಗೆ ಸರ್ಕಾರದ ನೆರವು :

### 1. ಸಂಘಟನಾ ಸಹಾಯ

ಸಣ್ಣ ಮತ್ತು ಗೃಹ ಕೈಗಾರಿಕಗಳ ಸಂಘಟನಾ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದೆ ತಾಂತ್ರಿಕ ಮತ್ತು ಮಾರಾಟದ ವಿಷಯಗಳಲ್ಲಿ ಸಲಹೆ ನೀಡಲು ಕಚ್ಚಾ ಸಾಮಗ್ರಿಗಳು ಮತ್ತು ಬಿಡಿ ಭಾಗಗಳನ್ನು ಪೂರೈಸಲು ರಾಷ್ಟ್ರೀಯ ಸಣ್ಣ ಕೈಗಾರಿಕ ನಿಗಮ ಮತ್ತು ಕೈಗಾರಿಕ ಮಂಡಳಿ ಅಖಿಲ ಭಾರತ ಕುಶಲ ಕೈಗಾರಿಕ ಮಂಡಳಿ ಭಾರತ ಕೈಮಗ್ಗ ಮಂಡಳಿ ಕೇಂದ್ರಿಯ ರೇಷ್ಮೆ ಮಂಡಳಿ ನಾರು ನಿಗಮ ಮುಂತಾದ ರಾಷ್ಟ್ರಮಟ್ಟದ ಮಂಡಳಿಗಳನ್ನು ಸ್ಥಾಪಿಸಲಾಗಿದೆ.

### 2. ಹಣಕಾಸಿನ ಸಹಾಯ :

ಸಣ್ಣ ಕೈಗಾರಿಕೆಗಳು ಹಣಕಾಸು ಕೊರತೆಯನ್ನು ಎದುರಿಸುತ್ತಿರುವುದರಿಂದ ಅವುಗಳಿಗೆ ಹಣಕಾಸಿನ ಸಹಾಯ ಮಾಡಲು ಸರ್ಕಾರ ಅವುಗಳನ್ನು 'ಆದ್ಯತಾ ವಲಯ' ಎಂದು ಪರಿಗಣಿಸಿದೆ. ಈ ವಲಯಕ್ಕೆ ಹಣಕಾಸಿನ ಪೂರೈಕೆ ಹೆಚ್ಚಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಕೈಗಾರಿಕೆಗಳಿಗೆ ಸರ್ಕಾರದ ನೆರವು ಕಾನೂನಿನ ಅನ್ವಯ ರಾಜ್ಯಸರ್ಕಾರಗಳು ಸಣ್ಣ ಕೈಗಾರಿಕೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಮದ್ಯಮಾವಧಿ ಸಾಲ ಪೂರೈಸುತ್ತಿವೆ.
- ಪ್ರತಿ ರಾಜ್ಯಗಳಲ್ಲಿ ರಾಜ್ಯ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕಡಿಮೆ ಬಡ್ಡಿ ದರದ ಮದ್ಯಮಾವಧಿ ಸಾಲ ಒದಗಿಸಲಾಗುತ್ತಿದೆ.



downloaded from: www.kpscvaani.com

- ಸಹಕಾರ ಬ್ಯಾಂಕುಗಳು ಮತ್ತು ಭಾರತೀಯ ಸ್ಟೇಟ್ ಬ್ಯಾಂಕುಗಳು ಈ ಕೈಗಾರಿಕೆಗಳಿಗೆ ಸಾಲ ಕೊಡುವಂತೆ ನಿರ್ದೀಶಿಸಲಾಗಿದೆ. ಸಹಕಾರ ಬ್ಯಾಂಕುಗಳ ಮೂಲಕ ಹಣಕಾಸು ಪೂರೈಸಲಾಗುತ್ತಿದೆ.
- ಬ್ಯಾಂಕುಗಳ ಮತ್ತು ಇತರ ಹಣಕಾಸಿನ ಸಂಸ್ಥೆಗಳು ನೀಡುವ ಸಾಲಗಳಿಗೆ ರಿಜರ್ವ್ ಬ್ಯಾಂಕು ಭದ್ರತೆ ನಿಡುವ 'ಸಾಲ ಭರವಸೆ ಯೊಜನೆ' ಯನ್ನು 1960ರಲ್ಲಿ ಜಾರಿಗೊಳಿಸಿತು.
- ಸಣ್ಣ ಕೈಗಾರಿಕೆಗಳಿಗೆ ಹಣಕಾಸನ್ನು ಪೂರೈಸುವುದಕ್ಕೊಸ್ಕರ ಅನೇಕ ವಿಶೇಷ ಹಣಕಾಸಿನ ಸಂಸ್ಥೆಗಳನ್ನು ಮತ್ತು ಸೌಲಭ್ಯಗಳನ್ನು ಸ್ಥಾಪಿಸಲಾಗಿದೆ. ಅವುಗಳೆಂದರೆ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಧಿ, ರಾಷ್ಟ್ರೀಯ ಈಕ್ವಿಟಿ ನಿಧಿ, ಏಕಕಿಂಡಿ ಸೌಲಭ್ಯ ಭಾರತದ ಸಣ್ಣ ಕೈಗಾರಿಕೆ ಅಬಿವೃದಿ ಬ್ಯಾಂಕು ಮುಂತಾದವು.

### 3. ಕಚ್ಚಾ ಸಾಮಗ್ರಿಗಳ ಪೂರೈಕೆ :

ಕೊರತೆಯಲ್ಲಿರುವ ಪ್ರಮುಖ ಕಚ್ಚಾ ಸಾಮಗ್ರಿಗಳನ್ನು ರಾಜ್ಯ ಸಣ್ಣ ಕೈಗಾರಿಕಾ ನಿಗಮಗಳ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಇತ್ತಿಚೆಗೆ ಸರ್ಕಾರ ಅತ್ಯಂತ ಪ್ರಮುಖ ಕಚ್ಚಾ ಸಾಮಗ್ರಿಗಳ ಪೂರೈಕೆಯಲ್ಲಿನ ಕೊರತೆಯನ್ನು ಎದುರಿಸಲು ಕಚ್ಚಾ ಮಾಲುಗಳ ಖಾಪು ದಾಸ್ತಾನು ಸೌಲಭ್ಯಗಳನ್ನು ಜಾರಿಗೆ ತಂದಿದೆ. ಸರ್ಕಾರಿ ವ್ಯಾಪಾರ ನಿಗಮವು ಕೆಲವು ಪ್ರಮುಖ ಕಚ್ಚಾ ಮಾಲುಗಳನ್ನು ಆಮದು ಮಾಡಿಕೊಂಡು ವಿತರಿಸುತ್ತಿದೆ.

### 4. ಮಾರುಕಟ್ಟೆ ಸಹಾಯ :

ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಸಹಾಯ ಒದಗಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ, ಅವುಗಳೆಂದರೆ ಸಣ್ಣ ಕೈಗಾಕೆಗಳ ಕೆಲವು ಸರಕುಳನ್ನು ಸರ್ಕಾರವೇ ಕೊಳ್ಳುವುದು, ಸರ್ಕಾರಗಳು ಕೊಳ್ಳವಾಗ ಬೆಲೆ ಆದ್ಯತೆ ನೀಡುವುದು, ಪೈಪೋಟಿ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಗುಣಮಟ್ಟ ನಿಯಂತ್ರಣ ಮತ್ತು ಪರೀಕ್ಷಾ ಸೌಲಭ್ಯಗಳು ಮತ್ತು ಸಣ್ಣ ಕೈಗಾರಿಗಿಕೆಗಳ ಉತ್ಪನ್ನಗಳ ಮಾರಾಟಕ್ಕಾಗಿ ಸಹಕಾರಿ ಸಂಘಗಳ ಸ್ಥಾಪನೆ ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಮಾರುಕಟ್ಟೆ ಸೌಲಭ್ಯ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಸರ್ಕಾರ ಆಗಾಗ್ಗೆ ಸಣ್ಣ ಕೈಗಾರಿಕಾ ಸರಕುಗಳ ಪ್ರಚಾರ ಮತ್ತು ಪ್ರದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ. ಸಣ್ಣ ಕೈಗಾರಿಕಾ ಸರಕುಗಳ ಮಾರಾಟಕ್ಕಾಗಿ ಸರ್ಕಾರ ಸಗಟು ಮಾರಾಟ ಕೇಂದ್ರಗಳನ್ನು ಸ್ಥಾಪಿಸಿದೆ. ಜೊತೆಗೆ ಈ ಸರಕುಗಳನ್ನು ಸಹಾಯ ಧನದೊಂದಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡುತ್ತಿದೆ.

### 5. ಕಾರ್ಮಿಕರಿಗೆ ತರಬೇತಿ :

ಕುಶಲಕರ್ಮಿಗಳು ಮತ್ತು ಕಾರ್ಮಿಕರಿಗೆ ತರಬೇತಿ ನೀಡಿ ಅವರ ನಿಪುಣತೆಯನ್ನು ಸುಧಾರಿಸಲು ಸರ್ಕಾರ ಅನೇಕ ಕ್ರಮ ಕೈಗೊಂಡಿದೆ ಅನೇಕ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ಕೈಗಾರಿಕಾ ಅಧಿಕಾರಿಗಳು ಮತ್ತು ಬ್ಲಾಕ್ ಮಟ್ಟದ ವಿಸ್ತರಣಾ ಅಧಿಕಾರಿಗಳಿಗೆ ತರಬೇತಿ ನೀಡಲು ಎಲ್ಲಾ ರಾಜ್ಯಗಳನ್ನು ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಸಣ್ಣ



downloaded from: www.kpscvaani.com

ಕೈಗಾರಿಕೆಗಳಲ್ಲಿ ಉತ್ಪಾದನಾ ತಂತ್ರ ಮತ್ತು ನಿರ್ವಹಣಾ ಕೌಶಲ್ಯಗಳನ್ನು ಸುಧಾರಿಸುವ ಸಲುವಾಗಿ ದೇಶದಲ್ಲಿ ನಾಲ್ಕು ಪ್ರಾದೇಶಿಕ ತಂತ್ರಜ್ಞಾನ ಸಂಸ್ಥೆಗಳನ್ನು ಉತ್ಪಾದನಾ ತಂತ್ರ ಮತ್ತು ಇತರೆ ವಿಚಾರಗಳಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲು ಗೃಹ ಕೈಗಾರಿಕಾ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ತಂತ್ರಜ್ಞಾನದ ಸುಧಾರಣೆ ಮತ್ತು ಉತ್ಪಾದನಾ ಕೌಶಲ್ಯದ ಸುಧಾರಣೆ ವಿಷಯವಾಗಿ ತರಬೇತಿ ನೀಡಲು ಕೋಲ್ಕತ್ತ. ಲೂಧಿಯಾನ ಮತ್ತು ಹೈದರಾಬಾದ್‌ಗಳಲ್ಲಿ ಸಲಕರಣೆ ಕೊಠಡಿ ಮತ್ತು ತರಬೇತಿ ಕೇಂದ್ರ ಗಳನ್ನು ಸ್ಥಾಪಿಸಲಾಗಿದೆ .

## 6. ಖಜಾನೆ ಉತೇಜಕಗಳು :

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಣ್ಣ ಮತ್ತು ಗೃಹ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಅನೇಕ ಖಜಾನೆ ಉತೇಜಕಗಳನ್ನು ನೀಡುತ್ತಿವೆ. ಅವುಗಳೆಂದರೆ :

- ಹೊಸ ಕೈಗಾರಿಕೆಗಳಿಗೆ ತೆರಿಗೆ ರಜೆ,
- ಹಿಂದುಳಿದ ಪ್ರದೇಶಗಳ ಕೈಗಾರಿಕೆಗಳಿಗೆ ಬಂಡವಾಳ ಸಹಾಯದನ,
- ಸುಂಕ ವಿನಾಯಿತಿ
- ಬೆಲೆ ಆದ್ಯತೆ,
- ತೆರಿಗೆ ವಿನಾಯಿತಿ ಇತ್ಯಾದಿ.

ಕುಶಲಕರ್ಮಿಗಳ ನೈಪುಣ್ಯತೆಯನ್ನು ಹೆಚ್ಚಿಸಲು ಹಾಗು ಹಿಂದುಳಿದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಲು 'ಗ್ರಾಮೀಣ ಕೈಗಾರಿಕೆ ಯೋಜನೆ''ಗ್ರಾಮೀಣ ಕುಶಲಕರ್ಮಿ ಕಾರ್ಯಕ್ರಮ'ಮುಂತಾದುವನ್ನು ಜಾರಿಗೆ ತರಲಾಗಿದೆ. ಸಣ್ಣ ಕೈಗಾರಿಕೆಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸುಮಾರು 600 ಕ್ಕಿಂತಲೂ ಅಧಿಕ 'ಕೈಗಾರಿಕಾ ಎಸ್ಟೇಟ್'ಗಳು, ಕಚ್ಚಾ ಸರಕುಗಳು, ಯಂತ್ರದ ಬಿಡಿಭಾಗಗಳು ಮುಂತಾದ ಸಲಕರಣೆಗಳನ್ನು ಪೋರೈಸಲು 460'ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

## 7. ವಿದ್ಯುತ್ ಪೂರೈಕೆ :

ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಆದ್ಯೆತೆ ಮೇಲೆ ವಿದ್ಯುತ್ ಪೊರೈಸಲು ಮುಂದಾಗಿರುವುದರಿಂದಾಗಿ ಸಣ್ಣ ಕೈಗಾರಿಕೆಗಳಲ್ಲಿ ಉತ್ಪದನಾ ಆವ್ಯಾಹತವಾಗಿ ನಡೆಯುವುದು ಸಾಧ್ಯವಾಗಿದ್ದು. ಸರ್ಕಾರ ಸಣ್ಣ ಕೈಗಾರಿಕೆಗಳ ಆಭಿವೃದ್ಧಿಯನ್ನು ಪ್ರೊತ್ಸಾಹಿಸಲು 1983ರರಿಂದೀಚೆಗೆ 'ರಾಷ್ಟೀಯ ಪುರಸ್ಕಾರ ಯೋಜನೆಯನ್ನು ಜಾರಿಗೆ ತಂದಿದ್ದು. ಈ ಯೋಜನೆಯಡಿ ಅತ್ಯುತ್ತಮ ಸಾಹಸಿಗಳಿಗೆ ನಗದುಬಹುಮಾನ ನೀಡಲಾಗುತ್ತದೆ.

ಇಷ್ಟೆಲ್ಲಾ ಕ್ರಮಗಳ ನಡುವೆಯೂ ಸಣ್ಣ ಕೈಗಾರಿಕೆಗಳ ರೋಗಗ್ರಸ್ತಗೊಳ್ಳುತ್ತಿವೆ.' ಚಿಕ್ಕದು ಸುಂದರವಾದ ಎಂಬ ಮಾತಿನಂತೆ ಸಣ್ಣ ಕೈಗಾರಿಕೆಗಳ ಭಾರತದ ಹಲವಾರು ಸಮಸ್ಯೆ ಬಗೆಹರಿಸಿ ರಾಮರಾಜ್ಯ ಸ್ಥಾಪನೆಗೆ



downloaded from: www.kpscvaani.com

ಸಹಾಯ ಮಾಡಬಲ್ಲವಾಗಿದ್ದರಿಂದ ಅವುಗಳನ್ನು ಅಭಿವೃದ್ಧಿಪಡಿಸುವತ್ತ ಸರ್ಕಾರ ಹೆಚ್ಚಿನ ಗಮನಹರಿಸಬೇಕಿದೆ.

## ಮಾನವ ಅಭಿವೃದ್ಧಿ (Human Development) :–

ಮಾನವ ಅಭಿವೃದ್ಧಿ ಎಂಬ ಪರಿಭಾವನೆಯನ್ನು 1997ರಲ್ಲಿ ಯು.ಎನ್.ಡಿ.ಪಿ ರಚಿಸಿದ 'ಮಾನವ ಅಭಿವೃದ್ಧಿ ವರದಿಯಲ್ಲಿ' **ಮೆಹಬೂಬ್–ಉಲ್–ಹಕ್** ರವರ ನೇತೃತ್ವದಲ್ಲಿ ಮೊದಲ ಬಾರಿಗೆ ಅಳವಡಿಸಿಕೊಳ್ಳಲಾಯಿತು. ಈ ವರದಿಯಲ್ಲಿ ವಿವರಿಸಿದಂತೆ ಮಾನವ ಅಭಿವೃದ್ಧಿ ಜನರ ಆಯ್ಕೆಯನ್ನು ವಿಸ್ತರಿಸುವ ಪ್ರಕ್ರಿಯೆ ಬಗೆಯ ಪರಿಭಾವನೆಗಳು ನಿರ್ದಿಷ್ಟವಾದವುಗಳಲ್ಲ. ಜೊತೆಗೆ ಸ್ಥಿರವಾದವೂಗಳೂ ಸಹ ಆಗಿರದೆ ಆಗಿದ್ದಾಂಗೆ ಬದಲಾವಣೆಯನ್ನು ಹೊಂದುತ್ತವೆ. ಆದರೆ ಮಾನವ ಅಭಿವೃದ್ಧಿಯ ಎಲ್ಲ ಹಂತಗಳಲ್ಲಿಯೂ ಎಲ್ಲ ಪರಿಣತರು ಆಯ್ಕೆ ಮಾಡುವ ಮೂರು ಮುಖ್ಯ ವಿಷಯಗಳೆಂದರೆ.

- ಸುದೀರ್ಘ ಜೀವಿತ ಅವಧಿ
- ಆರೋಗ್ಯಕರ ಜೀವನ ಜ್ಞಾನವನ್ನು ಪಡೆಯಲು ಅವಕಾಶ
- ಸಾಕಷ್ಟು ಉನ್ನತ ಮಟ್ಟದ ಜೀವನವನ್ನು ನಿರ್ವಹಿಸಲು ಬೇಕಾದ ಸಂಪನ್ಮೂಲಗಳನ್ನು ಪಡೆಯಲು ಅವಕಾಶ.

ಇವುಗಳಲ್ಲದೆ ರಾಜಕೀಯ, ಆರ್ಥಿಕ, ಸಾಮಾಜಿಕ ಸಾಕಷ್ಟು ಅವಕಾಶಗಳನ್ನು ಪಡೆಯಲು ಸ್ವಾತಂತ್ರ್ಯ, ಉತ್ಪಾದನೆ, ನಿರ್ಮಾಣ ಹಾಗೂ ಆತ್ಮ ಗೌರವ ಮತ್ತು ಅನಿರ್ಬಂದಿತ ಮಾನವ ಹಕ್ಕುಗಳನ್ನು ಸಹ ಬಹು ಜನರ ಆಯ್ಕೆಯಾಗಿರುವುವು. ಇದಲ್ಲದೆ ಈ ವರದಿಯಲ್ಲಿ ವಿವರಿಸುವಂತೆ **ಆದಾಯವು ಮಾನವ ಅಭಿವೃದ್ಧಿಯ ಅಂಶಗಳಲ್ಲಿ ಅತಿ ಮುಖ್ಯವಾದುದು. ಆದರೆ ಅದು ಜೀವನದ ಒಟ್ಟು ಲಕ್ಷಣಗಳನ್ನು ಪ್ರತಿಬಿಂಬಿಸುವುದಿಲ್ಲ.** ಇದರಿಂದ ಮಾನವ ಅಭಿವೃದ್ಧಿಯ ಪರಿಗಣನೆಯಲ್ಲಿ ಆದಾಯಕ್ಕಿಂತಲೂ ಇತರ ಅಂಶಗಳಿಗೆ ಪ್ರಾಧ್ಯಾನ್ಯತೆಯನ್ನು ನೀಡಲಾಗಿದೆ.

ಮಾನವ ಅಭಿವೃದ್ಧಿಯನ್ನು ಮೂರು ಪ್ರಾಥಮಿಕ ಸೂಚ್ಯಂಕಗಳ ಪರಿಗಣನೆಯಿಂದ ಅಳೆಯಲಾಗುವುದು. ಅವುಗಳೆಂದರೆ,

1. ಮಾನವ ಅಭಿವೃದ್ಧಿ ಸೂಚ್ಯಂಕ (HDI)
2. ಮಹಿಳಾ ಅಭಿವೃದ್ಧಿ ಸೂಚ್ಯಂಕ (GDI)
3. ಮಾನವ ಬಡತನ ಸೂಚ್ಯಂಕ (HPI)

### 1. ಮಾನವ ಅಭಿವೃದ್ಧಿ ಸೂಚ್ಯಂಕ (HDI) :

ಮಾನವ ಅಭಿವೃದ್ಧಿ ಸೂಚ್ಯಂಕವು ಮೂರು ಮುಖ್ಯ ಜನಸಂಖ್ಯೆಯ ಗುಣಲಕ್ಷಣಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಸಮೀಕ್ಷಿಸುವುದು. ಇವುಗಳೆಂದರೆ,



downloaded from: www.kpscvaani.com

- ನಿರೀಕ್ಷಿತಾ ಜೀವಿತಾ ಅವಧಿ
- ಆನರ ಆರೋಗ್ಯ ಜ್ಞಾನದ ಪ್ರಮಾಣ (ಇದನ್ನು ವಯಸ್ಕರ ಸಾಕ್ಷರತೆಯ ಪ್ರಮಾಣದ ಮೇಲೆ ನಿರ್ಧರಿಸಲಾಗುವುದು)
- ಜೀವನ ಮಟ್ಟ (ಇದನ್ನು ತಲಾವಾರು ಆದಾಯದ ಮೇಲೆ ನಿರ್ಧರಿಸಲಾಗುವುದು)

ಮಾನವ ಅಭಿವೃದ್ಧಿಯ 2001ರ ವರದಿಯಲ್ಲಿ 1999ರಲ್ಲಿ ದಾಖಲಾದ ಸೂಚ್ಯಂಕದ ಆಧಾರದ ಮೇಲೆ ಪ್ರಪಂಚದ ರಾಷ್ಟ್ರಗಳನ್ನ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

- ಹೆಚ್ಚು ಮಾನವ ಅಭಿವೃದ್ಧಿ ಬೆಳವಣಿಗೆಯ ರಾಷ್ಟ್ರಗಳು ಊಆಖ 0.8 ಕ್ಕಿಂತ ಹೆಚ್ಚು
- ಸಾಧಾರಣಾ ಮಾನವ ಅಭಿವೃದ್ಧಿ – ಊಆಖ 0.5 ರಿಂದ 0.8
- ಕಡಿಮೆ ಮಾನವ ಅಭಿವೃದ್ಧಿ– ಊಆಖ 0.5ಕ್ಕಿಂತ ಕಡಿಮೆ

ಇದರಂತೆ ಪ್ರಪಂಚದ 187 ರಾಷ್ಟ್ರಗಳ ಮಾನವ ಅಭಿವೃದ್ಧಿಯನ್ನು ಕುರಿತು ಈ ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಇದರಲ್ಲಿ ಪ್ರಪಂಚದ ರಾಷ್ಟ್ರಗಳು ಹೆಚ್ಚು ಮಾನವ ಅಭಿವೃದ್ಧಿ ಬೆಳವಣಿಗೆಯ ಹಂತದಲ್ಲಿದೆ. ಇವುಗಳಲ್ಲಿ ನಾರ್ವೆ ಮೊದಲ ಸ್ಥಾನದಲ್ಲಿರುವುದು. ಪ್ರಪಂಚದ 78 ರಾಷ್ಟ್ರಗಳು ಸಾಧಾರಣಾ ಮಾನವ ಅಭಿವೃದ್ಧಿಯ ಹಂತದಲ್ಲಿವೆ. ಉಳಿದ 36 ರಾಷ್ಟ್ರಗಳು ಕಡಿಮೆ ಮಾನವ ಅಭಿವೃದ್ಧಿಯ ಗುಂಪಿನಲ್ಲಿವೆ. 2011ರ ಪರಿಸ್ಥಿಗೆ ಅಂದಾಜಿನಂಥೆ ಭಾರತವು 137ನೆಯ ಸ್ಥಾನವನ್ನು ಹೊಂದಿದೆ. **ಭಾರತವು ಮಾನವ ಅಭಿವೃದ್ಧಿಯ ಮಾರ್ಗದಲ್ಲಿ ಸಾಗಬೇಕಾದ ದಾರಿ ಬಹು ದೂರವಿದೆ.** ಆದಾಗಿಯೂ ಇದರ ಸ್ಥಾನದಲ್ಲಿ ಗಮನಾರ್ಹ ಬದಲಾವಣೆಗಳು ಉಂಟಾಗುತ್ತಿವೆ. 1994–1999 ರ 5 ವರ್ಷಗಳ ಅವಧಿಯಲ್ಲಿ ಇದರ ಸ್ಥಾನವು 138– 115ಕ್ಕೆ ಬದಲಾವಣೆಗೊಂಡಿರುವುದು ಗಮನಾರ್ಹ ಅಂಶವಾಗಿದೆ, ಆದರೆ 2011ರಲ್ಲಿ ಇದು 134ಕ್ಕೆ ಇಳಿಕೆಗೊಂಢಿದೆ.

## 2. ಮಹಿಳಾ ಅಭಿವೃದ್ಧಿ ಸೂಚ್ಯಂಕ (GDI) :

ಮಹಿಳಾ ಅಭಿವೃದ್ಧಿ ಸೂಚ್ಯಂಕವು ಸಮಾಜದಲ್ಲಿ ಮಹಿಳೆಯರ ಪರಿಸ್ಥಿತಿ ಸಾಧನೆಗಳಿಗೆ ಪುರುಷ ಮತ್ತು ಮಹಿಳೆಯರ ನಡುವೆ ಇರುವ ಸಮಾನತೆಯ ಪ್ರಮಾಣ ಇವುಗಳಿಗೆ ನೇರವಾಗಿ ಸಂಬಂಧಿಸಿದೆ. ಮಹಿಳಾ ಅಭಿವೃದ್ಧಿ ಸೂಚ್ಯಂಕದ ಪರಿಗಣನೆಗೆ ಮೂರು ಲಕ್ಷಣಗಳನ್ನು ಪ್ರಧಾನವಾಗಿ ಪರಿಗಣಿಸಲಾಗವುದು. ಅವುಗಳೆಂದರೆ,

1. ಮಹಿಳೆಯರ ನಿರೀಕ್ಷಿತ ಜೀವಿತ ಅವಧಿ
2. ಮಹಿಳೆಯ ಸಾಕ್ಷರತೆ
3. ಮಹಿಳೆಯರ ತಲಾವಾರು ಆದಾಯ



downloaded from: www.kpscvaani.com

ಸಮಾಜದಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಅಸಮಾನತೆ ಇಲ್ಲದಿದ್ದಲ್ಲಿ ಸ್ತ್ರೀ ಅಭಿವೃದ್ಧಿ ಸೂಚ್ಯಂಕ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕಗಳೆರಡು ಒಂದೇ ಮಟ್ಟದಲ್ಲಿರುತ್ತದೆ.

- ಮಾನವ ಅಭಿವೃದ್ಧಿಯನ್ನು ಅಧಿಕವಾಗಿ ಹೊಂದಿರುವ ದೇಶಗಳಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಹೆಚ್ಚು ಸಮಾನತೆ ಇದ್ದು, ಇದರಿಂದ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಮಹಿಳಾ ಅಭಿವೃದ್ಧಿ ಸೂಚ್ಯಂಕಗಳೆರಡು ಒಂದೇ ಮಟ್ಟದಲ್ಲಿರುತ್ತದೆ.
- ಇದಕ್ಕೆ ಬದಲಾಗಿ ಕಡಿಮೆ ಮಾನವ ಅಭಿವೃದ್ಧಿಯನ್ನು ಹೊಂದಿರುವ ಹಾಗೂ ಸಾಧಾರಣಾ ಮಾನವ ಅಭಿವೃದ್ಧಿಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಸ್ತ್ರೀ–ಪುರುಷರ ನಡುವೆ ಹೆಚ್ಚು ಅಸಮಾನತೆ ಇರುವುದು. ಭಾರತವು ಸಹ ಈ ಹಂತದಲ್ಲಿದ್ದು ಇದರ ಹೆಚ್.ಡಿ.ಐ 0.547 ಮತ್ತು ಜಿ.ಡಿ.ಐ. 0.553 ಆಗಿರುವುದು. ಇದರಿಂದ ಮಹಿಳಾ ಅಭಿವೃದ್ಧಿ ಸೂಚ್ಯಂಕವು ಮಾನವ ಅಭಿವೃದ್ಧಿ ಸೂಚ್ಯಂಕಕ್ಕಿಂತ ಕಡಿಮೆಯಿರುವುದು.
- ಇದರಿಂದಾಗಿ ಮಹಿಳಾ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣದ ಉದ್ದೇಶದಿಂದ ದೇಶದಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

## 3. ಮಾನವ ಬಡತನ ಸೂಚ್ಯಂಕ (HPI) :

ಮಾನವ ಬಡತನ ಸೂಚ್ಯಂಕವನ್ನು 1997ರ ಮಾನವ ಅಭಿವೃದ್ಧಿ ವರದಿಯಲ್ಲಿ ಮೊದಲ ಬಾರಿಗೆ ಬಳಸಲಾಯಿತು. ಇದು ಮಾನವನ ಜೀವನದಿಂದ ವಂಚಿತವಾಗಿರುವ ಮೂರು ಮುಖ್ಯ ಅಂಶಗಳ ಮೇಲೆ ಕೇಂದ್ರೀಕೃತವಾಗಿದೆ. ಈ ಮೂರು ಅಂಶಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿಯೂ ಈಗಾಗಲೆ ಪ್ರತಿ ಬಿಂಬಿತವಾಗಿದೆ. ಅವುಗಳೆಂದರೆ, **ನಿರೀಕ್ಷಿತಾ ಜೀವಿತ ಅವಧಿ,** ಜ್ಞಾನ ಮತ್ತು ಉತ್ತಮ ಜೀವನ ಮಟ್ಟ. ಮೊದಲ ಅಂಶ ಅಂದರೆ ನಿರೀಕ್ಷಿತ ಜೀವಿತ ಅವಧಿಯ ಮಟ್ಟದಿಂದ ವಂಚಿತ ಎಂದರೆ 40 ವರ್ಷದ ಒಳಗೆ ಜೀವಿತ ಅವಧಿಯನ್ನು ಹೊಂದಿರುವವರು ಎಂದರ್ಥ. ಎರಡನೆಯ ವಂಚಿತ ಅಂಶ ಎಂದರೆ ಜ್ಞಾನ. ಇದನ್ನು ಅನಕ್ಷರಸ್ಥರ ಶೇಕಡಾವಾರು ಪ್ರಮಾಣದಿಂದ ಅಳೆಯಲಾಗುವುದು. ಮೂರನೆಯ ವಂಚಿತ ಅಂಶವನ್ನು ಆರೋಗ್ಯ ಸೇವೆಗಳ ಶೇ. ಪ್ರಮಾಣವನ್ನು ಪರಿಗಣಿಸಿ ನಿರ್ಧರಿಸಲಾಗುವುದು.

## ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದ ಹಂಚಿಕೆ:

**ಭಾರತವು** ಹಲವಾರು ಅತಿ ದೊಡ್ಡ ರಾಜ್ಯಗಳಿಂದ ಕೂಡಿದೆ. ಇವುಗಳಲ್ಲಿ ಕೆಲವು ರಾಜ್ಯಗಳು ಯುರೋಪಿನ ಸ್ವತಂತ್ರ್ಯ ರಾಷ್ಟ್ರಗಳಿಗಿಂತಲೂ ದೊಡ್ಡದಾಗಿವೆ. ಇದರಿಂದ ರಾಜ್ಯ–ರಾಜ್ಯಗಳ ನಡುವೆ ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಅಪಾರ ವ್ಯತ್ಯಾಸಗಳನ್ನು ಕಾಣಬಹುದು. ಪರಿಣಾಮವಾಗಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಹೆಚ್ಚು ವ್ಯತ್ಯಾಸಗಳು ಕಂಡುಬರುತ್ತವೆ. ಮಾನವ ಅಭಿವೃದ್ಧಿ ಪರಿಭಾವನೆಯನ್ನು ಪರಿಚಯಿಸಿದ **ಮಹಾಬೂಬ್–ಉಲ್–ಹಕ್** ದಕ್ಷಿಣ ಏಷ್ಯಾದ ಮಾನವ ಅಭಿವೃದ್ಧಿಯನ್ನು 1997ರಲ್ಲಿ ಅಭ್ಯಸಿಸಿರುವುವದಲ್ಲದೆ ಭಾರತದ ವಿವಿಧ ರಾಜ್ಯಗಳ ಮಾನವ ಅಭಿವೃದ್ಧಿಯನ್ನು ಸಹ ಇದರಲ್ಲಿ ವಿಶ್ಲೇಷಿಸಿರುವವರು. ಅಲ್ಲದೆ ಗ್ಓಈಖ ಸಹ ಇಂಡಿಯಾ' ಟುವರ್ಡ್ಸ್



downloaded from: www.kpscvaani.com

ಪಾಪ್ಯುಲೇಷನ್ ಅಂಡ್ ಡೆವಲಪ್‌ಮೆಂಟ್ ಗೋಲ್ಸ್ 1997, ಪುಸ್ತಕವನ್ನು ಪ್ರಕಟಿಸಿರುವುದು. ಇತ್ತೀಚೆಗೆ ಬಿಸ್ವಾಜಿತ್ ಗುಹಾ ರಾಜ್ಯಗಳ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಇತರ ಮೂರು ಅಂಶಗಳನ್ನು ಸೇರಿಸಿ **ಜೀವನ ಗುಣಮಟ್ಟ ಬಡತನ ನಿರ್ಮೂಲನ ಮತ್ತು ನಗರೀಕರಣ–** ರಚಿಸಿರುವರು. ಇದರಿಂದ ಗುಹಾವರ ಮಾನವ ಅಭಿವೃದ್ಧಿ ಸೂಚಂಕ್ಯವು ಆರು ಅಂಶಗಳನ್ನು ಒಳಗೊಂಡಿದೆ.

## ರಾಷ್ಟ್ರೀಯ ಮಾನವ ಅಭಿವೃದ್ಧಿ ವರದಿ 2011 (National Human Development Report 2011) :–

**ಭಾರತದ ಯೋಜನಾ** ಆಯೋಗವು ರಾಷ್ಟ್ರೀಯ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿದ್ದು, ಇದರಲ್ಲಿ ದೇಶದ 15 ದೊಡ್ಡ ರಾಜ್ಯಗಳ 2001ರ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಅಳವಡಿಸಲಾಗಿದೆ. ಮಾನವ ಅಭಿವೃದ್ಧಿಯನ್ನು ಸೂಚಿಸುವ ಪ್ರತಿಯೊಂದು ಅಂಶಗಳಿಗೂ ನಿರ್ದಿಷ್ಟ ಮೌಲ್ಯವನ್ನು ನಿಗದಿ ಪಡಿಸಲಾಗಿದೆ. ಇವುಗಳನ್ನು ಆಧರಿಸಿ **ಸಮ್ಮಿಶ್ರ ಮಾನವ ಅಭಿವೃದ್ಧಿ ಸೂಚ್ಯಂಕವನ್ನು** ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಪ್ರತ್ಯೇಕವಾಗಿ ಪರಿಗಣಿಸಲಾಗಿದೆ. ಈ ವರದಿಯ ಮುಖ್ಯಾಂಶಗಳನ್ನು ಈ ಕೆಳಕಂಡಂತೆ ಸಂಕ್ಷೇಪಿಸಬಹುದು.

- ಮಾನವ ಅಭಿವೃದ್ಧಿ ಸೂಚ್ಯಂಕವು 0.638 ರೊಂದಿಗೆ **ಕೇರಳದಲ್ಲಿ** ಗರಿಷ್ಠವಾಗಿದ್ದು 0.367 ಸೂಚ್ಯಾಂಕದೊಡನೆ ಬಿಹಾರದಲ್ಲಿ ಕನಿಷ್ಠ ಮಟ್ಟದಲಿರುವುದು.
- ಉತ್ತಮ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಒಳಗೊಂಡಿರುವ ಮೊದಲ ಐದು ರಾಜ್ಯಗಳೆಂದರೆ, **ಕೇರಳ, ಪಂಜಾಬ್, ಹರಿಯಾಣ, ತಮಿಳುನಾಡು ಮತ್ತು ಮಹಾರಾಷ್ಟ್ರ.** ಇದಕ್ಕೆ ವಿರುದ್ಧವಾಗಿ ಬಿಹಾರ, ಅಸ್ಸಾಂ ಮತ್ತು ಉತ್ತರ ಪ್ರದೇಶ ಕನಿಷ್ಠ ಮಾನವ ಅಭಿವೃದ್ಧಿಯ ಸೂಚ್ಯಂಕವನ್ನು ಹೊಂದಿದೆ.
- 1981–2001ರ ವರೆಗಿನ ರಾಜ್ಯಗಳ ಮಾನವ ಅಭಿವೃದ್ಧಿಯ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದ್ದು, ಇದರಂತೆ **ತಮಿಳುನಾಡು, ರಾಜಸ್ಥಾನಗಳ** ಪರಿಸ್ಥಿತಿಯು ಉತ್ತಮಗೊಂಡಿದೆ. ಆದರೆ ಅಸ್ಸಾಂ, ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಳೆದ ಎರಡು ದಶಕಗಳಿಂದಲೂ ಕನಿಷ್ಠ ಮಟ್ಟದಲ್ಲಿವೆ.

ಮಾನವ ಅಭಿವೃದ್ಧಿ ಸೂಚ್ಯಂಕದ ಹಂಚಿಕೆ ಮಾನವ ಸಂಪನ್ಮೂಲದ ಅಭಿವೃದ್ಧಿ ಸುಧಾರಣೆಯನ್ನು ಸಹ ಸೂಚಿಸುತ್ತದೆ. ದೇಶವು ಮಾನವ ಬೆಳವಣಿಗೆ ಸೂಚ್ಯಂಕ 0.5ಕ್ಕಿಂತ ಹೆಚ್ಚಾಗಿರುವ 5 ರಾಜ್ಯಗಳನ್ನು ಒಳಗೊಂಡಿದೆ. ಅಂತರಾಷ್ಟ್ರೀಯ ಪರಿಗಣನೆಯಲ್ಲಿ ಇವುಗಳು **ಸಾಧಾರಣಾ ಮಾನವ ಅಭಿವೃದ್ಧಿಯನ್ನು** ಹೊಂದಿದೆ. ಈ ಐದು ರಾಜ್ಯಗಳಲ್ಲಿ ದೇಶದ ಅತಿ ದಕ್ಷಿಣದಲ್ಲಿ ಎರಡೂ ರಾಜ್ಯಗಳಿಗದ್ದು (ಕೇರಳ, ತಮಿಳುನಾಡು) ಮಹಾರಾಷ್ಟ್ರ ದೇಶದ ನಡುವೆ ಇದ್ದು, ಉತ್ತರದ ಮೈದಾನದಲ್ಲಿ ಎರಡು ರಾಜ್ಯಗಳಿವೆ



downloaded from: www.kpscvaani.com

(ಪಂಜಾಬ್, ಹರಿಯಾಣ). ಮಾನವ ಅಭಿವೃದ್ಧಿ ಸೂಚ್ಯಂಕವನ್ನು 0.5 ರಿಂದ 0.3ರವರೆಗೆ ಹೊಂದಿರುವ ರಾಜ್ಯಗಳನ್ನು **ಕಡಿಮೆ ಮಾನವ ಅಭಿವೃದ್ಧಿ** ರಾಜ್ಯಗಳೆಂದು ಪರಿಗಣಿಸಲಾಗಿದೆ. ಈ ವಲಯವು ಗುಜರಾತ್, ಕರ್ನಾಟಕ, ಪ.ಬಂಗಾಳ, ರಾಜಸ್ಥಾನ, ಆಂಧ್ರಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳನ್ನು **ಕನಿಷ್ಠ ಮಾನವ ಅಭಿವೃದ್ಧಿ** ವಲಯವೆಂದು ಪರಿಗಣಿಸಲಾಗಿದೆ. ಈ ವಲಯವು ಅಧಿಕ ಜನಸಂಖ್ಯೆ ರಾಜ್ಯಗಳಾದ ಉತ್ತರ ಪ್ರದೇಶ (ಉತ್ತರಾಂಚಲ ಸೇರಿ) ಬಿಹಾರ (ಜಾರ್ಖಂಡ್ ಸೇರಿ) ಕನಿಷ್ಠವಾಗಿರುವುದು. **ಅಸ್ಸಾಂ** ರಾಜ್ಯವು ಈಶಾನ್ಯದ ಎಲ್ಲಾ ರಾಜ್ಯಗಳ ಪ್ರತಿನಿಧಿಯಾಗಿದ್ದು, ಇವುಗಳ ಮಾನವ ಅಭಿವೃದ್ಧಿ ಕನಿಷ್ಠವಾಗಿರುವುದನ್ನು ಪ್ರತಿನಿಧಿಸುವುದು. ದೇಶದಲ್ಲಿ ಅತ್ಯಧಿಕ ಜನಸಂಖ್ಯೆಯನ್ನು ಹೊಂದಿರುವ ಉತ್ತರ ಪ್ರದೇಶ, ಬಿಹಾರ ಹಾಗು ಮಧ್ಯಪ್ರದೇಶಗಳ ಮಾನವ ಅಭಿವೃದ್ಧಿಯು ಅತ್ಯಂತ ಕಡಿಮೆ ಇರುವುದು. ಇವುಗಳನ್ನು **ಬಿಮಾರು** ರಾಜ್ಯಗಳೆಂದು ಕರೆಯಲಾಗಿದೆ (ರಾಜಸ್ಥಾನವನ್ನು ಸೇರಿ). ಈ ರಾಜ್ಯಗಳು ಅತಿ ಕಡಿಮೆ ಮಾನವ ಅಭಿವೃದ್ಧಿಯನ್ನು ಹೊಂದಿರುವುದು. ಜೊತೆಗೆ ಇದು ಅತಿ ಕನಿಷ್ಟ ಮಾನವ ಅಭಿವೃದ್ಧಿಗೆ ಕಾರಣವಾಗಿದೆ. ಹೀಗೆ ಭಾರತವು ಮಾನವ ಜೀವನದ ಸುಧಾರಣೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಮಟ್ಟವನ್ನು ತಲುಪಲು ಬಹುದೂರ ಸಾಗಬೇಕಾಗಿದೆ.

## ಭಾರತದ ವಿದೇಶ ವ್ಯಾಪಾರ :-

ಭಾರತವು ಇತರ ದೇಶಗಳೊಡನೆ ನಡೆಸುವ ವ್ಯಾಪಾರವನ್ನು ಭಾರತದ ವಿದೇಶ ವ್ಯಾಪಾರ ಎನ್ನಬಹುದು. ಇದು 1) ರಫ್ತು ವ್ಯಾಪಾರವನ್ನು (ನಿರ್ಯಾತವನ್ನೂ) 2) ಆಮದು ವ್ಯಾಪಾರವನ್ನೂ (ಆಯಾತವನ್ನೂ) ಒಳಗೊಂಡಿದೆ.

ಭಾರತವು ಇತರ ದೇಶಗಳಿಗೆ ಸರಕುಗಳನ್ನೂ ಸೇವೆಗಳನ್ನೂ ಮಾರಿದಾಗ, ಅದು ಭಾರತದ ರಫ್ತು ವ್ಯಾಪಾರವೆನಿಸುತ್ತದೆ. ಇದರಲ್ಲಿ ನಿರ್ಯಾತದ ಗೋಚರ ಬಾಬುಗಳು (ಎಂದರೆ, ಹತ್ತಿಬಟ್ಟೆ, ಕಬ್ಬಿಣ ಅದುರು, ಅಭ್ರಕ, ಲೋಹ ಮಂಡೂರ ಇತ್ಯಾದಿ ವಸ್ತುಗಳ ರಫ್ತು) ಮತ್ತು, ನಿರ್ಯಾತದ ಅಗೋಚರ ಬಾಬುಗಳು (ಎಂದರೆ, ಭಾರತವು ವಿದೇಶಗಳಿಗೆ ನೀಡಿದ ಸೇವೆಗಳು; ಮುಖ್ಯವಾಗಿ ನೌಕಾಯಾನ ಸೇವೆ, ವಾಯುಯಾನ ಸೇವೆ, ವಿಮಾಸೇವೆ, ಬ್ಯಾಂಕು ವ್ಯವಹಾರದ ಸೇವೆ, ವಿದೇಶ ಪ್ರವಾಸಿಗರ ಸಂಚಾರ, ವಿದೇಶಗಳಲ್ಲಿ ಭಾರತದ ಹೂಡಿಕೆಗೆ ದೊರೆಯುವ ಡಿವಿಡೆಂಡ್, ವಿದೇಶಗಳಲ್ಲಿ ದುಡಿಯುವ ಭಾರತೀಯರು ಸ್ವದೇಶಕ್ಕೆ ಕಳುಹಿಸುವ ಹಣ, ಇತ್ಯಾದಿ)

## ಆಂತರಿಕ ವ್ಯಾಪಾರ ಮತ್ತು ವಿದೇಶ ವ್ಯಾಪಾರಗಳಿಗಿರುವ ವ್ಯತ್ಯಾಸ:

ಅನೇಕ ರೀತಿಗಳಲ್ಲಿ ಭಾರತದ ಆಂತರಿಕ ವ್ಯಾಪಾರವು ವಿದೇಶ ವ್ಯಾಪಾರದಿಂದ ಭಿನ್ನವಾಗಿದೆ. ಅವುಗಳಿರುವ ಮುಖ್ಯ ವ್ಯತ್ಯಾಸಗಳು ಇವು:

- ಒಂದು ರಾಷ್ಟ್ರದ ಜನತೆ ತಮ್ಮೊಳಗೆ ನಡೆಸುವ ವ್ಯಾಪಾರವನ್ನು ಆಂತರಿಕ ವ್ಯಾಪಾರ ವೆನ್ನುತ್ತಾರೆ. ಬೇರೆ ಬೇರೆ ರಾಷ್ಟ್ರಗಳ ಜನರೊಳಗೆ ನಡೆಯುವ ವ್ಯಾಪಾರವನ್ನು ವಿದೇಶ ವ್ಯಾಪಾರ ವೆನ್ನುತ್ತಾರೆ.



downloaded from: www.kpscvaani.com

- ಯಾವುದೇ ರಾಷ್ಟ್ರದ ವಾಪಾರವನ್ನು ತೆಗೆದುಕೊಂಡರೂ, ಆಂತರಿಕ ವ್ಯಾಪಾರದ ಪ್ರಮಾಣವು, ವಿದೇಶ ವ್ಯಾಪಾರದ ಪ್ರಮಾಣಕ್ಕಿಂತ ಹೆಚ್ಚಿರುತ್ತದೆ. ಒಂದು ದೇಶದ ಒಟ್ಟು ವ್ಯಾಪಾರದ ಪ್ರಮಾಣದಲ್ಲಿ ಸುಮಾರು 95% ಭಾಗ ಆಂತರಿಕ ವ್ಯಾಪಾರದ್ದಾಗಿರುತ್ತದೆ. ಉಳಿದ 5% ಭಾಗ ವಿದೇಶ ವ್ಯಾಪಾರದ್ದಾಗಿರುತ್ತದೆ.

**ಭಾರತದ ಆಯಾತ ವ್ಯಾಪಾರ** ಎಂದರೆ ಭಾರತವು ಇತರ ದೇಶಗಳಿಂದ ಸರಕು ಮತ್ತು ಸೇವೆಗಳನ್ನು ಖರೀದಿಸುವುದಾಗಿದೆ. ಅದು ಆಯಾತದ ಗೋಚರ ಮಸ್ತುಗಳಾದ ಕಚ್ಚಾಹತ್ತಿ, ಕಚ್ಚಾ, ಸೆಣಬು, ಆಹಾರ ಧಾನ್ಯಗಳು, ಯಂತ್ರಗಳು, ಕಬ್ಬಿಣ ಮತ್ತು ಉಕ್ಕಿನ ಸರಕುಗಳು ಮತ್ತು ಅಗೋಚರ ಆಯಾತ ಬಾಬುಗಳಾದ, ಹಡಗು ಸೇವೆಗಳು, ವಾಯುಯಾನ ಸೇವೆಗಳು, ವಿಮಾ ಸೇವೆಗಳು, ಬ್ಯಾಂಕಿಂಗ್ ಸೇವೆಗಳು, ವಿದೇಶಿಯರು ಭಾರತದಲ್ಲಿ ಗಳಿಸಿದ ತಮ್ಮ ಹಣವನ್ನು ತಮ್ಮ ದೇಶಗಳಿಗೆ ರವಾನಿಸುವುದು, ಭಾರತದಲ್ಲಿ ವಿದೇಶಿಯರ ಹೂಡಿಕೆಯ ಮೇಲಣ ಲಾಭಗಳು, ವಿದೇಶಗಳಲ್ಲಿ ಭಾರತೀಯ ಪ್ರವಾಸಿಗಳಿಗೆ ಸಲ್ಲಿಸಲಾದ ಸೇವೆಗಳು, ಮುಂತಾದವುಗಳನ್ನೊಳಗೊಂಡಿರುತ್ತದೆ.

## ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ವಿದೇಶ ವ್ಯಾಪಾರದ ಪ್ರಾಶಸ್ತ್ಯ:

ಭಾರತದ ಆರ್ಥಿಕಾಭೀವೃದ್ಧಿಯಲ್ಲಿ ವಿದೇಶ ವ್ಯಾಪಾರದ ಪಾತ್ರ ಅತೀ ಮುಖ್ಯವಾದುದು. ದೇಶದ ಆರ್ಥಿಕಾಭಿವೃದ್ಧಿಗೆ ಅದು ಈ ವಿಧಗಳಲ್ಲಿ ನೆರವು ನೀಡುತ್ತದೆ:

1. ದೇಶದ ಕೈಗಾರಿಕಾಭಿವೃದ್ಧಿಗೂ ಅಗತ್ಯವಾದ ಸ್ಥಾವರ ಮತ್ತು ಯಂತ್ರೋಪಕರಣಗಳನ್ನೂ, ಕಚ್ಚಾವಸ್ತುಗಳನ್ನೂ, ತಾಂತ್ರಿಕ ಪರಿಜ್ಞಾನವನ್ನೂ ಆಮದು ಮಾಡಿಕೊಳ್ಳಲು ಇದು ನೆರವು ನೀಡುತ್ತದೆ.
2. ಭಾರತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗದ ಪೆಟ್ರೋಲಿಯಂ, ತವರ, ಸತು, ಸೀಸ ಮತ್ತು ತಾಮ್ರ ಮುಂತಾದ ಅಲೋಹ ಧಾತುಗಳನ್ನು ಆಮದು ಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ.
3. ತನ್ನಲ್ಲಿ ಅಧಿಕ ಪ್ರಮಾಣದಲ್ಲಿರುವ ವಸ್ತುಗಳನ್ನು ಭಾರತ ರಫ್ತು ಮಾಡಲು ಇದರ ಸಹಕಾರ ಅಗತ್ಯ.
4. ರಫ್ತು ವ್ಯಾಪಾರಕ್ಕೆ ಪ್ರೋತ್ಸಾಹ ನೀಡಿ, ವಿದೇಶ ವ್ಯಾಪಾರವು ದೇಶೀಯ ಉತ್ಪನ್ನಗಳಿಗೆ ವಿಶಾಲ ಮಾರುಕಟ್ಟೆಯನ್ನು ಒದಗಿಸಿದೆ.
5. ನಮ್ಮ ರಫ್ತುಗಳು ನಮ್ಮ ಆಮದುಗಳಿಗೆ ಹಣ ಪಾವತಿ ಮಾಡುತ್ತವೆ.
6. ನಮ್ಮ ಸರಕುಗಳಿಗೆ ವಿಶಾಲ ಮಾರುಕಟ್ಟೆಯನ್ನು ಒದಗಿಸಿ, ವಿದೇಶ ವ್ಯಾಪಾರವು ದೇಶೀಯ ಕೈಗಾರಿಕೆಗಳ ಅಭಿವೃದ್ಧಿಗೆ ನೆರವು ನೀಡಿದೆ.
7. ನಮ್ಮ ರಾಷ್ಟ್ರೀಯ ವರಮಾನದ ಅಭಿವೃದ್ಧಿಗೆ ಇದು ಸಹಕಾರಿ.



downloaded from: www.kpscvaani.com

8. ನಮ್ಮ ಜನರ ನಾಗರಿಕತೆಯ ವಿಕಾಸಕ್ಕೆ ಇದು ಸಹಾಯ ಮಾಡುತ್ತದೆ. ಅಂತಾರಾಷ್ಟ್ರೀಯ ವ್ಯಾಪಾರವು ನಾಗರಿಕತೆಯ ಅಥವಾ ಜನರ ಆರ್ಥಿಕ ಸುಸ್ಥಿತಿಯ ದ್ಯೋತಕ.
9. ಭಾರತ ಮತ್ತು ಇತರ ದೇಶಗಳೊಳಗಣ ಆರ್ಥಿಕ ಸಹಕಾರಕ್ಕೆ ಇದು ಸಹಾಯಕವಾಗಿದೆ.
10. ಆಯಾತ – ನಿರ್ಯಾತ ವ್ಯಾಪಾರವು ಅನೇಕ ಜನರಿಗೆ ಉದ್ಯೋಗಾವಕಾಶವನ್ನು ನೀಡುತ್ತದೆ.
11. ಬಳಸಿಕೊಳ್ಳದೆ ಉಳಿದಿರುವ ನಮ್ಮ ಸಂಪನ್ಮೂಲಗಳನ್ನು ಪೂರ್ಣ ಬಳಸಿಕೊಳ್ಳುವುದಕ್ಕೆ ಇದು ಪ್ರೋತ್ಸಾಹ ನೀಡುತ್ತದೆ.

## ಭಾರತದ ವಿದೇಶ ವ್ಯಾಪಾರದ ಲಕ್ಷಣಗಳು :

ಭಾರತದ ವಿದೇಶ ವ್ಯಾಪಾರವು ಕೆಲವೊಂದು ವಿಭಿನ್ನವಾದ ಲಕ್ಷಣಗಳನ್ನು ಹೊಂದಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

### 1. ಸಮುದ್ರಯಾನ ಪ್ರಧಾನ ವ್ಯಾಪಾರ:

ನಮ್ಮ ವಿದೇಶ ವ್ಯಾಪಾರದಲ್ಲಿ ಹೆಚ್ಚಿನ ಭಾಗವು ಸಮುದ್ರದ ಮೂಲಕ ನಡೆಯುತ್ತದೆ. ನಮ್ಮ ವಿದೇಶ ವ್ಯಾಪಾರದ 95% ಕ್ಕಿಂತಲೂ ಹಿಚ್ಚಿನ ಭಾಗ ಸಮುದ್ರದ ಮೂಲಕ ನಡೆಯುತ್ತದೆ.

### 2. ವಿದೇಶ ವ್ಯಾಪಾರದ ಮೌಲ್ಯದಲ್ಲಿ ಹೆಚ್ಚಳ:

ಕಳೆದ 53 ವರ್ಷಗಳಲ್ಲಿ ನಮ್ಮ ವಿದೇಶ ವ್ಯಾಪಾರದ ಒಟ್ಟು ಹೆಚ್ಚಾಗಿದೆ. ನಮ್ಮ ವಿದೇಶ ವ್ಯಾಪಾರದ ಮೌಲ್ಯವು 1950 – 51ರಲ್ಲಿ 1214 ಕೋಟಿ ರೂಪಾಯಿಗಳಾಗಿತ್ತು. ಅದು 2003–04ರಲ್ಲಿ 6,45,558 ಕೋಟಿ ರೂಪಾಯಿಗಳಿಗೇರಿತು. ಈ ಹೆಚ್ಚಳಕ್ಕೆ ಕಾರಣ ನಿರ್ಯಾತ ಆಯಾತಗಳೆರಡರಲ್ಲೂ ಆದ ಹೆಚ್ಚಳವಾಗಿದೆ. 2003 – 04ರಲ್ಲಿ ಆಯಾತದ ಮೌಲ್ಯವು 353976 ಕೋಟಿ ರೂಪಾಯಿಗಳಾಗಿಯೂ, ನಿರ್ಯಾತದ ಮೌಲ್ಯವು 2,91,582 ಕೋಟಿ ರೂಪಾಯಿಗಳಾಗಿಯೂ ಇತ್ತು.

ಈ ಕೆಳಗಿನ ಕೋಷ್ಟಕವು 1990 – 91 ಮತ್ತು 2003 – 04ರ ನಡುವಿನ ಅವಧಿಯ, ಭಾರತದ ವಿದೇಶ ವ್ಯಾಪಾರವನ್ನು ತೋರಿಸುತ್ತದೆ.

| ವರ್ಷ | ನಿರ್ಯಾತ | ಆಯಾತ | ಒಟ್ಟು ವ್ಯಾಪಾರ | ವ್ಯಾಪಾರದ ಕೊರತೆ |
|---|---|---|---|---|
| 1990 – 91 | 32,558 | 43,193 | 75,751 | –10,635 |
| 1991 – 92 | 44,042 | 47,851 | 91,893 | –3,809 |
| 1992 – 93 | 53,688 | 63,375 | 1,17,063 | –9,687 |
| 1993 – 94 | 69,751 | 73,010 | 1,42,852 | –3,350 |
| 1994 – 95 | 82,674 | 89,971 | 1,72,645 | –7,297 |



downloaded from: www.kpscvaani.com

| | | | | |
|---|---|---|---|---|
| 1995 – 96 | 1,06,353 | 1,22,678 | 2,29,031 | –16,325 |
| 1996 – 97 | 1,18,817 | 1,38,920 | 2,57,737 | –20,103 |
| 1997 – 98 | 1,30,101 | 1,54,176 | 2,84,277 | –24,075 |
| 1998 – 99 | 1,39,753 | 1,78,332 | 3,18,085 | –38,579 |
| 1999 – 2000 | 1,59,561 | 2,15,236 | 3,74,797 | –55,675 |
| 2000 – 01 | 2,03,571 | 2,30,873 | 4,34,444 | –27,302 |
| 2001 – 02 | 2,09,018 | 2,45,200 | 4,54,218 | –36,182 |
| 2002 – 03 | 2,50,137 | 2,97,206 | 5,52,343 | –42,069 |
| 2003 – 04 | 2,91,582 | 3,53,976 | 6,45,558 | –62,394 |

### 3. ನಮ್ಮ ವಿದೇಶ ವ್ಯಾಪಾರದ ರಚನೆಯಲ್ಲಿ ಬದಲಾವಣೆ:

ನಮ್ಮ ವಿದೇಶ ವ್ಯಾಪಾರದಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ. ಇನ್ನೊಂದು ಮಾತಿನಲ್ಲಿ, ನಮ್ಮ ಆಯಾತ ಮತ್ತು ನಿಯಾತಗಳ ಬಾಬುಗಳಲ್ಲಿ ಬದಲಾವಣೆಗಳಾಗಿವೆ.

## ಇತ್ತೀಚಿನ ವರ್ಷಗಳಲ್ಲಿ ಭಾರತದ ಆಯಾತ ವ್ಯಾಪಾರಗಳ ರಚನೆಯಲ್ಲಿ ಆಗಿರುವ ಮುಖ್ಯ ಬದಲಾವಣೆಗಳು ಈ ರೀತಿಯಾಗಿವೆ:

1. ಸ್ವಾತಂತ್ರ್ಯ ಪೂರ್ವದಲ್ಲಿ, ಉತ್ಪಾದಿತ ಸಿದ್ಧವಸ್ತುಗಳನ್ನು, ಅದರಲ್ಲೂ ಬಳಕೆದಾರರ ವಸ್ತುಗಳನ್ನು, ಹೆಚ್ಚಾಗಿ ಭಾರತವು ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಸ್ವಾತಂತ್ರ್ಯ ದೊರೆತ ಮೇಲೆ, ಉತ್ಪಾದಿತ ವಸ್ತುಗಳನ್ನು ಆಮದು ಮಾಡಿಕೊಳ್ಳುವುದು ಇಳಿಮುಖ ವಾಗಿದೆ. ದೇಶದಲ್ಲಿ ಕೈಗಾರಿಕೆಗಳ ಕ್ಷಿಪ್ರ ಅಭಿವೃದ್ಧಿಯಿಂದಾಗಿ ಕಚ್ಚಾ ಮಾಲುಗಳ ಆಮದು ಹೆಚ್ಚಾಗಿದೆ.
2. ಸ್ವಾತಂತ್ರ್ಯ ದೊರೆಯುವ ಮೊದಲು ಭಾರತ ರಫ್ತು ಮಾಡುತ್ತಿದ್ದ ಮುಖ್ಯ ವಸ್ತುಗಳೆಂದರೆ, ಕಚ್ಚಾ ಹತ್ತಿ ಮತ್ತು ಕಚ್ಚಾ ಸೆಣಬು, ವಿಭಜನೆಯಾಗುವಾಗ ಪಾಕಿಸ್ತಾನಕ್ಕೆ ಹತ್ತಿ ಮತ್ತು ಸೆಣಬು ಬೆಳೆವ ಪ್ರದೇಶಗಳು ಹೋದುದರಿಂದಲೂ, ಸ್ವಾತಂತ್ರ್ಯ ನಂತರ ನಮ್ಮ ದೇಶದಲ್ಲಿ ಹತ್ತಿ ಬಟ್ಟೆ ಮತ್ತು ಸೆಣಬಿನ ಕೈಗಾರಿಕೆಗಳು ಅಭಿವೃದ್ಧಿ ಹೊಂದಿಲ್ಲದಿರುವುದರಿಂದಲೂ, ಕಚ್ಚಾಹತ್ತಿ ಮತ್ತು ಕಚ್ಚಾ ಸೆಣಬನ್ನು ಭಾರತ ಆಮದು ಮಾಡಿಕೊಳ್ಳಬೇಕಾಗಿ ಬಂತು. ಆದರೆ, ಇತ್ತೀಚೆಗೆ, ಭಾರತದಲ್ಲೇ ಅವುಗಳನ್ನು ಉತ್ಪಾದಿಸುವುದು ಹೆಚ್ಚಾಗಿರುವುದರಿಂದ, ಈ ಎರಡು ವಸ್ತುಗಳ ಆಮದು ಇಳಿಮುಖವಾಗುತ್ತಿದೆ.
3. ಸ್ವಾತಂತ್ರ್ಯ ಪೂರ್ವದಲ್ಲಿ, ಸಾಮಾನ್ಯವಾಗಿ, ಯಂತ್ರಗಳು, ಕಬ್ಬಿಣ ಮತ್ತು ಉಕ್ಕಿನ ವಸ್ತುಗಳು ಮುಂತಾದ ಬಂಡವಾಳ ವಸ್ತುಗಳನ್ನು ಭಾರತ ಆಮದು ಮಾಡಿಕೊಳ್ಳುತ್ತಲೇ ಇರಲಿಲ್ಲ. ಆದರೆ,



downloaded from: www.kpscvaani.com

ಸ್ವಾತಂತ್ರ್ಯ ದೊರೆಯುತ್ತಲೇ ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿಯ ಹಿರಿಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ, ದೊಡ್ಡ ಪ್ರಮಾಣದಲ್ಲಿ ಕಬ್ಬಿಣ ಮತ್ತು ಉಕ್ಕಿನ ವಸ್ತು, ಯಂತ್ರೋಪಕರಣ, ಮುಂತಾದುವುಗಳನ್ನು ಭಾರತ ಆಮದು ಮಾಡಿಕೊಳ್ಳತೊಡಗಿತು. ಆದರೆ, ಇಂದು, ನಮ್ಮ ದೇಶದಲ್ಲೇ ಹೆಚ್ಚಿನ ಬಂಡವಾಳ ವಸ್ತುಗಳು ಉತ್ಪಾದಿತವಾಗುವುದರಿಂದ, ಅವುಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳುವುದು ಇಳಿಮುಖವಾಗುತ್ತಲಿದೆ.

4. ಸ್ವಾತಂತ್ರ್ಯ ಪೂರ್ವದಲ್ಲಿ, ಆಹಾರ ವಸ್ತುಗಳನ್ನು ಭಾರತವು ರಫ್ತುಮಾಡುತ್ತಿತ್ತು. ಆದರೆ, ವಿಭಜನೆಯ ಕಾಲದಲ್ಲಿ ಗೋಧಿ ಮತ್ತು ಅಕ್ಕಿ ಬೆಳೆವ ಪ್ರದೇಶಗಳು ಪಾಕಿಸ್ತಾನಕ್ಕೆ ಹೋದ ಕಾರಣದಿಂದಲೂ, ಕಳೆದ 54 ವರ್ಷಗಳಲ್ಲಿ ಜನಸಂಖ್ಯೆ ಬಹುಬೇಗನೆ ಬೆಳೆಯುತ್ತ ಬಂದ ಕಾರಣದಿಂದಲೂ, ಭಾರತ ಆಹಾರ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕಾಯಿತು. ಆದರೆ, ಇತ್ತೀಚಿನ ವರ್ಷಗಳಲ್ಲಿ, ಹೊಸ ಕೃಷಿ ವಿಧಾನಗಳ ಅನುಷ್ಠಾನದಿಂದಾಗಿ ಆಹಾರಧಾನ್ಯಗಳ ಉತ್ಪಾದನೆ ಏರಿರುವುದರಿಂದ, ಅವುಗಳನ್ನು ಆಮದು ಮಾಡಿಕೊಳ್ಳುವ ಪ್ರಸಂಗ ಕಡಿಮೆಯಾಗುತ್ತಲಿದೆ.
5. ಸ್ವಾತಂತ್ರ್ಯ ಪೂರ್ವದಲ್ಲಿ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ರಸಗೊಬ್ಬರಗಳನ್ನು ಭಾರತ ಬಹಳ ಕಡಿಮೆ ಆಮದು ಮಾಡಿಕೊಳ್ಳುತ್ತಿತ್ತು, ಆದರೆ; ಇಂದು, ಅವುಗಳ ಆಮದು ಗಣನೀಯವಾಗಿ ಹೆಚ್ಚಿದೆ.
6. ವಿದ್ಯುದುಪಕರಣಗಳು, ಔಷಧಗಳು, ಕಾಗದ ಮುಂತಾದ ಉತ್ಪಾದಿತ ವಸ್ತುಗಳ ಆಮದು ಇಂದು ಕಡಿಮೆಯಾಗಿದೆ. ದೇಶದಲ್ಲಿ ಅವುಗಳ ಉತ್ಪಾದನೆಯಾಗುತ್ತಿರುವುದೇ ಇದಕ್ಕೆ ಕಾರಣ.
7. ಹರಳು ಮತ್ತು ಆಭರಣ ಕೈಗಾರಿಕೆಯ ಹೆಚ್ಚಿದ ಬೇಡಿಕೆಯಿಂದಾಗಿ, ಮುತ್ತುಗಳು, ಅಮೂಲ್ಯ ಹಾಗೂ ಅರೆ ಅಮೂಲ್ಯ ಹರಳುಗಳ ಆಯಾತವು ಗಣನೀಯವಾಗಿ ಹೆಚ್ಚಿದೆ.
8. ಖಾದ್ಯ ತೈಲಗಳ ಆಯಾತವೂ ಗಣನೀಯವಾಗಿ ಹೆಚ್ಚಿದೆ.



downloaded from: www.kpscvaani.com

## ಭಾರತದ ರಫ್ತು ವ್ಯಾಪಾರದ ರಚನೆಯಲ್ಲಾದ ಬದಲಾವಣೆಗಳು:

ಇತ್ತೀಚಿನ ವರ್ಷಗಳಲ್ಲಿ ಭಾರತದ ರಫ್ತು ವ್ಯಾಪಾರದ ರಚನೆ ಅಥವಾ ವಿನ್ಯಾಸದಲ್ಲಾದ ಮುಖ್ಯ ಬದಲಾವಣೆಗಳು ಇವು:

1. ಸ್ವಾತಂತ್ರ್ಯ ಪೂರ್ವದಲ್ಲಿ ಕಚ್ಚಾಹತ್ತಿ, ಕಚ್ಚಾಸೆಣಬು, ಎಣ್ಣೆ ಕಾಳುಗಳು, ತೊಗಲು ಮತ್ತು ಚರ್ಮ ಮುಂತಾದ ಕಚ್ಚಾವಸ್ತುಗಳು ಭಾರತದಿಂದ ವಿದೇಶಗಳಿಗೆ ಹೆಚ್ಚಾಗಿ ರಫ್ತಾಗುತ್ತಿದ್ದುವು. ಆದರೆ ಸ್ವಾತಂತ್ರ್ಯ ದೊರೆತ ಮೇಲೆ, ಕಚ್ಚಾವಸ್ತುಗಳ ರಫ್ತು ಕಡಿಮೆಯಾಗಿದೆ. ಉತ್ಪಾದಿತ ವಸ್ತುಗಳ ರಫ್ತು ಹೆಚ್ಚಾಗಿದೆ. ಒಟ್ಟಿನಲ್ಲಿ, ನಮ್ಮ ರಫ್ತು ವ್ಯಾಪಾರ ಕಚ್ಚಾ ವಸ್ತುಗಳಿಂದ ಸಿದ್ಧ ವಸ್ತುಗಳಿಗೆ ಬದಲಾಗಿದೆ ಎನ್ನಬಹುದು.
2. ಸ್ವಾತಂತ್ರ್ಯ ಪೂರ್ವದಲ್ಲಿ, ನಮ್ಮ ರಫ್ತು ವ್ಯಾಪಾರದಲ್ಲಿ ಕೆಲವು ಸಾಂಪ್ರದಾಯಿಕ ವಸ್ತುಗಳು ಮಾತ್ರ ಇದ್ದುವು; ಅವುಗಳೆಂದರೆ: ಸೆಣಬಿನ ಉತ್ಪನ್ನಗಳು, ಹತ್ತಿ ಬಟ್ಟೆಗಳು, ಚಾ, ಸಂಬಾರು ಪಾದರ್ಥ ಇತ್ಯಾದಿ. ಆದರೆ ಸ್ವಾತಂತ್ರ್ಯನಂತರ, ಇಂತಹ ಸಾಂಪ್ರದಾಯಿಕ ವಸ್ತುಗಳ ರಫ್ತು ಕಡಿಮೆಯಾಯಿತು. ಸಾಂಪ್ರದಾಯಿಕವಲ್ಲದ ಹೊಸ ವಸ್ತುಗಳಾದ, ಸೈಕಲ್, ಹೊಲಿಗೆಯಂತ್ರ, ವಿದ್ಯುತ್, ಫ್ಯಾನು, ಬ್ಲೇಡು, ಉಕ್ಕಿನ ಪೀಠೋಪಕರಣ, ಬ್ಯಾಟರಿ, ರಬ್ಬರ್ ಟಯರ್, ಚರ್ಮದ ವಸ್ತು, ಉಣ್ಣೆ, ರತ್ನಗಂಬಳಿ, ರಾಸಾಯನಿಕಗಳು, ಪೈಂಟ್, ಸಾಬೂನು ಮುಂತಾದುವುಗಳ ರಫ್ತು ಹೆಚ್ಚಿತು.
3. ಸ್ವಾತಂತ್ರ್ಯಕ್ಕೆ ಮೊದಲು, ನಾವು ಕೆಲವೇ ವಸ್ತುಗಳನ್ನು ರಫ್ತು ಮಾಡುತ್ತಿದ್ದೆವು, ಆದರೆ ಇಂದು, ನಮ್ಮ ರಫ್ತಿನ ವಸ್ತುಗಳ ಸಂಖ್ಯೆ ಹೆಚ್ಚಿದೆ. ಇಂದು ನಾವು ಲಘು ಇಂಜಿನಿಯರಿಂಗ್ ವಸ್ತುಗಳು, ಕರಕುಶಲ ವಸ್ತುಗಳು, ಬ್ಲೇಡುಗಳು, ಮೀನು, ಸಿದ್ಧ ಪೋಶಕಗಳು ಮುಂತಾದ ಹಲವು ತರದ ವಸ್ತುಗಳನ್ನು ರಫ್ತು ಮಾಡುತ್ತೇವೆ
4. ಸ್ವಾತಂತ್ರ್ಯ ಪೂರ್ವದಲ್ಲಿ ಕಬ್ಬಿಣದ ಅದುರು, ಲೊಹ ಮಂಡೂರದ ಅದಿರು, ಬಾಕ್ಸೈಟ್‌ನ ಅದಿರು ಮುಂತಾದುವು ನಮ್ಮ ರಫ್ತಿನ ಮುಖ್ಯ ವಸ್ತುಗಳಾಗಿರಲಿಲ್ಲ. ಇಂದು ಅವು ನಮ್ಮ ರಫ್ತಿನಲ್ಲಿ ಗಣ್ಯಸ್ಥಾನ ಪಡೆದಿವೆ.
5. ಕಚ್ಚಾಹತ್ತಿ ಮತ್ತು ಕಚ್ಚಾಸೆಣಬು ಸ್ವಾತಂತ್ರ್ಯ ಪೂರ್ವದಲ್ಲಿ ರಫ್ತು ವ್ಯಾಪಾರದಲ್ಲಿ ಮುಖ್ಯ ಸ್ಥಾನ ವಹಿಸಿದ್ದುವು; ಇಂದು ಅವುಗಳು ರಫ್ತಿನ ಪಟ್ಟಿಯಲ್ಲಿ ಅಷ್ಟು ಮುಖ್ಯವಲ್ಲ. ಅದಕ್ಕೆ ಬದಲಾಗಿ, ಇಂದು ಕಚ್ಚಾ ಹತ್ತಿಯನ್ನೂ ಕಚ್ಚಾ ಸೆಣಬನಗನ್ನೂ ಆಮದು ಮಾಡಿ ಕೊಳ್ಳಬೇಕಾಗಿದೆ.
6. ಕರಕುಶಲ ವಸ್ತುಗಳ ನಿರ್ಯಾತವು ಗಣನೀಯವಾಗಿ ಹೆಚ್ಚಿತು.
7. ಸಿದ್ಧ ಉಡುಪುಗಳ ನಿರ್ಯಾತವು ಗಣನೀಯವಾಗಿ ಹೆಚ್ಚಿತು.
8. ಚರ್ಮದ ವಸ್ತುಗಳ ನಿರ್ಯಾತವೂ ಹೆಚ್ಚಿತು.

- **ಗಣನೀಯವಲ್ಲದ ಅದೃಶ್ಯ ನಿರ್ಯಾತಗಳು:**

ನೌಕಾಯಾನ, ವಿಮೆ, ಬ್ಯಾಂಕು ವ್ಯವಹಾರ, ಪ್ರವಾಸ, ಸಂಚಾರ ಮುಂತಾದ ಕಣ್ಣಿಗೆ ಕಾಣದ ರಫ್ತುಗಳಿಂದ ಭಾರತಕ್ಕೆ ದೊರೆವ ವರಮಾನ ಅಷ್ಟೇನೂ ಗಣನೀಯವಾಗಿಲ್ಲ. ಇದಕ್ಕೆ ಇವುಗಳು ಕಾರಣವಾಗಿವೆ – ಭಾರತೀಯ ಹಡಗುಗಳ ಕೊರತೆ, ನಮ್ಮ ದೇಶದಲ್ಲಿ ಪ್ರವಾಸೋದ್ಯಮ



downloaded from: www.kpscvaani.com

ಅವಿಕಸಿತವಾಗಿರುವುದು, ವಿದೇಶಗಳಲ್ಲಿ ಭಾರತೀಯ ಬ್ಯಾಂಕುಗಳ ಮತ್ತು ವಿಮಾ ಕಂಪೆನಿಗಳ ಶಾಖೆಗಳ ಅಭಾವ, ಇತ್ಯಾದಿ.

- **ನಮ್ಮ ವಿದೇಶ ವ್ಯಾಪಾರದ ದಿಕ್ಕು ಬದಲಾದುದು:**

ಸ್ವಾತಂತ್ರ್ಯನಂತರ ಭಾರತದ ವಿದೇಶ ವ್ಯಾಪಾರದ ದಿಕ್ಕು ಬಹಳಷ್ಟು ಬದಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ, ನಮ್ಮ ವಿದೇಶ ವ್ಯಾಪಾರ ಮುಖ್ಯವಾಗಿ ಬ್ರಿಟನ್ನಿನೊಡನೆ ನಡೆಯುತ್ತಿದ್ದಿತು. ಸ್ವಾತಂತ್ರ್ಯನಂತರ, ನಮ್ಮ ವಿದೇಶ ವ್ಯಾಪಾರದಲ್ಲಿ ಇಂಗ್ಲೆಂಡಿನ ಪಾಲು ಕಡಿಮೆಯಾಗತೊಡಗಿತು. ಅಮೇರಿಕ, ಪಶ್ಚಿಮಜರ್ಮನಿ, ಜಪಾನ್, ರಷ್ಯಾ ಮುಂತಾದ ದೇಶಗಳ ಪಾಲು ಹೆಚ್ಚಿತು. ಇಂದು ಭಾರತವು 140 ದೇಶಗಳಿಂದ ಖರೀದಿಸುತ್ತಿದೆ ಮತ್ತು 190 ದೇಶಗಳಿಗೆ ಮಾರುತ್ತಿದೆ.

## ಭಾರತದ ರಫ್ತು ವ್ಯಾಪಾರದ ದಿಕ್ಕಿನ ಬದಲಾವಣೆಗಳು:

ಇತ್ತೀಚಿನ ವರ್ಷಗಳಲ್ಲಿ ಭಾರತದ ರಫ್ತು ವ್ಯಾಪಾರವು ದಿಕ್ಕಿನಲ್ಲಾದ ಮುಖ್ಯ ಬದಲಾವಣೆಗಳು ಇವು:

1. ಸ್ವಾತಂತ್ರ್ಯ ಪೂರ್ವದಲ್ಲಿ, ಭಾರತದ ರಫ್ತು ವ್ಯಾಪಾರವು ಮುಖ್ಯವಾಗಿ ಇಂಗ್ಲೆಂಡಿನೊಡನೆ ನಡೆಯುತ್ತಿತ್ತು. ಆದರೆ, ಸ್ವಾತಂತ್ರ್ಯನಂತರ, ಇಂಗ್ಲೆಂಡಿನೊಡನೆ ನಡೆಯುತ್ತಿದ್ದ ರಫ್ತು ವ್ಯಾಪಾರ ಗಣನೀಯವಾಗಿ ಕುಗ್ಗಿದೆ.
2. ಸ್ವಾತಂತ್ರ್ಯ ನಂತರ, ನಮ್ಮ ರಫ್ತು ಅಮೇರಿಕಕ್ಕೆ ಹೆಚ್ಚಿದೆ.
3. ಸ್ವಾತಂತ್ರ್ಯನಂತರ ಜಪಾನಿನ ಪಾಲು ಹೆಚ್ಚಿದೆ. ಇಂದು, ಅದು ನಮ್ಮ ಹೆಚ್ಚಿನ ರಫ್ತು ವ್ಯಾಪಾರದಲ್ಲಿ ಪ್ರಮುಖ ಸ್ಥಾನ ಪಡೆದಿದೆ.
4. ಅಂತೆಯೇ, ರಷ್ಯ ದೊಡನೆಯೂ ನಮ್ಮ ರಫ್ತು ವ್ಯಾಪಾರ ಹೆಚ್ಚಿದೆ. ಆದರೆ ರಷ್ಯಾದ ವಿಭಜನೆಯ ನಂತರ ರಷ್ಯಾದ ಪಾಲು ಕುಸಿದಿದೆ.
5. ಸ್ವಾತಂತ್ರ್ಯ ನಂತರ ಪಶ್ಚಿಮ ಜರ್ಮನಿಯೊಡನೆಯೂ ನಾವು ಹೆಚ್ಚು ರಫ್ತು ವ್ಯಾಪಾರ ಮಾಡುತ್ತಿದ್ದೇವೆ.
6. ಕೆನಡಾ, ಆಸ್ಟ್ರೇಲಿಯ, ಈಜಿಪ್ಟ್, ಫ್ರಾನ್ಸ್, ಪೂರ್ವಜರ್ಮನಿ, ಇರಾನ್ ಮುಂತಾದ ಇತರ ರಾಷ್ಟ್ರಗಳೊಡನೆಯೂ ಭಾರತದ ರಫ್ತು ವ್ಯಾಪಾರ ಹೆಚ್ಚಿದೆ.
7. ಹಿಂದೆ ಭಾರತ ಕೆಲವೇ ದೇಶಗಳಿಗೆ ತನ್ನ ವಸ್ತುಗಳನ್ನು ರಫ್ತು ಮಾಡುತ್ತಿತ್ತು. ಇಂದು, ಜಗತ್ತಿನ ಸುಮಾರು 190 ದೇಶಗಳಿಗೆ ತನ್ನ ವಸ್ತುಗಳನ್ನು ರಫ್ತು ಮಾಡುತ್ತಿದೆ.

## ಭಾರತದ ಆಮದು ವ್ಯಾಪಾರದ ದಿಕ್ಕಿನಲ್ಲಾದ ಬದಲಾವಣೆಗಳು:

ಇತ್ತೀಚಿನ ವರ್ಷಗಳಲ್ಲಿ ಭಾರತದ ಆಮದು ವ್ಯಾಪಾರದ ದಿಕ್ಕಿನಲ್ಲಾದ ಮುಖ್ಯ ಬದಲಾವಣೆಗಳು ಇವು:

1. ಸ್ವಾತಂತ್ರ್ಯ ಪೂರ್ವದಲ್ಲಿ, ಭಾರತದ ಆಮದು ವ್ಯಾಪಾರ ಮುಖ್ಯವಾಗಿ ಇಂಗ್ಲೆಂಡಿನೊಡನೆ ಮಾತ್ರ ಇತ್ತು. ಆದರೆ, ಸ್ವಾತಂತ್ರ್ಯ ನಂತರ, ನಮ್ಮ ಆಮದು ವ್ಯಾಪಾರದಲ್ಲಿ ಇಂಗ್ಲೆಂಡಿನ ಪಾಲು ಬಹಳಷ್ಟು ಕಡಮೆಯಾಗಿದೆ.



downloaded from: www.kpscvaani.com

2. ಭಾರತದ ವಿದೇಶ ವ್ಯಾಪಾರ ಸ್ವಾತಂತ್ರ್ಯಕ್ಕೆ ಮೊದಲು, ಭಾರತವು ಅಮೇರಿಕದಿಂದ ಆಮದು ಮಾಡಿಕೊಳ್ಳುತ್ತಿದ್ದುದು ಬಹಳ ಕಡಿಮೆ. ಆದರೆ ಸ್ವಾತಂತ್ರ್ಯನಂತರ, ಭಾರತದ ಆಮದು ವ್ಯಾಪಾರ ಅಮೇರಿಕದೊಡನೆ ಸಾಕಷ್ಟು ಹೆಚ್ಚಿನ ಆವಶ್ಯಕತೆಗಳಾದ ಆಹಾರ ವಸ್ತುಗಳು, ಕಬ್ಬಿಣ ಮತ್ತು ಉಕ್ಕಿನ ವಸ್ತುಗಳು, ಯಂತ್ರೋಪಕರಣಗಳು, ಪೆಟ್ರೋಲಿಯಂ ಮುಂತಾದವುಗಳನ್ನು ಸ್ವಾತಂತ್ರ್ಯ ದೊರೆಯುತ್ತಲೇ ಭಾರತವು ಆಮದು ಮಾಡಿಕೊಂಡಿತು. ಆದರೆ ಇತ್ತೀಚೆಗೆ ಭಾರತದ ಆಮದು ವ್ಯಾಪಾರದಲ್ಲಿ ಅಮೇರಿಕದ ಪಾಲು ಸಾಕಷ್ಟು ಇಳಿಮುಖವಾಗಿದೆ.
3. ಸ್ವಾತಂತ್ರ್ಯನಂತರ ನಮ್ಮ ಆಮದು ವ್ಯಾಪಾರದಲ್ಲಿ ಜಪಾನು ಹೆಚ್ಚಿನ ಸ್ಥಾನ ಪಡೆಯಲಾರಂಭಿಸಿತು.
4. ಸ್ವಾತಂತ್ರ್ಯಕ್ಕೆ ಮೊದಲು ಭಾರತವು ರಷ್ಯಾದಿಂದ ಏನನ್ನೂ ಆಮದು ಮಾಡಿಕೊಳ್ಳುತ್ತಿರಲಿಲ್ಲ ಎನ್ನಬಹುದು. ಆದರೆ, ಸ್ವಾತಂತ್ರ್ಯಾನಂತರ, ಭಾರತವು ರಷ್ಯಾದಿಂದ ಹೆಚ್ಚು ಆಮದು ಮಾಡಿಕೊಳ್ಳಲಾರಂಭಿಸಿತು. ಇದು ವರ್ಷದಿಂದ ವರ್ಷಕ್ಕೆ ಏರುತ್ತಿದೆ. ರಷ್ಯಾದ ವಿಭಜನೆಯ ನಂತರ ರಷ್ಯಾದ ಪಾಲು ಗಣನೀಯವಾಗಿ ಕುಸಿದಿದೆ.
5. ಇತ್ತೀಚಿನ ವರ್ಷಗಳಲ್ಲಿ ನಾವು ಪಶ್ಚಿಮ ಜರ್ಮನಿಯಿಂದ ಆಮದು ಮಾಡಿಕೊಳ್ಳುತ್ತಿರುವುದು ಹೆಚ್ಚಿದೆ.
6. ನಮ್ಮ ಆಮದು ವ್ಯಾಪಾರದಲ್ಲಿ ಕೆನಡಾ, ಆಸ್ಟ್ರೇಲಿಯಾ, ಸುಡಾನ್, ಕೀನ್ಯಾ, ಈಜಿಪ್ಟ್ ಮುಂತಾದವುಗಳ ಪಾಲು ಹೆಚ್ಚುತ್ತಿದೆ. ಈ ದೇಶಗಳು ಭಾರತಕ್ಕೆ ಗೋಧಿ ಮತ್ತು ಕಚ್ಚಾ ಹತ್ತಿಯನ್ನು ಪೂರೈಸುತ್ತವೆ.
7. ಇತ್ತೀಚೆಗೆ, ಮಧ್ಯ ಪೂರ್ವರಾಷ್ಟ್ರಗಳು ಭಾರತಕ್ಕೆ ಪೆಟ್ರೋಲ್ ಪೂರೈಕೆ ಮಾಡುವ ಮುಖ್ಯದೇಶಗಳಾಗಿವೆ. ಅದರಿಂದಾಗಿ ಈ ದೇಶಗಳ ಆಯಾತಪಾಲು ಗಣನೀಯವಾಗಿ ಹೆಚ್ಚಿದೆ.

- **ಪ್ರತಿಕೂಲ ವ್ಯಾಪಾರದ ಶಿಲ್ಕು:**

ಸ್ವಾತಂತ್ರ್ಯಪೂರ್ವದಲ್ಲಿ ಭಾರತವು ಅನುಕೂಲಕರ ವ್ಯಾಪಾರದ ಶಿಲ್ಕನ್ನು ಹೊಂದಿತ್ತು. ಆದರೆ ಸ್ವಾತಂತ್ರ್ಯನಂತರ ನಮ್ಮ ವ್ಯಾಪಾರದ ಶಿಲ್ಕು ಪ್ರತಿಕೂಲಕರವಾಗಿದೆ. 1990 – 91ರಲ್ಲಿ ನಮ್ಮ ವ್ಯಾಪಾರ ಶಿಲ್ಕಿನಲ್ಲಿನ ಕೊರತೆಯು ರೂ 10,635 ಕೋಟಿಗಳಾಗಿತ್ತು. ಆಯಾತಗಳ ಮೇಲಣ ಕಟ್ಟುನಿಟ್ಟಾದ ನಿರ್ಬಂಧಗಳಿಂದಾಗಿ 1991 – 92ರಲ್ಲಿ ವ್ಯಾಪಾರದ ಕೊರತೆಯು 3809 ಕೋಟಿ ರೂ.ಗಳಿಗೆ ಕುಸಿಯಿತು. 1992 – 93ರಲ್ಲಿ ಆಯಾತಗಳ ಉದಾರೀಕರಣದಿಂದಾಗಿ ವ್ಯಾಪಾರದ ಕೊರತೆಯು 9687 ಕೋಟಿ ರೂ.ಗಳಿಗೆ ಹೆಚ್ಚಿತು. 1993 – 94ರಲ್ಲಿ ನಿರ್ಯಾತಗಳ ಹೆಚ್ಚಳ ಮತ್ತು ಆಯಾತಗಳ ಕುಸಿತದಿಂದಾಗಿ ವ್ಯಾಪಾರದ ಕೊರತೆಯು 3350 ಕೋಟಿಗಳಿಗೆ ಕುಸಿಯಿತು. 1999 – 2000ದಲ್ಲಿ ವ್ಯಾಪಾರದ ಕೊರತೆಯು 55675 ಕೋಟಿ ರೂಪಾಯಿಗಳಿಗೆ ಹೆಚ್ಚಿತು. 2003 – 04ರಲ್ಲಿ ವ್ಯಾಪಾರದ ಕೊರತೆಯು 62394 ಕೋಟಿ ರೂ.ಗಳಿಗೇರಿತು. ನಮ್ಮ ದೇಶದ ತೀವ್ರವಾದ ಕೈಗಾರಿಕೀಕರಣಕ್ಕಾಗಿ ಅವಶ್ಯವಾದ ಕಬ್ಬಿಣಯುಕ್ತ ಮತ್ತು ಕಬ್ಬಿಣರಹಿತ ಲೋಹಗಳು, ರಾಸಾಯನಿಕಗಳು, ಯಂತ್ರಗಳು, ಸಾರಿಗೆ ಸಲಕರಣೆಗಳು, ಮತ್ತು ಕಚ್ಚಾವಸ್ತುಗಳ ಬೃಹತ್ ಆಯಾರ ಹಾಗೂ ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಪೆಟ್ರೋಲ್ ಮತ್ತು ಪೆಟ್ರೋಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೃಹತ್ ಆಯಾತಗಳು ನಮ್ಮ ದೇಶದ ವ್ಯಾಪಾರದ ಶಿಲ್ಕಿನ ಕೊರತೆಗೆ ಕಾರಣವಾದ ಅಂಶಗಳಾಗಿವೆ.


downloaded from: www.kpscvaani.com

- **ನಮ್ಮ ವಿದೇಶ ವ್ಯಾಪಾರದಲ್ಲಿ ಸರ್ಕಾರದ ಹೆಚ್ಚುತ್ತಿರುವ ಭಾಗವಹಿಸುವಿಕೆ:**

ನಮ್ಮ ವಿದೇಶ ವ್ಯಾಪಾರದಲ್ಲಿ ಸರ್ಕಾರದ ಭಾಗವಹಿಸುವಿಕೆಯು ಹೆಚ್ಚುತ್ತಿದೆ.ಸರ್ಕಾರಿ ಕಾರ್ಯಭಾರಿಗಳಾದ ಭಾರತೀಯ ರಾಜ್ಯ ವ್ಯಾಪಾರ ನಿಗಮ, ಭಾರತದ ಖನಿಜಗಳ ಮತ್ತು ಲೋಹಗಳ ವ್ಯಾಪಾರ ನಿಗಮ, ಮತ್ತು ಕರಕುಶಲ ಮತ್ತು ಕೈ ಮಗ್ಗ ರಫ್ತು ನಿಗಮ, ಇತ್ಯಾದಿಗಳ ಸ್ಥಾಪನೆಯು ನಮ್ಮ ವಿದೇಶ ವ್ಯಾಪಾರಕ್ಕೆ ಒಂದು ವಿಶಿಷ್ಟ ರೂಪವನ್ನು ನೀಡಿವೆ.

- **ದ್ವಿಪಕ್ಷೀಯ ವ್ಯಾಪಾರ ಸಂಧಾನಗಳು:**

ದೇಶದ ರಫ್ತುನ್ನು ಹೆಚ್ಚಿಸಲು ಮತ್ತು ವೈವಿಧ್ಯಮಯಗೊಳಿಸಲು, ಹಾಗೂ ಅವಶ್ಯಕವಾದ ಆಮದನ್ನು, ವಿದೇಶ ವಿನಿಮಯ ಸಂಗ್ರಹಕ್ಕೆ ಹೆಚ್ಚಿನ ಹೊರೆ ಬೀಳದಂತೆ, ಪಡೆಯುವುದಕ್ಕೆ, ಭಾರತವು ರಷ್ಯ, ಪೂರ್ವಜರ್ಮನಿ, ಹಂಗೇರಿ, ಪೋಲೆಂಡ್, ಯುಗೋಸ್ಲಾವಿಯಾ, ಪಶ್ಚಿಮಜರ್ಮನಿ ಮತ್ತು ಅನೇಕ ಆಫ್ರಿಕದ ದೇಶಗಳೊಡನೆ ದ್ವಿಪಕ್ಷೀಯ ವ್ಯಾಪಾರ ಸಂಧಾನಗಳನ್ನು ಮಾಡಿಕೊಂಡಿದೆ.

- **ರಫ್ತು ಹೆಚ್ಚಿಸುವ ತೀವ್ರ ಕಾರ್ಯಕ್ರಮ:**

ಭಾರತವು ತನ್ನ ರಫ್ತನ್ನು ಹೆಚ್ಚಿಸುವ ತೀವ್ರ ಕಾರ್ಯಕ್ರಮವನ್ನು ಕೈಗೊಂಡಿದೆ. ರಫ್ತನ್ನು ಹೆಚ್ಚಿಸುವುದಕ್ಕಾಗಿ ಸರಕಾರ ಕೈಕೊಂಡ ಕ್ರಮಗಳು ಹಲವಾರು.

- **ಆಮದಿನ ಮೇಲೆ ಪ್ರತಿಬಂಧ ಮತ್ತು ನಿಯಂತ್ರಣ .**

ನಮ್ಮ ವಿದೇಶ ವ್ಯಾಪಾರದ ಇನ್ನೊಂದು ಲಕ್ಷಣವೆಂದರೆ, ನಮ್ಮ ಆಮದಿನ ಮೇಲೆ ಸರಕಾರ ಹಾಕಿದ ಪ್ರತಿಬಂಧ ಹಾಗೂ ನಿಯಂತ್ರಣ. ವಿದೇಶ ವಿನಿಮಯದ ಸಂಚಯವನ್ನು ಅತಿ ಅಗತ್ಯದ ಆಮದುಗಳಿಗಾಗಿ ಬಳಸುವುದೂ ಇದರ ಉದ್ದೇಶವಾಗಿದೆ. ಅಲ್ಲದೆ, ವಿದೇಶ ವಿನಿಮಯದಲ್ಲಿ ಉಳಿತಾಯ ಮಾಡವ, ಬದಲಿ ಆಮದಿಗೆ ಪ್ರೋತ್ಸಾಹ ನೀಡುವ ಕೆಲಸವೂ ನಡೆದಿದೆ.

## ಭಾರತದ ವಿದೇಶ ವ್ಯಾಪಾರದ ರಚನೆ ಮತ್ತು ದಿಕ್ಕು:

### ಭಾರತದ ವಿದೇಶ ವ್ಯಾಪಾರದ ರಚನೆ:

ಈ ಹಿಂದೆ ಹೇಳಿದಂತೆ, ಭಾರತದ ವಿದೇಶ ವ್ಯಾಪಾರದ ರಚನೆ ಎಂದರೆ ಭಾರತದಿಂದ ರಫ್ತಾಗುವ ಹಾಗೂ ಭಾರತ ಆಮದು ಮಾಡಿಕೊಳ್ಳುವ ವಸ್ತುಗಳು.

ಇಂದು ಭಾರತದ ರಫ್ತು ವ್ಯಾಪಾರದ ಮುಖ್ಯ ವಸ್ತುಗಳು.





downloaded from: www.kpscvaani.com

## 1. ಹತ್ತಿ ಬಟ್ಟೆಗಳು:

ಹತ್ತಿ ಬಟ್ಟೆಗಳ ರಫ್ತು ಬಹಳ ಹಿಂದಿನ ಕಾಲದಿಂದಲೂ ಭಾರತದಿಂದ ನಡೆಯುತ್ತಿತ್ತು. ಇಂದೂ, ಅದು ನಾವು ರಫ್ತು ಮಾಡುವ ವಸ್ತುಗಳಲ್ಲಿ ಮೊದಲ ಸ್ಥಾನ ಪಡೆದಿದೆ. 2003 – 04ರಲ್ಲಿ ರಫ್ತಾದ ಹತ್ತಿ ಬಟ್ಟೆಗಳ ಮೌಲ್ಯ ರೂ. 55003.74 ಕೋಟಿ. ನಮ್ಮ ಹತ್ತಿಬಟ್ಟೆಗಳನ್ನು ಕೊಳ್ಳುವ ಮುಖ್ಯ ದೇಶಗಳೆಂದರೆ, ಬರ್ಮಾ, ಮಲೇಶ್ಯಾ, ಶ್ರೀಲಂಕಾ, ಅಪಘಾನಿಸ್ತಾನ, ಆಸ್ಟ್ರೇಲಿಯಾ, ಸುಡಾನ್, ಪೂರ್ವ ಮತ್ತು ಪಶ್ಚಿಮ ಆಫ್ರಿಕಾ, ಇಂಗ್ಲೆಂಡ್ ಮತ್ತು ಜಪಾನು.

## 2. ಸೆಣಬಿನ ಉತ್ಪನ್ನಗಳು:

ನಮ್ಮ ಸಾಂಪ್ರದಾಯಿಕ ರಫ್ತುಗಳಲ್ಲಿ ಸೆಣಬಿನ ಉತ್ಪನ್ನಗಳೂ ಒಂದು. ಇಂದೂ, ಅದು ನಾವು ರಫ್ತು ಮಾಡುವ ವಸ್ತುಗಳಲ್ಲಿ ಮುಖ್ಯ ಸ್ಥಾನ ಪಡೆದಿದೆ. 2003 – 04ರಲ್ಲಿ ರಫ್ತಾದ ಸೆಣಬಿನ ಉತ್ಪನ್ನಗಳ ಮೌಲ್ಯ ರೂ. 916.67 ಕೋಟಿ. ಸೆಣಬಿನ ಉತ್ಪನ್ನಗಳನ್ನು ಕೊಳ್ಳುವ ಮುಖ್ಯ ದೇಶಗಳೆಂದರೆ, ಅಮೇರಿಕಾ, ಕೆನಡಾ, ಇಂಗ್ಲೆಂಡ್, ರಶ್ಯಾ, ಆಸ್ಟ್ರೇಲಿಯಾ, ಬರ್ಮಾ ಇತ್ಯಾದಿ.

## 3. ಚಹ:

ಇದೂ ನಮ್ಮ ಸಾಂಪ್ರದಾಯಿಕ ರಫ್ತುಗಳಲ್ಲಿ ಒಂದು. 2003 – 04ರಲ್ಲಿ ರಫ್ತಾದ ಒಟ್ಟು ಚಾ ಸೊಪ್ಪಿನ ಮೌಲ್ಯ ರೂ. 2,676.78 ಕೋಟಿ ನಮ್ಮ ಚಾ ಸೊಪ್ಪನ್ನು ಕೊಳ್ಳುವ ಮುಖ್ಯ ದೇಶಗಳೆಂದರೆ, ಇಂಗ್ಲೆಂಡ್, ಅಮೇರಿಕಾ, ಕೆನಡಾ, ಐರ್ ಲ್ಯಾಂಡ್, ರಷ್ಯ ಈಜಿಪ್ಟ್ ಇತ್ಯಾದಿ.

## 4. ತೊಗಲು, ಚರ್ಮ, ಹದಮಾಡಿದ ಚರ್ಮ, ಚರ್ಮದ ವಸ್ತುಗಳು:

ಹಿಂದೆ ಭಾರತವು ಕೇವಲ ತೊಗಲು ಮತ್ತು ಹದಮಾಡುವ ಚರ್ಮವನ್ನು ರಫ್ತು ಮಾಡುತ್ತಿತ್ತು. ಆದರೆ ಇಂದು ನಮ್ಮ ದೇಶವು ಹದಮಾಡಿದ ಚರ್ಮವನ್ನೂ ಆದರಿಂದ ತಯಾರಿಸಿದ ವಸ್ತುಗಳನ್ನೂ ರಫ್ತು ಮಾಡುತ್ತದೆ. 2003–04ರಲ್ಲಿ ಅವುಗಳ ನಿರ್ಯಾತ ಮೌಲ್ಯವು ರೂ. 9306.66 ಕೋಟಿಗಳಾಗಿತ್ತು. ತೊಗಲು, ಚರ್ಮ, ಹದಮಾಡಿದ ಚರ್ಮ ಮತ್ತು ಚರ್ಮದ ವಸ್ತುಗಳನ್ನು ಕೊಳ್ಳುವ ಮುಖ್ಯ ದೇಶಗಳೆಂದರೆ ರಷ್ಯ, ಇಂಗ್ಲೆಂಡ್, ಪಶ್ಚಿಮ ಜರ್ಮನಿ, ಇಟಲಿ ಇತ್ಯಾದಿ.

## 5. ಕಬ್ಬಿಣದ ಅದುರು ಮತ್ತು ಖನಿಜಗಳು:

ಇತ್ತೀಚಿನ ವರ್ಷಗಳಲ್ಲಿ ಕಬ್ಬಿಣದ ಅದುರಿನ ಮತ್ತು ಖನಿಜಗಳ ರಫ್ತು ಗಣನೀಯವಾಗಿ ಹೆಚ್ಚಾಗಿದೆ. 2003 – 04ರಲ್ಲಿ ರಫ್ತಾದ ಮೌಲ್ಯ ರೂ. 10755.74 ಕೋಟಿ. ಅದನ್ನು ಕೊಳ್ಳುವ ಮುಖ್ಯ ದೇಶಗಳೆಂದರೆ, ಅಮೇರಿಕಾ ಇರಾನ್ ಮತ್ತು ಜಪಾನ್.



downloaded from: www.kpscvaani.com

### 6. ಹೊಗೆಸೊಪ್ಪು:

ಸಿದ್ಧವಸ್ತುವಾಗಿ ಉತ್ಪಾದಿತವಾಗದ, ಹೊಗೆಸೊಪ್ಪು ನಮ್ಮ ರಫ್ತು ವ್ಯಾಪಾರದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಇಂಗ್ಲೆಂಡ್ ಮತ್ತು ಜಪಾನ್ ಅದನ್ನು ಕೊಳ್ಳುವ ದೇಶಗಳು.

### 7. ಸಂಬಾರಗಳು:

ಕರಿಮೆಣಸು, ಏಲಕ್ಕಿ ಮತ್ತು ಲವಂಗ ಮುಂತಾದ ಸಂಬಾರಗಳು ನಮ್ಮ ಸಾಂಪ್ರದಾಯಿಕ ರಫ್ತಿನ ವಸ್ತುಗಳು. ಇವುಗಳನ್ನು ಕೊಳ್ಳುವ ಮುಖ್ಯ ದೇಶಗಳೆಂದರೆ, ಅಮೇರಿಕಾ, ಪಶ್ಚಿಮ ಯುರೋಪಿನ ದೇಶಗಳು ಮತ್ತು ಮಧ್ಯಪೂರ್ವ ದೇಶಗಳು.

### 8. ರತ್ನ ಮತ್ತು ಆಭರಣಗಳು(Gems and Jewellery):

2003 – 04ರಲ್ಲಿ ರತ್ನ ಮತ್ತು ಆಭರಣಗಳ ನಿಯಾಗತವು ರೂ. 48293.86 ಕೋಟಿಗಳಾಗಿತ್ತು. ಇವುಗಳ ಮುಖ್ಯ ಖರೀದಿಗಾರರೆಂದರೆ, ಅಮೇರಿಕಾ, ಪಶ್ಚಿಮ ಯುರೋಪಿನ ದೇಶಗಳು ಮತ್ತು ಮಧ್ಯಪೂರ್ವ ರಾಷ್ಟ್ರಗಳು.

### 9. ಕರಕುಶಲ ವಸ್ತುಗಳು:

ಕರಕುಶಲ ವಸ್ತುಗಳ ನಿರ್ಯಾತವೂ ಗಣನೀಯವಾಗಿ ಹೆಚ್ಚಿದೆ. 2003 – 04ರಲ್ಲಿ ಅವುಗಳ ನಿರ್ಯಾತವು ರೂ. 12765.18 ಕೋಟಿ ರೂ.ಗಳಾಗಿತ್ತು.

### 10. ಇತರ ರಫ್ತುಗಳು:

ಇತರ ರಫ್ತುಗಳು ಸಕ್ಕರೆ, ಉಣ್ಣೆ ರತ್ನಗಂಬಳಿ, ಅರಗು, ಲಘು ಇಂಜಿನಿಯರಿಂಗ್ ವಸ್ತುಗಳು, ಸಾಬೂನುಗಳು, ತೆಂಗಿನ ನಾರಿನ ವಸ್ತುಗಳು, ಕಬ್ಬಿಣ ಮತ್ತು ಉಕ್ಕಿನ ಸರಕುಗಳು, ರಾಸಾಯನಿಕಗಳು, ಆಟದ ಸರಕುಗಳು ಇತ್ಯಾದಿ.

## ಇಂದು ಭಾರತದ ಆಮದು ವ್ಯಾಪಾರದ ಮುಖ್ಯ ವಸ್ತುಗಳು:

ಇಂದು ಭಾರತದ ಆಮದು ವ್ಯಾಪಾರದ ಮುಖ್ಯ ವಸ್ತುಗಳೆಂದರೆ:

1. **ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು** ಪೆಟ್ರೋಲಿಯಂನ ಉತ್ಪಾದನೆ ನಮ್ಮ ನಾಡಿನಲ್ಲಿ ಸಾಕಷ್ಟು ಆಗದ ಕಾರಣ, ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳನ್ನು ಭಾರದ ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಗಿದೆ. 2003 – 04ರಲ್ಲಿ ಭಾರತ ಆಮದು ಮಾಡಿಕೊಂಡ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೌಲ್ಯ ರೂ. 94,520 ಕೋಟಿ. ಮುಖ್ಯವಾಗಿ, ಮಧ್ಯಪೂರ್ವ ದೇಶಗಳಾದ ಇರಾನ್, ಕುವೈತ್, ಸೌದಿ ಅರೇಬಿಯಾ ಮುಂತಾದಲ್ಲಿಂದ ನಾವು ಇದನ್ನು ಆಮದು ಮಾಡಿಕೊಳ್ಳುತ್ತೇವೆ.



GNANADHARE IAS ACADEMY
downloaded from: www.kpscvaani.com

2. **ಯಂತ್ರೋಪಕರಣಗಳು**: ಸ್ವಾತಂತ್ರ್ಯ ಲಭಿಸಿದಂದಿನಿಂದ, ದೇಶದ ಕ್ಷಿಪ್ರ ಔದ್ಯೋಗಿಕರಣಕ್ಕಾಗಿ ಎಲ್ಲಾ ತರದ ಯಂತ್ರೋಪಕರಣಗಳನ್ನು ಭಾರತವು ಆಮದು ಮಾಡಿಕೊಳ್ಳುತ್ತಿದೆ. 2003 – 04ರಲ್ಲಿ ನಾವು ಆಮದು ಮಾಡಿಕೊಂಡ ಎಲ್ಲಾ ತರದ ಯಂತ್ರೋಪಕರಣಗಳ ಮೌಲ್ಯ ರೂ.37627.31 ಕೋಟಿ. ನಮಗೆ ಯಂತ್ರೋಪಕರಣಗಳನ್ನು ಒದಗಿಸುವ ದೇಶಗಳೆಂದರೆ, ಇಂಗ್ಲೆಂಡ್, ಅಮೇರಿಕಾ, ಪಶ್ಚಿಮ ಜರ್ಮನಿ, ರಷ್ಯಾ ಮತ್ತು ಜಪಾನ್.

3. **ಲೋಹಗಳು**: ಸ್ವಾತಂತ್ರ್ಯಾ ನಂತರ ಕೈಗಾರಿಕೆಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ, ಭಾರತವು ಕಬ್ಬಿಣ ಮತ್ತು ಉಕ್ಕು, ತಾಮ್ರ, ಸತು, ತವರ, ಸೀಸ ಮುಂತಾದ ಲೋಹಗಳನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳತೊಡಗಿತು. ಅಮೇರಿಕ, ಇಂಗ್ಲೆಂಡ್, ಪಶ್ಚಿಮ ಜರ್ಮನಿ ಇವುಗಳನ್ನು ಒದಗಿಸುತ್ತವೆ. 2003 – 04 ರಲ್ಲಿ ಇವುಗಳ ಆಯಾತ ಮೌಲ್ಯವು ರೂ. 6893.12 ಕೋಟಿಯಾಗಿತ್ತು.

4. **ಕಚ್ಚಾಹತ್ತಿ:** ಉತ್ತಮ ಗುಣಮಟ್ಟದ ಹತ್ತಿಯನ್ನು ಭಾರತವು ಅಮೇರಿಕಾ, ಈಜಿಪ್ಟ, ಸುದಾನ್, ಕೀನ್ಯಾ ಮೊದಲಾದ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ.

5. **ಕಚ್ಚಾ ಸೆಣಬು**: ನಮ್ಮ ಸೆಣಬು ಗಿರಣಿಗಳಿಗೆ ಕಚ್ಚಾ ಸೆಣಬನ್ನು ಒದಗಿಸುವುದಕ್ಕಾಗಿ ಪ್ರತಿವರ್ಷ ನಾವು ಒಂದು ಕೋಟಿ ರೂಪಾಯಿಯ ಕಚ್ಚಾ ಸೆಣಬನ್ನು ಬಾಂಗ್ಲಾದೇಶದಿಂದ ಆಮದು ಮಾಡಿಕೊಳ್ಳುತೇವೆ.

6. **ಆಹಾರ ಧಾನ್ಯಗಳು**: ಆಹಾರ ವಸ್ತುಗಳ ಕೊರತೆಯುಂಟಾದಾಗ ಭಾರತವು ಅಮೇರಿಕ, ಕೆನಡಾ, ಅರ್ಜೆಂಟೀನಾ, ಆಸ್ಟ್ರೇಲಿಯಾ ಮತ್ತು ಬರ್ಮಾ ದೇಶಗಳಿಮದ ಗೋಧಿ ಮತ್ತು ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತದೆ. 2003 – 04ರಲ್ಲಿ ಇದರ ಆಯಾತ ಮೌಲ್ಯವು ರೂ.88.111 ಕೋಟಿಗಳಾಗಿತ್ತು.

7. **ರಸಗೊಬ್ಬರಗಳು:** ಕೃಷಿಯಲ್ಲಿ ನವೀನೋಪಾಯಗಳನ್ನು ಅಳವಡಿಸಲು ನಾವು ತೊಡಗಿನಂದಿನಿಂದ ನಮ್ಮ ರೈತರು ಹೆಚ್ಚು ಹೆಚ್ಚಾಗಿ ರಸಗೊಬ್ಬರಗಳನ್ನು ಬಳಸತೊಡಗಿದ್ದಾರೆ. ರಾಸಾಯನಿಕ ಗೊಬ್ಬರಗಳನ್ನು ನಮ್ಮ ದೇಶದಲ್ಲಿ ಬಹಳಷ್ಟು ಉತ್ಪಾದಿಸುತ್ತಿದ್ದರೂ. ಆದುದರಿಂದ, ರಸಗೊಬ್ಬರಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಅಮೇರಿಕಾ, ಪಶ್ಚಿಮ ಜರ್ಮನಿ ಮುಂತಾದ ದೇಶಗಳಿಂದ ನಾವು ರಸಗೊಬ್ಬರವನ್ನು ಆಮದು ಮಾಡಿಕೊಳ್ಳುತ್ತೇವೆ. 2003 – 04ರಲ್ಲಿ ಅದಕ್ಕೆ ರೂ.3307.37 ಕೋಟಿ ವೆಚ್ಚವಾಯಿತು.



downloaded from: www.kpscvaani.com

8. **ಮುತ್ತುಗಳು, ಅಮೂಲ್ಯ ಮತ್ತು ಅರೆ ಅಮೂಲ್ಯ ಹರಳುಗಳು:** ರತ್ನ ಮತ್ತು ಆಭರಣ ಕೈಗಾರಿಕೆಗಳ ಹೆಚ್ಚಾದ ಬೇಡಿಕೆಯಿಂದಾಗಿ ಮುತ್ತು, ಅಮೂಲ್ಯ ಮತ್ತು ಅರೆಅಮೂಲ್ಯ ಹರಳುಗಳ ಆಯಾತವು ಹೆಚ್ಚಾಗಿದೆ. 2003 – 04ರಲ್ಲಿ ಮತ್ತು ಅಮೂಲ್ಯ ಮತ್ತು ಅರೆಅಮೂಲ್ಯ ಹರಳುಗಳ ಆಯಾರ ಮೌಲ್ಯವು ರೂ.32,755.51 ಕೋಟಿ ರೂಪಾಯಿಗಳಾಗಿತ್ತು.

9. **ಖಾದ್ಯ ತೈಲಗಳು:** ಖಾದ್ಯ ತೈಲಗಳ ಆಯಾತವೂ ಹೆಚ್ಚಾಗಿದೆ. 2003 – 04ರಲ್ಲಿ ಅವುಗಳ ಆಯಾತವು ರೂ.11,674.41 ಕೋಟಿ ರೂಪಾಯಿಗಳಾಗಿತ್ತು.

10. **ಇತರ ಆಮದುಗಳು:** ಇತರ ಪ್ರಮುಖವಾದ ಆಮದುಗಳು ಎಂದರೆ ಔಷಧಿಗಳು, ರಾಸಾಯನಿಕಗಳು, ವಿದ್ಯುತ್ ಸರಕುಗಳು, ಪ್ರಯೋಗಾಲಯ ಉಪಕರಣಗಳು, ಕಲ್ಲಿದ್ದಲು ಮತ್ತು ಕೋಕ್, ಪತ್ರಿಕೆಗಳ ಕಾಗದ ಇತ್ಯಾದಿ.

**ಈ ಕಳಗಿನ ಕೋಷ್ಟಕವು 2003 – 04ರಲ್ಲಿ ಭಾರತದ ಆಯಾತವನ್ನು ತೋರಿಸುತ್ತದೆ.**

(ಕೋಟಿ ರೂಪ್ಯಾಗಳಲ್ಲಿ)

| ಸರಕುಗಳು | 2003 – 04 |
|---|---|
| 1. ಬೃಹತ್ ಆಯಾತಗಳು: | 1,34,067.42 |
| ಬೇಳೆಕಾಳುಗಳು ಮತ್ತು ಅದರ ವಸ್ತುಗಳು | 88.11 |
| ರಸಗೊಬ್ಬರಗಳು | 3,303.37 |
| ಖಾದ್ಯತೈಲ | 11,674.41 |
| ಕುಸುರಿ ಮತ್ತು ತ್ಯಾಜ್ಯ ಕಾಗದ | 1,876.54 |
| ಕಾಗದದ ಬೋರ್ಡ್ ಮತ್ತು ಅದರ ಉತ್ಪನ್ನಗಳು | 2,769.18 |
| ಪತ್ರಕೆಗಳ ಕಾಗದ | 1,535.90 |
| ಕಬ್ಬಿಣರಹಿತ ಲೋಹಗಳು | 4,330.94 |
| ಲೋಹ ಕಬ್ಬಿಣ ಅದಿರು ಮತ್ತು ಲೋಹದ ತ್ಯಾಜ್ಯಗಳು | 5,746.43 |
| ಕಬ್ಬಿಣ ಮತ್ತು ಉಕ್ಕು | 6,893.12 |
| ಕಚ್ಚಾ ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳೂ | 94.520.00 |
| 2. ಮುತ್ತುಗಳು, ಅಮೂಲ್ಯ ಮತ್ತು ಅರೆ ಅಮೂಲ್ಯ ಹರಳುಗಳು | 32.755.51 |
| 3. ಯಂತ್ರೋಪಕರಣ | 37,627.31 |
| 4. ಯೋಜನಾ ಸರಕುಗಳು | 1,744.88 |
| 5. ಇತರ ಸರಕುಗಳು | 1,47.780.48 |
| ದ್ವಿದಳ ಧಾನ್ಯಗಳು | 2,251.15 |
| ಕಲ್ಲಿದ್ದಲು, ಕೋಕ್ ಮತ್ತು ಕಲ್ಲಿದ್ದಲು ಇಟ್ಟಿಗೆ | 6,478.77 |
| ಲೋಹವಿಲ್ಲದ ಖನಿಜ ವಸ್ತುಗಳು | 1,500.12 |




downloaded from: www.kpscvaani.com

| | |
|---|---|
| ಸಾವಯವ ಮತ್ತು ಅಸಾವಯವ ರಾಸಾಯನಿಕಗಳು | 18,482.97 |
| ಬಣ್ಣ ಹಾಕುವ ಮತ್ತು ಹದ ಮಾಡುವ ವಸ್ತುಗಳು | 1,600.53 |
| ಔಷಧೀಯ ಮತ್ತು ಉತ್ಪನ್ನಗಳು | 2,955.63 |
| ಕೃತಕ ರಾಳ ಇತ್ಯಾದಿ | 4,962.81 |
| ರಾಸಾಯನಿಕ ಉತ್ಪನ್ನಗಳು | 2,898.67 |
| ಇತರ ಬಟ್ಟೆ ನೂಲು, ಬಟ್ಟೆ ಇತ್ಯಾದಿ | 1.949.38 |
| ಲೋಹದ ಉತ್ಪನ್ನಗಳು | 3,157.93 |
| ವೃತ್ತಿಪರರ ಸಾಧನಗಳು | 5,635.56 |
| ವಿದ್ಯುನ್ಮಾನ ಸರಕುಗಳು | 34,442.91 |
| ಮರ ಮತ್ತು ಮರದ ಉತ್ಪನ್ನಗಳು | 34.268.91 |
| ಚಿನ್ನ ಮತ್ತು ಬೆಳ್ಳಿ | 31,326.69 |

## ಈಗ ಭಾರತದ ವಿದೇಶಿ ವ್ಯಾಪಾರದ ದಿಕ್ಕು

ಈಗ ಭಾರತದ ವಿದೇಶ ವ್ಯಾಪಾರದ ದಿಕ್ಕೆಂದರೆ ಭಾರತವು ಇಂದು ವಿಶೇಷ ವ್ಯಾಪಾರವನ್ನು ನಡೆಸುವ ದೇಶಗಳು

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ವಿದೇಶ ವ್ಯಾಪಾರವು ಮುಖ್ಯವಾಗಿ ಇಂಗ್ಲೆಂಡಿ ನೊಂದಿಗಿತ್ತು. ಆದರೆ ಸ್ವಾತಂತ್ರ್ಯಾನಂತರ ನಮ್ಮ ವಿದೇಶ ವ್ಯಾಪಾರದಲ್ಲಿ ಇಂಗ್ಲೆಂಡಿನ ಪಾಲು ಕುಸಿದಿದೆ. ಮತ್ತು ಇತರ ದೇಶಗಳಾದ ಅಮೇರಿಕಾ, ರಷ್ಯಾ, ಜರ್ಮನಿ, ಜಪಾನ್‌ಗಳ ಜೊತೆ ಹೆಚ್ಚಾಗಿದೆ. ಇಂದು ಭಾರತವು ಎಲ್ಲಾ ಪ್ರಮುಖ ವ್ಯಾಪಾರದ ವಲಯಗಳೊಂದಿಗೆ ಮತ್ತು ವಿಶ್ವದ ಎಲ್ಲ ಭೌಗೋಳಿಕ ಪ್ರದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದೆ. ಪ್ರಾದೇಶಿಕವಾಗಿ, 2003 – 04ರಲ್ಲಿ ಏಷ್ಯಾಕ್ಕೆ ಭಾರತದ ನಿರ್ಯಾತವು 46.35% ದಷ್ಟಾದರೆ, ಪಶ್ಚಿಮ ಯುರೋಪಿಗೆ ಸುಮಾರು 24.02% ಮತ್ತು ಅಮೇರಿಕಾಕ್ಕೆ 21.10% ನಿರ್ಯಾತವಾಗುತ್ತದೆ. ಭಾರತದ ಆಯಾತಕ್ಕೆ ಸಂಬಂಧಿಸಿದಂತೆ, 2003 – 04ರಲ್ಲಿ ಏಷ್ಯಾದಿಂದ 34.53%, ಪಶ್ಚಿಮ ಯುರೋಪಿಸಿಂದ 23.58% ಮತ್ತು ಅಮೇರಿಕಾದಿಂದ 8.59% ಆಗಿತ್ತು.

**ಈ ಕೆಳಗಿನ ಕೋಷ್ಟಕವು 2003 – 04ರಲ್ಲಿ ಭಾರತದ ವಿದೇಶ ವ್ಯಾಪಾರದ ದಿಕ್ಕನ್ನು ತೋರಿಸುತ್ತದೆ.**

(ಕೋಟಿ ರೂಪಾಯಿಗಳಲ್ಲಿ)

| ಪ್ರದೇಶ | ನಿರ್ಯಾತಗಳು ಎಪ್ರಿಲ್–ಮಾರ್ಚ್ | ಆಯಾತಗಳು ಎಪ್ರಿಲ್–ಮಾರ್ಚ್ |
|---|---|---|
| | 2003 – 04 | 2003 – 04 |
| ಪಶ್ಚಿಮ ಯುರೋಪ್ | 70,030 | 83,456 |
| ಪೂರ್ವ ಯುರೋಪ್ | 2,404 | 1,687 |
| ಅಖಖ ಮತ್ತು ಬಾಲ್ಟಿಕ್ ರಾಷ್ಟ್ರಗಳು | 4,691 | 5,795 |



downloaded from: www.kpscvaani.com

| | | |
|---|---|---|
| ಏಷ್ಯಾ | 1,35,134 | 1,22273 |
| ಆಫ್ರಿಕಾ | 17,474 | 14,640 |
| ಅಮೇರಿಕಾ | 61,537 | 30,403 |
| ಲ್ಯಾಟಿನ್ ಅಮೇರಿಕಾದ ದೇಶಗಳು | 5,169 | 5,342 |

## ಗ್ರಾಮೀಣ ಮತ್ತು ನಗರ ಸಮುದಾಯದ ತಾರತಮ್ಯ :–

### 1. ಕುಟುಂಬದ ರಚನೆಗೆ ಸಂಬಂಧಿಸಿದಂತೆ ತಾರತಮ್ಯ:

- ಗ್ರಾಮೀಣ ಭಾಗದಲ್ಲಿ ಕುಟುಂಬಕ್ಕೆ ಹೆಚ್ಚು ಪ್ರಾಶಸ್ತ್ಯ. ನಗರ ಭಾಗದಲ್ಲಿ ಕುಟುಂಬಕ್ಕೆ ಕಡಿಮೆ ಪ್ರಾಶಸ್ತ್ಯ.
- ಗ್ರಾಮೀಣ ಭಾಗದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಅಸ್ಥಿತ್ವ. ನಗರ ಭಾಗದಲ್ಲಿ ವಿಭಕ್ತ ಕುಟುಂಬ ವ್ಯವಸ್ಥೆ ಅಸ್ಥಿತ್ವ.
- ಗ್ರಾಮೀಣ ಭಾಗದಲ್ಲಿ ಬಾಂಧವ್ಯಕ್ಕೆ ಹೆಚ್ಚು ಪ್ರಾಶಸ್ತ್ಯ. ನಗರ ಭಾಗದಲ್ಲಿ ಬಾಂಧವ್ಯಕ್ಕೆ ಕಡಿಮೆ ಪ್ರಾಶಸ್ತ್ಯ

### 2. ವಿವಾಹಕ್ಕೆ ಸಂಬಂಧಿಸಿದ ತಾರತಮ್ಯ:

- ಗ್ರಾಮೀಣ ಭಾಗದಲ್ಲಿ ವಿವಾಹಕ್ಕೆ ಹೆಚ್ಚು ಪ್ರಾಶಸ್ತ್ಯ. ನಗರ ಭಾಗದಲ್ಲೂ ವಿವಾಹಕ್ಕೆ ಹೆಚ್ಚು ಪ್ರಾಶಸ್ತ್ಯ
- ಗ್ರಾಮೀಣ ಭಾಗದಲ್ಲಿ ಸಾಂಪ್ರದಾಯಿಕವಾಗಿ ಇಡೀ ಕುಟುಂಬದ ನಡುವೆ ನೆಡೆಯುತ್ತದೆ. ನಗರ ಭಾಗದಲ್ಲಿ ಇಬ್ಬರು ವ್ಯಕ್ತಿಗಳ ನಡುವೆ ನೆಡೆಯುತ್ತವೆ.
- ಗ್ರಾಮೀಣ ಭಾಗದಲ್ಲಿ ಸಾಮಾನ್ಯವಾಗಿ ವಿಚ್ಛೇದನ ನಿಷೇದಾರ್ಹವಾಗಿದ್ದು. ನಗರ ಭಾಗದಲ್ಲಿ ವಿಚ್ಛೇದನ ಸಾಮಾನ್ಯ ಸಂಗತಿ.
- ಗ್ರಾಮೀಣ ಭಾಗದಲ್ಲಿ ವಿವಾಹ ಧಾರ್ಮಿಕ ಮಹತ್ವ ಹೊಂದಿದೆ. ನಗರ ಭಾಗದಲ್ಲಿ ವ್ಯಕ್ತಿಗೆ ಹೆಚ್ಚಿನ ಪ್ರಾಮುಖ್ಯತೆ ಧರ್ಮಕಲ್ಲ.

### 3. ಮಹಿಳೆಯರ ಸ್ಥಿತಿಗತಿಯಲ್ಲಿ ತಾರತಮ್ಯ :

- ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ನಿರ್ದಿಷ್ಟ ಜವಾಬ್ದಾರಿ ಇರುತ್ತದೆ. ನಗರದಲ್ಲಿ ಮಹಿಳೆಯರಿಗೆ ಅನಿರ್ದಿಷ್ಟಿತ ಜವಬ್ದಾರಿ ಇರುತ್ತದೆ.
- ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ಹೆಚ್ಚಿನ ನಿರ್ಬಂಧಗಳು ನಗರದಲ್ಲಿ ಮಹಿಳೆಯರಿಗೆ ಕಡಿಮೆ ನಿರ್ಬಂಧಗಳು.



downloaded from: www.kpscvaani.com

- ಗ್ರಾಮದಲ್ಲಿ ಮಹಿಳೆಯರಿಗೆ ಕಡಿಮೆ ಸ್ಥಾನಮಾನ. ನಗರದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನಮಾನ.

## 4. ನೆರೆಹೊರೆ ಮತ್ತು ಪರಿಸರಕ್ಕೆ ಸಂಬಂಧಿಸಿದ ವ್ಯತ್ಯಾಸ:

- ಗ್ರಾಮೀಣ ಪ್ರದೇಶದಲ್ಲಿರುವ ಜೀವನದಲ್ಲಿ ನೆರೆಹೊರೆಯವರಿಗೆ ಹೆಚ್ಚು ಪ್ರಾಶಸ್ತ್ಯ. ನಗರ ಪ್ರದೇಶದಲ್ಲಿ ದಿನ ನಿತ್ಯದ ಜೀವನದಲ್ಲಿ ನೆರೆಹೊರೆಯವರಿಗೆ ಕಡಿಮೆ ಪ್ರಾಶಸ್ತ್ಯ.
- ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಹಕಾರ ಮತ್ತು ದ್ವೇಷ ನಗರ ಪ್ರದೇಶದಲ್ಲಿ ಕಡಿಮೆ ಸಹಕಾರ ಮತ್ತು ಕಡಿಮೆ ದ್ವೇಷ
- ಗ್ರಾಮೀಣ ಪ್ರದೇಶದಲ್ಲಿ ನಿಸರ್ಗ ಮತ್ತು ಪರಿಸರದಿಂದ ಹೆಚ್ಚಿನ ಪ್ರಭಾವ ನಗರ ಪ್ರದೇಶದಲ್ಲಿ ಹೊರಗಿನ ಪರಿಸರ ಪ್ರಭಾವ ಅತ್ಯಲ್ಪ.

## 5. ಸಹಕಾರ:

- ಗ್ರಾಮೀಣ ಪ್ರದೇಶದಲ್ಲಿ ನಾವೂ ಎನ್ನುವ ಮನೋಬಾವ ಹೆಚ್ಚು. ಆ ಮೂಲಕ ಸಮುದಾಯದೊಂದಿಗೆ ಹೆಚ್ಚಿನ ಸಹಕಾರ.
- ನಗರ ಭಾಗದಲ್ಲಿ ನಾವೂ ಎನ್ನುವ ಮನೋಬಾವ ಕಡಿಮೆ ಆ ಮೂಲಕ ಸಮುದಾಯದೊಂದಿಗೆ ಕಡಿಮೆ ಅವಕಾಶ.

## 6. ಉದ್ಯೋಗ:

- ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ವೃತ್ತಿಯ ಮೇಲೆ ಹೆಚ್ಚಿನ ಅವಲಂಬನೆ. (ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು)
- ನಗರದಲ್ಲಿ ದ್ವಿತೀಯ ತೃತೀಯ ವಲಯಗಳ ಪ್ರಾಧಾನ್ಯತೆ.

## 7. ಸೌಲಭ್ಯಗಳಿಗೆ ಸಂಬಂಧಿಸಿದ ವ್ಯತ್ಯಾಸ

- ಗ್ರಾಮೀಣ ಪ್ರದೇಶದಲ್ಲಿ ವಿಭಿನ್ನ ಮೂಲ ಸೌಕರ್ಯಗಳ ಕೊರತೆ ನಗರದಲ್ಲಿ ಹೆಚ್ಚುವರಿ ಮೂಲ ಸೌಕರ್ಯಗಳು ವಿಭಿನ್ನ ಅವಕಾಶಗಳನ್ನು ಸೃಷ್ಟಿಸುತ್ತದೆ.

ಈ ಮೇಲಿನ ತಾರತಮ್ಯಗಳು ಭಾರತೀಯ ಸಮಾಜದಲ್ಲಿ ದ್ವಂದ್ವ ಸಮಾಜ ಅಸ್ತಿತ್ವದಲ್ಲಿರುವುದನ್ನು ಪ್ರತಿನಿಧಿಸುತ್ತದೆ



downloaded from: www.kpscvaani.com

## ಗ್ರಾಮೀಣ ಮತ್ತು ನಗರ ತಾರತಮ್ಯಕ್ಕೆ ಕಾರಣವಾದ ಅಂಶಗಳು

1. ಶಿಕ್ಷಣದ ವ್ಯವಸ್ಥೆ:
   - ಗ್ರಾಮೀಣ ಭಾಗದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಅವಕಾಶಗಳನ್ನು ವಿಸ್ತರಿಸಿದರು. ಉನ್ನತ ಶಿಕ್ಷಣ ಸೌಲಭ್ಯದಿಂದ ಗ್ರಾಮೀಣ ಸಮಾಜ ವಂಚಿತವಾಗಿದೆ.
   - ಭಾರತ ನಗರ ಸಮುದಾಯದಲ್ಲಿ 2011 ರ ಪ್ರಕಾರ 90% ಸಾಕ್ಷರತಾ ಪ್ರಮಾಣ ಗ್ರಾಮೀಣದಲ್ಲಿ 58%ರಷ್ಟು ಕಂಡು ಬರುತ್ತದೆ.
2. ಕೃಷಿ ಹಿಂದುಳಿದಿರುವಿಕೆ ಹಾಗೂ ಕೈಗಾರಿಕೀಕರಣ
3. ಸಾರಿಗೆ ಸೌಲಭ್ಯದಲ್ಲಿನ ಬಿನ್ನತೆಗಳು
4. ಗ್ರಾಮೀಣ ಸಮುದಾಯದಲ್ಲಿ ಕಡಿಮೆ ಉತ್ಪಾದಕೆತೆ ಮತ್ತು ಕಡಿಮೆ ಉದ್ಯೋಗ
5. ಬಡತನದದ ಸ್ಥಿತಿ
6. ಬ್ಯಾಕಿಂಗ್ ಸೌಲಭ್ಯಗಳು. (ಉಳಿತಾಯ, ಉತ್ಪಾದನೆ, ನಿರುದ್ಯೋಗ, ಆರ್ಥಿಕ ಸ್ಥಿತಿ)
   - ಒಂದು ಬ್ಯಾಕಿಂಗ್ ಶಾಖೆ 12000 ಜನರಿಗೆ ಸೇವೆ ಒದಗಿಸುತ್ತದೆ.
   - ನಗರ ಭಾಗದಲ್ಲಿ ಒಂದು ಬ್ಯಾಕಿಂಗ್ ಶಾಖೆ 4000 ಜನರಿಗೆ ಸೇವೆ ಒದಗಿಸುತ್ತದೆ.
   - ಗ್ರಾಮೀಣ ಭಾಗದಲ್ಲಿ ಒಂದು ಶಾಖೆ 2000 ಜನರಿಗೆ ಸೇವೆ ಒದಗಿಸುತ್ತದೆ.
   - ಅಮೇರಿಕಾದಲ್ಲಿ ಒಂದು ಬ್ಯಾಕಿಂಗ್ ಶಾಖೆ 2000 ಜನರಿಗೆ ಸೇವೆ ಒದಗಿಸುತ್ತದೆ.
7. ಇತರ ಸೇವೆಗಳಲ್ಲಿ ವ್ಯತ್ಯಾಸಗಳು
   - ಆರೋಗ್ಯದ ಸೌಲಭ್ಯ
   - ವಿಮಾ ಸೌಲಭ್ಯ

ಮಾಹಿತಿ ತಂತ್ರಜ್ಞಾನ ವಲಯದ ಅಭಿವೃದ್ಧಿ: ಈ ತಂತ್ರಜ್ಞಾನದ ಅಭಿವೃದ್ಧಿ ನಗರ ಭಾಗದಲ್ಲಿ ಕಂಡು ಬರುತ್ತದೆ.

## ಗ್ರಾಮೀಣ ಮತ್ತು ನಗರ ಆದಾಯದ ವ್ಯತ್ಯಾಸಕ್ಕೆ ಕಾರಣಗಳು ಅಥವ ಗ್ರಾಮೀಣ ಆದಾಯ ಕಡಿಮೆ ಇರುವುದಕ್ಕೆ ಕಾರಣವಾದ ಅಂಶಗಳು :

1. ಪ್ರಾಥಮಿಕ ಉತ್ಪನ್ನಗಳ ಉತ್ಪಾದನೆ
2. ಅಲ್ಪಕಾಲೀನ ಅಥವಾ ಬಹುಬೇಗ ನಾಶವಾಗುವಂತಹ ವಸ್ತುಗಳ ಪ್ರಾಬಲ್ಯ
3. ಅಸಂಘಟಿತ ವಲಯ: ಕೈಗಾರಿಕ ಕಾರ್ಮಿಕರಂತೆ ಕೃಷಿ ಕಾರ್ಮಿಕರು ಸಂಘಟನೆ ಮಾಡಿಕೊಂಡಿರಲಿಲ್ಲ.



downloaded from: www.kpscvaani.com

4. ಅನುಭೋಗಿ ಸರಕುಗಳು: ಅನುಬೋಗಿಗಳು ಉಪಯೋಗ ಮಾಡುವ ಸರಕುಗಳಲ್ಲಿ 85% ಕೃಷಿ ಕ್ಷೇತ್ರದಿಂದ ಬಂದುದ್ದುದಾಗಿದೆ. ಆದ್ದರಿಂದ ಈ ವಸ್ತುಗಳ ಬೆಲೆ ಏರಿಕೆಯು ಸಾಮಾನ್ಯ ಜನರಿಗೆ ಆರ್ಥಿಕ ಹೊರೆಯಾಗುತ್ತದೆ.
5. ಸೀಮಿತ ಮಾರುಕಟ್ಟೆ: ಗ್ರಾಮೀಣದಿಂದ ಉತ್ಪನ್ನವಾದ ವಸ್ತುಗಳು ಬೇಗ ಕೆಡುವುದರಿಂದ ಬಹಳಷ್ಟು ವಸ್ತುಗಳನ್ನು ದೂರದ ಮಾರುಕಟ್ಟೆಗೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಲು ಸಾಧ್ಯವಿಲ್ಲ.
6. ಬೇಡಿಕೆ ಅಸ್ಥಿತಿ ಸ್ಥಾಪಕತ್ವ: ಬೆಲೆಗಳ ಬದಲಾವಣೆಯಿಂದ ಬೇಡಿಕೆ ಪ್ರಮಾಣದಲ್ಲಾಗುವ ಬದಲಾವಣೆಗಳನ್ನು ಬೇಡಿಕೆಯ ಸ್ಥಿತಿಸ್ಥಾಪಕತ್ವ ಎನ್ನುವರು. ಆದರೆ ಕೃಷಿ ಸರಕುಗಳ ಉತ್ಪನ್ನಗಳಿಗೆ ಇದು ಅನ್ವಯಿಸುವಿದಿಲ್ಲ. ಇಲ್ಲಿ ಬೆಲೆ ಕಡಿಮೆಯಾದರೂ ಕೃಷಿ ಸರಕುಗಳಿಗೆ ಬೇಡಿಕೆ ಹೆಚ್ಚಾಗುವುದಿಲ್ಲ. ಇಲ್ಲಿ ಬೇಡಿಕೆ ಅಸ್ಥಿತಿ ಸ್ಥಾಪಕತ್ವ ಉಂಟಾಗುತ್ತದೆ.
7. ಗುಡಿ ಕೈಗಾರಿಕೆಗಳ ಅವನತಿ: ಗುಡಿ ಕೈಗಾರಿಕೆಗಳು ಹಿಂದೆ ಗ್ರಾಮೀಣ ಭಾಗದಲ್ಲಿ ಋತುಮಾನ ಒದಗಿಸುತ್ತಿತ್ತು. ಆದರೆ ಈಗ ಗುಡಿ ಕೈಗಾರಿಕೆಗಳ ವಸ್ತುಗಳ ಬೇಡಿಕೆ ಕಡಿಮೆಯಾಗಿ ನಿರುದ್ಯೋಗ ಉಂಟಾಗಿದೆ.
8. ಋತುಮಾನದ ಉದ್ಯೋಗ: ಕೃಷಿ ಋತುವನ್ನು ಸಂಪೂರ್ಣವಾಗಿ ಅವಲಂಬಿಸಿದೆ. ಬರಗಾಲ ಉಂಟಾದಾಗ ಅವರ ಉದ್ಯೋಗ ಅನಿಶ್ಚತೆಯಿಂದ ಕೂಡಿರುತ್ತದೆ.
9. ಆಡಳಿತದ ಅದಕ್ಷತೆ: ಸರ್ಕಾರಿ ಯೋಜನೆಗಳು ಸರಿಯಾಗಿ ಫಲಾನುಭವಿಗಳಿಗೆ ತಲುಪುತ್ತಿಲ್ಲ

## ಗ್ರಾಮೀಣ ಅಭಿವೃದ್ಧಿಯಲ್ಲಿ ಕೃಷಿಯ ಪಾತ್ರ

"ಕೃಷಿ ಅಭಿವೃದ್ಧಿ ವಿನಃ ಗ್ರಾಮೀಣ ಅಭಿವೃದ್ಧಿ ಸಾಧ್ಯವಿಲ್ಲ", : ಗ್ರಾಮೀಣ ಅಭಿವೃದ್ಧಿಯು ಕೃಷಿ ಅಭಿವೃದ್ಧಿಗೆ ಪೂರಕವಾಗಿದ್ದು ಭಾರತ ಒಂದು ಹಳ್ಳಿಗಳಿಂದ ಕೂಡಿದ ದೇಶ. ಭಾರತದಲ್ಲಿ ಈಗಲು 58% ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ.

### 1. ಜೀವನೋಪಾಯದ ಮೂಲ:

ಗ್ರಾಮೀಣ ಭಾಗದ ಜನಸಂಖ್ಯೆಯಲ್ಲಿ ಶೇ.90% ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಕೃಷಿಯಿಂದ ಮಾತ್ರ ಅವರು ತಮ್ಮ ವರಮಾನ ಪಡೆಯುತ್ತಾರೆ. ಆದ್ದರಿಂದ ಕೃಷಿಕ್ಷೇತ್ರ ಅಭಿವೃದ್ಧಿಯಾದರೆ ಗ್ರಾಮೀಣ ಭಾಗದ ಜನರ ಅಭಿವೃದ್ಧಿಯಾಗುತ್ತದೆ.

### 2. ಉದ್ಯೋಗದ ಮೂಲ:

ಗ್ರಾಮೀಣ ಜನರಲ್ಲಿ ಶೇ.90% ಕೃಷಿಯಲ್ಲಿ ಅವಲಂಬಿತರಾಗಿದ್ದಾರೆ. ಬಹುಭಾಗ ಗ್ರಾಮೀಣ ಜನರಿಗೆ ಕೃಷಿ ಉದ್ಯೋಗ ಒದಗಿಸಿದೆ.

| | ದೇಶ | ಕೃಷಿ ಅವಲಂಬನೆ |
|---|---|---|
| | ಅಮೇರಿಕಾ | 10% |



downloaded from: www.kpscvaani.com

| | | |
|---|---|---|
| | ಇಂಗ್ಲೆಂಡ್ | 4% |
| | ಫ್ರಾನ್ಸ್ | 8% |
| | ಭಾರತ | 58% |

### 3. ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯಾಗಿದೆ

ಕೃಷಿವಲಯದಲ್ಲಿ ಬಳಕೆಯಾಗುವ ಯಂತ್ರಗಳು, ರಸಗೊಬ್ಬರಗಳು ಕೀಟನಾಶಕಗಳ ಪೂರೈಕೆಗಾಗಿ ಕೈಗಾರಿಕೆಗಳ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತದೆ.

### 4. ಜಾನುವಾರುಗಳಿಗೆ ಮೇವಿನ ಪೂರೈಕೆ

ಪ್ರಾಣಿಗಳು ಭಾರತದ ಆರ್ಥಿಕತೆಯ ಪ್ರಮುಖ ಸಂಪನ್ಮೂಲಗಳಲ್ಲಿ ಒಂದು ಆದ್ದರಿಂದ ಇವುಗಳಿಗೆ ಅಗತ್ಯವಾದ ಮೇವು ಪೂರೈಕೆ ಕೃಷಿಯಿಂದಯಾಗುತ್ತದೆ. ಇದರಿಂದ ಹೈನುಗಾರಿಕೆ ಅಭಿವೃದ್ಧಿ ಸಾಧ್ಯಾವಾಗುತ್ತದೆ.

### 5. ಆಹಾರದ ಭದ್ರತೆ:

ಅವಶ್ಯಕತೆಗೆ ತಕ್ಕಂತೆ ಎಲ್ಲಾ ಕಾಲದಲ್ಲೂ ಎಲ್ಲಾ ಜನರಿಗೂ ಆಹಾರ ಪೂರೈಕೆ ಮಾಡುವುದೇ ಆಹಾರದ ಭದ್ರತೆ ಈ ಆಹಾರ ಭದ್ರತೆ ಸಾಧಿಸಲು ಕೃಷಿ ಅಭಿವೃದ್ಧಿಯಾಗಲೇಬೇಕು .

### 6. ಬಂಡವಾಳ ಸಂಚಯನದ ಮೂಲ:

ಹೂಡಿಕೆ ಉಳಿತಾಯವಾಗಿ ಉಳಿತಯ ಹೂಡಿಕೆಯಾಗಿ, ಮಾರ್ಪಡಿಸುವ ಪ್ರಕ್ರಿಯೆ ಬಂಡವಾಳ ಸಂಚಯನ ಕೃಷಿ ಕ್ಷೇತ್ರದ ಅಭಿವೃದ್ಧಿಯಿಂದಾಗಿ ಬಂಡವಾಳ ಸಂಚಯನ ಸಾಧ್ಯ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿ ಬಂಡವಾಳ ಸಂಚಯನ ಹೆಚ್ಚಾಗುತ್ತದೆ. ಇದಕ್ಕೆ ಕಾರಣ ಅಲ್ಲಿ ಬ್ಯಾಕಿಂಗ್ ವಲಯ ಅಭಿವೃದ್ಧಿಯಾಗಿದೆ.

### 7. ಕೈಗಾರಿಕೆಗಳ ಅಭಿವೃದ್ಧಿ:

ಕೃಷಿ ಅಭಿವೃದ್ಧಿಯಾದರೆ ಹೆಚ್ಚು ಹೆಚ್ಚು ಕೈಗಾರಿಕೆ ಉತ್ಪನ್ನಗಳಿಗೆ ಬೇಡಿಕೆ ಬರುತ್ತದೆ. ಹಾಗೂ ಕೃಷಿ ಆದಾರಿತ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳ ಪೂರೈಕೆಯಾಗುತ್ತದೆ.

### 8. ಮೂಲ ಸೌಕರ್ಯಗಳ ಅಭಿವೃದ್ಧಿ:

ಕೃಷಿ ಅಭಿವೃದ್ಧಿಯಾದರೆ ಸಾರಿಗೆ ಸಂಪರ್ಕ, ಮಾರುಕಟ್ಟೆ ವ್ಯವಸ್ಥೆ ಅಭಿವೃದ್ಧಿಯಾಗುವುದಲ್ಲದೆ ಶಿಕ್ಷಣ ಆರೋಗ್ಯ ವ್ಯವಸ್ಥೆಯಲ್ಲಿ ಅಭಿವೃದ್ಧಿಯಾಗುತ್ತದೆ.



downloaded from: www.kpscvaani.com

## ಕರ್ನಾಟಕದಲ್ಲಿ ಆರ್ಥಿಕ ಯೋಜನೆಗಳು :-

ಇಂದಿನ ಆಧುನಿಕ ಯುಗದಲ್ಲಿ ಆರ್ಥಿಕ ಯೋಜನೆಗಳು ಅಭಿವೃದ್ಧಿ ಸಾಧನೆಗೆ ಅತ್ಯಾವಶ್ಯಕವಾದ ಸಂಗತಿಯೆಂದು ಪರಿಗಣಿಸಲಾಗಿದೆ. ಪ್ರತಿಯೊಂದು ರಾಜ್ಯದಲ್ಲಿ ಆರ್ಥಿಕ ಯೋಜನೆಗಳು ಇರುತ್ತವೆ. ಆರ್ಥಿಕ ಯೋಜನೆಗಳು 20ನೆಯ ಶತಮಾನದಲ್ಲಿ ಜನಿಸಿದ ಒಂದು ಯಶಸ್ವಿ ಪದ್ದತಿ. ಈ ಶತಮಾನವು ಎರಡು ಜಾಗತಿಕ ಯುದ್ಧಗಳನ್ನು ಕಂಡ ಶತಮಾನ ಮತ್ತು ದೊಡ್ಡ ಆರ್ಥಿಕ ಮುಗ್ಗಟ್ಟನ್ನು ಎದುರಿಸಿದ ಶತಮಾನ. ಈ ಸಂಧರ್ಭಗಳು ಇಂದಿನ ಶತಮಾನದಲ್ಲಿ ಆರ್ಥಿಕ ಪದ್ದತಿಯನ್ನು ಬಹು ಕಠೋರವಾಗಿ ಅಲ್ಲಾಡಿಸಿದ್ದವು. ಆದ್ದರಿಂದ ಎಲ್ಲಾ ರಾಜ್ಯಗಳೂ ಒಂದಿಲ್ಲೊಂದು ವಿಧವಾದ ಆರ್ಥಿಕ ಯೋಜನೆಯು ಅವಶ್ಯವೆಂಬುದನ್ನು ಮನಗೊಂಡವು. ಈ ರೀತಿಯಲ್ಲಿ ಹೀಗಿನ ಶತಮಾನದಲ್ಲಿ ಆರ್ಥಿಕ ಯೋಜನೆಗಳ ಕಾಲ ಪ್ರಾರಂಭವಾಯಿತು.

## ಆರ್ಥಿಕ ಯೋಜನೆಯ ಅರ್ಥ :

ಆರ್ಥಿಕ ಯೋಜನೆಯ ಅರ್ಥ ಸುಲಭವಾಗಿದೆ. ಯಾವುದೇ ಕಾರ್ಯವನ್ನು ಮಾಡುವ ಮುಂಚೆ ಕ್ರಮಬದ್ದವಾಗಿ ಯೋಚಿಸುವುದೇ ಯೋಜನೆ ಎನಿಸಿಕೊಳ್ಳುತ್ತದೆ. ಆರ್ಥಿಕಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದ ಯೋಜನೆಯು ಆರ್ಥೀಕಯೋಜನೆಯಾಗುತ್ತದೆ. ಆರ್ಥಿಕ ಯೋಜನೆಯ ಮೂಲಕ ರಾಜ್ಯದ ಮಾನವ ಶಕ್ತಿ ಮತ್ತು ಪ್ರಕೃತಿ ಸಂಪನ್ಮೂಲಗಳ ಸದುಪಯೋಗ ಮಾಡಿಕೊಂಡು ಜನರ ಜೀವನ ಮಟ್ಟವನ್ನು ಉತ್ತಮ ಪಡಿಸಬಹುದಾಗಿದೆ. ರಾಜ್ಯದ ಉತ್ಪದನಾಂಗ ಸಾಧನಗಳನ್ನು ಸಂಘಟಿಸಿ ನಿರ್ದಿಷ್ಟ ಧ್ಯೇಯ ಸಾಧನೆಗಾಗಿ ಅವುಗಳ ವಿತರಣೆಯಾಗುವಂತೆ ನೋಡಿಕೊಳ್ಳುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಯೋಜನಾ ಬದ್ದ ಆರ್ಥಿಕ ವ್ಯವಸ್ಥೆಯಲ್ಲಿ ರಾಜ್ಯದ ಸಂಪನ್ಮೂಲಗಳು ಸರ್ಕಾರ ಇಲ್ಲವೆ ಸರಕಾರ ನಿರ್ದೇಶಿತ ಕೇಂದ್ರ ಸಂಸ್ಥೆಯ ನಿಯಂತ್ರಣದಲ್ಲಿ ಇರುತ್ತವೆ. ಸಂಪನ್ಮೂಲಗಳು ವಿವಿಧ ಆರ್ಥಿಕ ಕ್ಷೇತ್ರಗಳ ಪ್ರಾಧಾನ್ಯತೆಗನುಗುಣವಾಗಿ ಕೇಂದ್ರ ಸಂಸ್ಥೆಯ ಆದೇಶದಂತೆ ವಿತರಿಸಲ್ಪಡುತ್ತದೆ.

## ರಾಜ್ಯ ಯೋಜನಾ ಮಂಡಳಿ :

ವಿಕೇಂದ್ರಿಕೃತ ಯೋಜನಾ ಪದ್ದತಿಯಲ್ಲಿ ರಾಜ್ಯ ಸರ್ಕಾರಗಳು ಸಹ ಯೋಜನೆಯನ್ನು ಅನುಷ್ಠಾನಗೊಳಿಸುವುದು ಅವಶ್ಯಕವಾಗಿದೆ. ಆದ್ದರಿಂದ ಯೋಜನಾ ಆಯೋಗವು ಸಿದ್ಧಪಡಿಸುವ ರಾಷ್ಟ್ರಿಯ ಯೋಜನೆಯ ಜೊತೆಗೆ ಪ್ರತಿಯೊಂದು ರಾಜ್ಯಕ್ಕೂ ಅನ್ವಯಿಸುವಂತೆ ಪ್ರತ್ಯೇಕ ಯೋಜನೆ ಇರುತ್ತದೆ. ರಾಜ್ಯಗಳ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯ ಜೊತೆಯಲ್ಲಿಯೆ ಮತ್ತು ಅದೇ ವಿಧಾನಗಳಲ್ಲಿ ಸಿದ್ಧಪಡಿಸಲಾಗುತ್ತದೆ.

ಪ್ರತಿ ರಾಜ್ಯವು ಒಂದು ಯೋಜನಾ ಕರಡನ್ನು ತಯಾರಿಸಿ ಆಯೋಗವು ತನ್ನ ಶಾಸನ ಸಭೆಗೆ ಸಲ್ಲಿಸಬೇಕಾಗಿದ್ದು ಆಯೋಗದೊಡನೆ ಚರ್ಚಿಸಿದ ನಂತರ ರಾಷ್ಟ್ರೀಯ ಯೋಜನೆಯಂತೆ ಯೋಜನೆಗಳನ್ನು ಸಿದ್ದಪಡಿಸುತ್ತದೆ. ರಾಜ್ಯ ಸರ್ಕಾರವು ಪ್ರತ್ಯೇಕವಾಗಿ ಇಲಾಖೆಯನ್ನು ಹೊಂದಿದ್ದು ಒಬ್ಬ



downloaded from: www.kpscvaani.com

ಸಚಿವರ ಉಸ್ತುವಾರಿಗೆ ಒಳಪಟ್ಟಿರುತ್ತದೆ. ಅಧಿಕಾರಶಾಹಿ ಮಟ್ಟದಲ್ಲಿ ಈ ಇಲಾಕೆಯು ಸರ್ಕಾರದ ಕಾರ್ಯದರ್ಶಿಯ ನೇತೃತ್ವದಲ್ಲಿರುತ್ತದೆ. ಆಡಳಿತ ವಿಕೇಂದ್ರೀಕರಣಗೊಳಿಸುವ ಸಲುವಾಗಿ ಯೋಜನಾ ನೀತಿಯ ವಿಷಯವನ್ನು ಮುಖ್ಯ ಮಂತ್ರಿಗಳ ಜೊತೆ ಹಾಗೂ ರಾಜ್ಯ ಮಟ್ಟದ ಆಡಳಿತ ಸಮನ್ವಯ ವಿಷಯಗಳನ್ನು ರಾಜ್ಯದ ಯೋಜನಾ ಇಲಾಖೆಯೊಡನೆ ನಿರ್ಧಿಷ್ಟ ವಿಷಯಗಳನ್ನು ನೇರವಾಗಿ ಸಂಬಂಧಿಸಿದ ಇಲಾಖೆಯೊಡನೆ ಚರ್ಚಿಸಲಾಗುವುದು.

ಪ್ರತಿಯೊಂದು ರಾಜ್ಯವು ಯೋಜನೆ ಸಿದ್ದಪಡಿಸಲು ಹಾಗೂ ಅನುಷ್ಠಾನಕ್ಕೆ ತರಲು ಸಂಪುಟ ಸಮಿತಿಯನ್ನು ಹೊಂದಿರುತ್ತದೆ. ವಿವಿಧ ಸಚಿವಾಲಯಗಳು ತಯಾರಿಸುವ ಯೋಜನೆಗಳನ್ನು ಸಮನ್ವಯಗೊಳಿಸಿ ನೆರವು ನೀಡುವ ಒಂದು ಅಧಿಕಾರಿಗಳ ಸಮಿತಿ ಇರುತ್ತದೆ. ಕೆಲವು ರಾಜ್ಯಗಳಲ್ಲಿ ಸದಸ್ಯರನ್ನೊಳಗೊಂಡ ಅಧಿಕಾರೇತರ ಸಲಹಾ ಸಮಿತಿಗಳಿರುತ್ತವೆ.

## ದೋಷಗಳು :

ವಿಕೇಂದ್ರಿಕೃತ ಅಧಿಕಾರ ಪದ್ದತಿಯಲ್ಲಿ ರಾಜ್ಯಯೋಜನಾ ಮಂಡಳಿಯು ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದು ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಗಳು ಹೆಚ್ಚಿನ ಪಾತ್ರವಹಿಸಬೇಕಾಗಿದೆ. ಆದರೆ ಯೋಜನೆಯನ್ನು ತಯಾರಿಸಿ ಅನುಷ್ಠಾನ ಗೊಳಿಸುವಲ್ಲಿ ಕೇಂದ್ರ ಸರ್ಕಾರ, ರಾಷ್ಟ್ರೀಯ ಯೋಜನಾ ಆಯೋಗ ಪ್ರಮುಖ ಸ್ಥಾನ ಹೊಂದಿದ್ದು ರಾಜ್ಯ ಸರ್ಕಾರಗಳು ಯೋಜನೆಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಇಂತಹ ಕೆಲವು ದೋಷಗಳನ್ನು ರಾಜ್ಯಯೋಜನಾ ಯಂತ್ರದಲ್ಲಿ ಕಾಣಬಹುದಾಗಿದೆ. ಅವೆಂದರೆ

- ಈ ಮಂಡಳಿಗೆ ಯಾವುದೇ ವಿಶೇಷ ಸ್ಥಾನಮಾನವಿರುವುದಿಲ್ಲ.
- ಯಾವುದೇ ಸಮರ್ಪಕವಾದ ಪ್ರಯತ್ನದ ಮೂಲಕ ಯೋಜನೆಗಳ ಸಿದ್ಧಪಡಿಸುವಿಕೆ ಹಾಗೂ ಮೌಲ್ಯ ಮಾಪನ ನಡೆಯುವುದಿಲ್ಲ.
- ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸಂಭಂದಿಸಿದಂತೆ ವ್ಯವಸ್ಥಿತವಾದ ಸಮನ್ವಯ ಅಗತ್ಯವಾಗಿದ್ದು ಅನೇಕ ಸಂಧರ್ಭಗಳಲ್ಲಿ ರಾಜ್ಯಯೋಜನಾ ಇಲಾಖೆ ಸಮನ್ವಯ ಸಾದಿಸಲು ಅಗತ್ಯವಿರುವಷ್ಟು ಗುಣಮಟ್ಟವಿರುವುದಿಲ್ಲ.
- ರಾಜ್ಯಗಳಲ್ಲಿ ಸರ್ಕಾರದ ವಿವಿಧ ವಿಭಾಗಗಳಲಿ ಸಮರ್ಪಕವಾದ ಹೊಂದಾಣಿಕೆಯ ಅಗತ್ಯವಿರುತ್ತದೆ. ಆದರೆ ರಾಜ್ಯಯೋಜನಾ ಇಲಾಖೆ ಹಾಗೂ ಹಣಕಾಸು ಇಲಾಖೆಯ ನಡುವೆಯೆ ಹೊಂದಾಣಿಕೆ ಇರುವುದಿಲ್ಲ. ಇದರಿಂದಾಗಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಫಲತೆ ಹೊಂದುತ್ತದೆ.

ಈ ಮೇಲ್ಕಂಡ ದೋಷಗಳನ್ನು ಸರಿಪಡಿಸಿ ರಾಜ್ಯದ ಯೋಜನಾ ಯಂತ್ರವನ್ನು ಸುಧಾರಿಸುವ ಅನಿವಾರ್ಯತೆ ಇಂದು ಹೆಚ್ಚಾಗಿದೆ. ಆಗ ಮಾತ್ರ ಯೋಜನಾ ಆಯೋಗ ಮತ್ತು ಕೇಂದ್ರ ಸರ್ಕಾರದ ಸಮನ್ವಯದೊಂದಿಗೆ ಉತ್ತಮಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬಹುದು.



downloaded from: www.kpscvaani.com

## ಜಿಲ್ಲಾ ಮಟ್ಟದ ಯೋಜನೆ :

ವಿಕೇಂದ್ರಿಕೃತವಾದ ಯೋಜನಾ ಪದ್ದತಿಯ ಮತ್ತೊಂದು ಪ್ರಕಾರವೇ ಜಿಲ್ಲಾಮಟ್ಟದ ಯೋಜನೆಯಾಗಿದೆ. ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಅಭಿವೃದ್ಧಿಗೊಳಿಸಿ ಕಾರ್ಯಗತಯೊಳಿಸುವ ಯೋಜನೆಗಳು ಸ್ಥಳಿಯ ಜನರ ಆಶೋತ್ತರಗಳನ್ನು ಸಮರ್ಪಕವಾಗಿ ಸ್ಪಂಧಿಸಲಾರವು ಈ ದಿಸೆಯ ಒಂದು ಪ್ರಯತ್ನವೆ ಜಿಲ್ಲಾಮಟ್ಟದ ಯೋಜನೆಯಾಗಿದೆ. ಇದೊಂದು ಸೂಕ್ತ ಯೋಜನೆಗೆ ಉದಹರಣೆಯಾಗಿದೆ.

ಜಿಲ್ಲಾಪಂಚಾಯಿತಿ ಅಥವಾ ಜಿಲ್ಲಾ ಆಡಳಿತ ವತಿಯಿಂದ ಜಿಲ್ಲಾಯೋಜನೆಯನ್ನು ರೂಪಿಸಲಾಗುತ್ತದೆ. ಈ ಜಿಲ್ಲೆಯಲ್ಲಿರುವ ಜನಸಂಖ್ಯೆ ಲಭ್ಯವಿರುವ ಸಂಪನ್ಮೂಲಗಳು ದೊರೆಯಬಹುದಾದ ಹಣಕಾಸು ಮುಂತಾದವುಗಳನ್ನು ಅಂದಾಜು ಮಾಡಿಕೊಂಡು ನೀಡಬೇಕಾದ ಸೌಲಭ್ಯಗಳು ಹಾಗೂ ಸಾಧಿಸಬೇಕಾಗಿರುವ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸಲಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಿಗುವ ಅನುದಾನದ ಮೂಲಕ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು.

ಈ ಯೋಜನೆಯು ಅಲ್ಪಾವದಿಯ ಯೋಜನೆಯಾಗಿದ್ದು ಆಗ ಬೇಕಾಗಿರುವ ಕಾಮಗಾರಿಗಳು, ಲಭ್ಯವಿರುವ ಸಂಪನ್ಮೂಲಗಳು ಹಾಗೂ ಜನರ ಬೇಡಿಕೆಗಳನ್ನು ಆಧಾರವಗಿಟ್ಟುಕೊಂಡು ಪ್ರತಿವರ್ಷವೂ ಈ ಯೋಜನೆಯನ್ನು ರೂಪಿಸಿ ರಾಜ್ಯ ಸರ್ಕಾರದ ಅನುಮೊದನೆ ಮತ್ತು ಅನುಮತಿಗೆ ಸಲ್ಲಿಸಲಾಗುತ್ತದೆ. ಅಲ್ಲದೆ ಜಿಲ್ಲಾ ಪಂಚಾಯ್ತಿ ಅಥವಾ ಜಿಲ್ಲಾ ಆಡಳಿತದ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳಿಗೆ ಸಂಭಂದಿಸಿದಂತೆಯೂ ಯೋಜನೆ ಇರುತ್ತದೆ. ಕೃಷಿ, ಕೈಗಾರಿಕೆ, ರೇಷ್ಮೆ, ಪಶುಸಂಗೋಪನೆ, ಭೂಸಾರ ಸಂರಕ್ಷಣೆ ನೀರಾವರಿ, ಲೋಕೋಪಯೋಗಿ ಕಾಮಗಾರಿಗಳು, ಶಿಕ್ಷಣ, ಆರೋಗ್ಯ, ಮೊದಲಾದ ಎಲ್ಲಾ ಸೌಲಭ್ಯಗಳು ಹಾಗೂ ವಲಯಗಳಿಗೆ ಅನ್ವಯಿಸುವಂತೆ ಜಿಲ್ಲಾಯೋಜನೆಯನ್ನು ಹಮ್ಮಿಕೊಳ್ಳಲಾಗುತ್ತದೆ.

ಎಲ್ಲಾ ಯೋಜನೆಯು ದುರ್ಬಲ ವರ್ಗ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಸಾಲ ಸೌಕರ್ಯಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹೊಂದಿದೆ ಸಮಗ್ರ ಗ್ರಾಮೀಣ ಯೋಜನೆಯಡಿ ಭಾರತ ಸರ್ಕಾರವು ಇದನ್ನು ಅಭಿವೃದ್ಧಿ ಪಡಿಸಿದೆ. ಈ ಯೋಜನೆಗಾಗಿ ವಾಣಿಜ್ಯ ಬ್ಯಾಂಕುಗಳು ಸಾಲ ಸೌಕರ್ಯವನ್ನು ನೀಡುತ್ತವೆ. ಯೋಜನೆಯ ಫಲಾನುಭವಿಗಳಿಗೆ ಸಾಲದ ಜೊತೆಗೆ ಸಹಾಯಧನವನ್ನು ಜಿಲ್ಲಾ ಪಂಚಾಯ್ತಿಯು ಸರ್ಕಾರದಿಂದ ಪಡೆದು ವಿತರಿಸುತ್ತದೆ. ಸಾಮಾನ್ಯವಾಗಿ ಈ ಯೋಜನೆಯಲ್ಲಿ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ ,ಕುಡಿಯುವ ನೀರಿನ ಸೌಲಭ್ಯ, ಶಿಕ್ಷಣ ಸೌಲಭ್ಯ ವಿಸ್ತರಣೆ, ಕೃಷಿ ಅಭಿವೃದ್ಧಿ ಇವೇ ಮೊದಲಾದ ವಿಷಯಗಳಿಗೆ ಜಿಲ್ಲಾಯೋಜನೆಯಲ್ಲಿ ಪ್ರಾಮುಖ್ಯತೆ ನೀಡಲಾಗಿದೆ. ಇದರೊಂದಿಗೆ ಹೆಚ್ಚುವರಿ ಉದ್ಯೋಗಾವಕಾಶಗಳ ಸೃಷ್ಟಿಗೆ ಮತ್ತು ಸ್ಥಳಿಯ ಸಂಪನ್ಮೂಲಗಳ ಬಳಕೆಯ ನೆರವಿನಿಂದ ಉಧ್ಯಮಗಳ ಸ್ಥಾಪನೆಗೆ ಸಹ ಮಹತ್ವ ನೀಡಲಾಗುತ್ತದೆ. ಇದಕ್ಕೆ ಉದಾಹರಣೆ ಜವಹಾರ್ ರೋಜ್ ಗಾರ್ ಯೋಜನೆ ಈ ಯೋಜನೆಯ ಅನ್ವಯ ಸ್ಥಳಿಯ ಜನರಿಗೆ ಉದ್ಯೋಗವಕಾಶಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸ್ವತ್ತುಗಳ ನಿರ್ಮಾಣ ಗುರಿಯನ್ನು ಹೊಂದಲಾಗಿದೆ. ಇಂತಹ ಯೋಜನೆಯ ಉಸ್ತುವಾರಿ ಜಿಲ್ಲಾಮಟ್ಟದ ಆಡಳಿತದ ವ್ಯಾಪ್ತಿಗೆ ಬರುತ್ತದೆ.



downloaded from: www.kpscvaani.com

## ಜಿಲ್ಲಾ ಯೋಜನೆಯಿಂದ ಕೆಳಗಿನ ಅನಕೂಲಗಳು ದೊರೆಯುತ್ತವೆ :

- ಜಿಲ್ಲಾ ಯೋಜನೆಯು ಸ್ಥಳಿಯ ಜನರ ಆಶೋತ್ತರಗಳನ್ನು ಈಡೇರಿಸಲು ಬದ್ದವಾಗಿರುತ್ತದೆ. ಇದು ಕೆಳಮಟ್ಟದಿಂದ ರೂಪಿಸಿದ ಯೋಜನೆಯಾಗಿರುತ್ತದೆಯೇ ಹೊರತು ಮೇಲ್ಮಟ್ಟದಿಂದ ಹೇರಿದ ಯೋಜನೆಯಾಗಿರುವುದಿಲ್ಲ
- ,ಸ್ಥಳಿಯ ಸಂಪನ್ಮೂಲಗಳನ್ನು ಸಮರ್ಪಕವಾಗಿ ಅಂದಾಜುಮಾಡಿ ಅವುಗಳನ್ನು ವಿವಿಧ ಕಾಮಗಾರಿಗಳಲ್ಲಿ ತೊಡಗಿಸಿಕೊಳ್ಳಲು ಹಾಗೂ ಪ್ರಗತಿ ಸಾದಿಸಲು ಜಿಲ್ಲಾ ಯೋಜನೆಯಲ್ಲಿ ಅವಕಾಶವಿರುತ್ತದೆ.
- ಗ್ರಾಮೀಣ ಪ್ರದೇಶಗಳಲ್ಲಿ ಸ್ವತ್ತುಗಳ ನಿರ್ಮಾಣ ಉದ್ಯೋಗವಕಾಶಗಳ ವಿಸ್ತರಣೆ ಮತ್ತು ಸ್ವಾವಲಂಬನೆಯ ಸಾಧನೆಯ ದಿಸೆಯಲ್ಲಿ ಜಿಲ್ಲಾ ಯೋಜನೆಯು ಮಹತ್ತರವಾಗಿ ನೆರವಾಗುತ್ತದೆ.

## ಕರ್ನಾಟಕದಲ್ಲಿ ಪಂಚವಾರ್ಷಿಕ ಯೋಜನೆಗಳು :–

ಕರ್ನಾಟಕವು ಆರ್ಥಿಕ ದೃಷ್ಟಿಯಲ್ಲಿ ಹಿಂದುಳಿದ ರಾಜ್ಯ ಆದ್ದರಿಂದ ಕರ್ನಾಟಕ ಆರ್ಥಿಕ ಪ್ರಗತಿಯನ್ನು ರಾಜ್ಯದ ಜನರ ಸರ್ವಾಂಗೀಣ ಉನ್ನತಿಯನ್ನು ಸಾದಿಸುವುದು ಅತ್ಯಗತ್ಯವಾಗಿದೆ. ಈ ಮುಖ್ಯ ಉದ್ದೇಶವನ್ನಿಟುಕೊಂಡು 1951ರಲ್ಲಿ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸಲಾಯಿತು. ನಮ್ಮ ಆರ್ಥಿಕ ಯೋಜನೆಗಳು ಹಲವಾರು ಉದ್ದೇಶಗಳನ್ನು ಹೊಂದಿದ್ದು ಅವುಗಳನ್ನು ಕೆಳಗೆ ನೀಡಲಾಗಿದೆ.

- **ರಾಜ್ಯಾದಾಯ ಮತ್ತು ತಲಾದಾಯವನ್ನು ಹೆಚ್ಚಿಸುವುದು :**

ಜೀವನಮಟ್ಟ ಬಹಳ ಕೆಳಮಟ್ಟದಲ್ಲಿದೆ. ಬಡತನವನ್ನು ನಿವಾರಿಸಿ, ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ರಾಜ್ಯದ ಉತ್ಪಾದನೆಯನ್ನು ಹೆಚ್ಚಿಸಿ ರಾಜ್ಯದ ಆದಾಯ ಮತ್ತು ತಲಾದಾಯ ಹೆಚ್ಚುವಂತೆ ಮಾಡುವುದು ನಮ್ಮ ಆರ್ಥಿಕ ಯೋಜನೆಯ ಮುಖ್ಯ ಉದ್ದೇಶವಾಗಿದೆ

- **ನೈಸರ್ಗಿಕ ಸಂಪನ್ಮೂಗಳನ್ನು ಸಂಪೂರ್ಣ ಉಪಯೋಗಿಸಿಕೊಳ್ಳುವುದು :**

ಕರ್ನಾಟಕದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿವೆ. ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವುದು ನಮ್ಮ ಆರ್ಥಿಕ ಯೋಜನೆಯ ಉದ್ದೇಶಗಳಲ್ಲಿ ಒಂದು.



downloaded from: www.kpscvaani.com

- **ತೀವ್ರ ಒಕ್ಕಲುತನದ ಅಭಿವೃದ್ಧಿಯನ್ನು ಸಾಧಿಸುವುದು :**

ಕರ್ನಾಟಕವು ಒಕ್ಕಲುತನ ಪ್ರಧಾನ ರಾಜ್ಯವಾಗಿದೆ. ಆದರೆ ನಮ್ಮ ಒಕ್ಕಲುತನ ತೀರ ಹಿಂದುಳಿದಿದೆ. ಹೀಗಾಗಿ ಯೋಜನೆಯು ಒಕ್ಕಲುತನದಲ್ಲಿ ತೀವ್ರ ಪ್ರಗತಿಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ.

- **ಕೈಗಾರಿಕೆಗಳನ್ನು ತ್ವರಿತವಾಗಿ ಅಭಿವೃದ್ಧಿಗೊಳಿಸುವುದು :**

ನಮ್ಮ ರಾಜ್ಯದ ಆರ್ಥಿಕಾಭಿವೃದ್ಧಿಯು ಕೈಗಾರಿಕಾಭಿವೃದ್ಧಿಯನ್ನು ಅವಲಂಬಿಸಿದೆ. ಆದ್ದರಿಂದ ಕೈಗಾರಿಕೆಗಳನ್ನು ಅಭಿಧ್ಧಿಪಡಿಸುವುದು ನಮ್ಮ ಆರ್ಥಿಕ ಯೋಜನೆಯ ಉದ್ದೇಶವಾಗಿದೆ.

- **ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವುದು :**

ಕರ್ನಾಟಕದಲ್ಲಿ ಜನಸಂಖ್ಯೆ ಅತ್ಯಂತ ತೀವ್ರವಾಗಿ ಬೆಳೆಯುತ್ತಲಿದೆ. ಇದರಿಂದ ನಿರುದ್ಯೋಗ ಸಮಸ್ಯೆ ದಿನೇ ದಿನೇ ಹೆಚ್ಚುತ್ತಲಿದೆ. ಆದ್ದರಿಂದ ಹೆಚ್ಚುವರಿ ಉದ್ಯೋಗಾವಕಾಶಗಳ ಸೃಷ್ಠಿಗೆ ಪ್ರಯತ್ನಗಳನ್ನು ಕೈಗೊಳ್ಳುವುದು ನಮ್ಮ ಆರ್ಥಿಕ ಯೋಜನೆಯ ಉದ್ದೇಶವಾಗಿದೆ.

- **ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು :**

ವರಮಾನ, ಸಂಪತ್ತು ಮತ್ತು ಉತ್ಪಾದಿತ ಸರಕುಗಳನ್ನು ಸಮಾನವಾಗಿ ವಿತರಣೆ ಮಾಡುವ ಮುಖಾಂತರ ವೈಯಕ್ತಿಕ ಅಸಮಾನತೆಯನ್ನು ಮತ್ತು ಬಡತನವನ್ನು ತೊಲಗಿಸಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು.

- **ಪ್ರಾದೇಶಿಕ ಅಸಮಾನತೆಗಳನ್ನು ತೊಲಗಿಸುವುದು :**

ಕರ್ನಾಟಕದಲ್ಲಿ ಎಲ್ಲಾ ಭಾಗಗಳು ಅಭಿವೃದ್ಧಿ ಹೊಂದುವಂತೆ ಮಾಡುವ ಉದ್ದೇಶವನ್ನು ನಮ್ಮ ಆರ್ಥಿಕ ಯೋಜನೆ ಹೊಂದಿದೆ.

- **ಬೆಲೆಯ ಸ್ಥಿಮಿತತೆಯನ್ನು ಸಾದಿಸುವುದು :**

ಕರ್ನಾಟಕದಲ್ಲಿ ಎಲ್ಲಾ ಬೆಲೆಗಳು ನಾಗಾಲೋಟದಲ್ಲಿ ಓಡುತ್ತಿವೆ. ಹಣವು ತನ್ನ ಮೌಲ್ಯವನ್ನು ಕಳೆದುಕೊಂಡಿದೆ. ಆರ್ಥಿಕಾಭಿವೃದ್ಧಿಯ ದೃಷ್ಠಿಯಿಂದ ಬೆಲೆಯ ಸ್ಥಿಮಿತತೆಯನ್ನು ಸಾದಿಸುವ ಅಗತ್ಯವಿದೆ.



downloaded from: www.kpscvaani.com

- **ಬಂಡವಾಳದ ಶೇಖರಣೆ :**

ಯೋಜನೆಯ ಮೂಲಕ ಬಂಡವಾಳ ಶೇಖರಿಸಲು ಸಾಧ್ಯವಿದೆ. ಬಂಡವಾಳ ಸಂಚಯದಿಂದ ಉತ್ಪಾದನೆಯನ್ನು ಹೆಚ್ಚಿಸಬಹುದು.

ಒಟ್ಟಿನಲ್ಲಿ ಉತ್ಪಾದನೆಯ ಹೆಚ್ಚಳ ಮತ್ತು ರಾಜ್ಯದಲ್ಲಿ ಅಂತರ್ಗತವಾಗಿರುವ ಹಾಗೂ ಆಗಿಂದಾಗ್ಗೆ ಉದ್ಭವಿಸುವ ಸಮಸ್ಯೆಗಳ ನಿವಾರಣೆಯ ಮೂಲಕ ಬಲಿಷ್ಠ ರಾಜ್ಯವನ್ನು ನಿರ್ಮಿಸಿ ಜನತೆಯ ಯೋಗಕ್ಷೇಮವನ್ನು ಕಾಯ್ದುಕೊಳ್ಳುವುದೇ ಆರ್ಥಿಕ ಯೋಜನೆಯ ಉದ್ದೇಶಗಳ ಸಾರವಾಗಿದೆ.

## ಪ್ರಥಮ ಪಂಚವಾರ್ಷಿಕ ಯೋಜನೆ :

ಈ ಯೋಜನೆಯಲ್ಲಿ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಸುಭದ್ರ ಅಡಿಪಾಯವನ್ನು ಹಾಕಲು ನಿರ್ಧರಿಸಲಾಯಿತು. ಈ ಯೋಜನೆಯು ಮುಖ್ಯವಾಗಿ ಹಳೆಯ ಮೈಸೂರು ಪ್ರಾಂತ್ಯದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಈ ಯೋಜನೆಯು ಕೃಷಿಗೆ ಪ್ರಥಮ ಪ್ರಾಶಸ್ತ್ಯ ನೀಡಿತು.

## ಉದ್ದೇಶಗಳು :

- ಆಹಾರ ದಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು
- ಕೃಷಿ ಆದಾರಿತ ಕೈಗಾರಿಕೆಗೆ ಬೇಕಾಗುವ ಕಚ್ಚಾವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸುವುದು.
- ನೀರಾವರಿ ಸಾಮರ್ಥ್ಯ ಮತ್ತು ವಿದ್ಯುಶ್ಚಕ್ತಿ ಉತ್ಪಾದನೆಯನ್ನು ಹೆಚ್ಚಿಸುವುದು.
- ಜನರ ಜೀವನ ಮಟ್ಟವನ್ನು ಉತ್ತಮ ಪಡಿಸುವುದು.
- ಆರ್ಥಿಕ ಮೂಲೋತ್ಪನ್ನಗಳನ್ನು ಹೆಚ್ಚಿಸುವುದು.
- ಸಾಮಾಜಿಕ ನ್ಯಾಯ ಒದಗಿಸುವುದು.

ಅಲ್ಲದೆ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಅಗತ್ಯವಿರುವ ಆಡಳಿತಾತ್ಮಕ ಸುದಾರಣೆಗಳನ್ನು ತರಲು ಈ ಯೋಜನೆಯಲ್ಲಿ ಪ್ರಯತ್ನಿಸಲಾಯಿತು.

## ಯೋಜನಾವೆಚ್ಚ

ಒಟ್ಟು 4058 ಕೋಟಿ ರೂ. ಗಳನ್ನು ಈ ಯೋಜನಾವದಿಯಲ್ಲಿ ವಿವಿಧ ವಲಯಗಳ ನಡುವೆ ಮಾಡಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಮತ್ತು ವಿದ್ಯುಶ್ಚಕ್ತಿಯ ಮೇಲೆ ಅತಿ ಹೆಚ್ಚಿನ ವೆಚ್ಚ ಮಾಡಲಾಯಿತು. ಕೈಗಾರಿಕೆ ಮತ್ತು ಗಣಿಗಾರಿಕೆ ಮೇಲೆ ಅತಿ ಕಡಿಮೆ ವೆಚ್ಚ ಮಾಡಲಾಯಿತು. ಅದನ್ನು ಈ ಪಟ್ಟಿಯಿಂದ ತಿಳಿಯಬಹುದು



downloaded from: www.kpscvaani.com

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ | 4.23 |
| ಗ್ರಾಮೀಣ ಅಭಿವೃದ್ಧಿ ಯೊಜನೆ | 1.56 |
| ನೀರಾವರಿ ಮತ್ತು ವಿದ್ಯುಶ್ಚಕ್ತಿ | 25.78 |
| ಸಾರಿಗೆ ಮತ್ತು ಸಂಪರ್ಕ | 4.83 |
| ಕೈಗಾರಿಕೆ ಮತ್ತು ಗಣಿಗಾರಿಕೆ | 1.30 |
| ಸಮಾಜಿಕ ಸೇವೆಗಳು | 1.88 |
| ಒಟ್ಟು | 40.58 |

## ಸಾಧನೆಗಳು

ಪ್ರಥಮ ಪಂಚವಾರ್ಷಿಕ ಯೋಜನೆಯ ಮುಖ್ಯ ಸಾಧನೆಗಳು ಕೆಳಕಂಡಂತಿದೆ.

- ಈ ಯೋಜನೆಗಳ ಅವದಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 33.28 ಲಕ್ಷ ಟನ್‌ಗಳಷ್ಟಾಯಿತು. ಹತ್ತಿಯ ಉತ್ಪಾದನೆ 4.88 ಲಕ್ಷಗಳಾಯಿತು. ಕಬ್ಬಿನಉತ್ಪಾದನೆ 34.6 ಲಕ್ಷ ಟನ್‌ಗಳಷ್ಟು ಮತ್ತು ಎಣ್ಣೆಕಾಳುಗಳ ಉತ್ಪಾದನೆ 8.86 ಲಕ್ಷ ಟನ್‌ಗಳಿಗೆ ಹೆಚ್ಚಿತು. ಈ ಯೋಜನೆಯು ಕೃಷಿಯಲ್ಲಿ ನಿರೀಕ್ಷಿತ ಗುರಿಯನ್ನು ಸಾದಿಸಿತು.
- ಭೂ ಸುಧಾರಣೆ ಕ್ರಮಗಳಿಂದ ಜಮಿನ್ದಾರಿ ಪದ್ಧತಿಯ ನಿರ್ಮೂಲನ ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿತು. ಅಲ್ಲದೆ ಹಿಡುವಳಿದಾರರ ಹೆಚ್ಚಿನ ರಕ್ಷಣೆಗೆ ಅನೇಕ ಕಾರ್ಯಕ್ರಮಗಳನ್ನು ಅಭಿವೃಧ್ಧಿಪಡಿಸಲಾಯಿತು.
- ಈ ಯೋಜನೆಯ ಅವದಿಯಲ್ಲಿ ನೀರಾವರಿ ಮತ್ತು ವಿದ್ಯುಶ್ಚಕ್ತಿ ವಲಯದಲ್ಲಿ ಪ್ರಗತಿ ಸಹ ಉತ್ತಮವಾಗಿತ್ತು ವಿವಿಧ ನೀರಾವರಿ ಯೋಜನೆಗಳಿಂದ ನೀರಾವರಿ ಯೋಜನೆಗಳಿಂದ ನೀರಾವರಿ ಸೌಲಭ್ಯವನ್ನು ಪಡೆದ ಭೂಮಿಯ ವಿಸ್ತೀರ್ಣ 7.9 ದಶ ಲಕ್ಷ ಹೆಕ್ಟೇರುಗಳಾಯಿತು. ಹಾಗೂ ವಿದುಶ್ಚಕ್ತಿಯ ಉತ್ಪಾದನೆ ಮಟ್ಟ 8.26 ದಶಲಕ್ಷ ಕಿಲೋವ್ಯಾಟ್‌ತಲುಪಿತು.
- ಸಣ್ಣ ಮತ್ತು ಗುಡಿ ಕೈಗಾರಿಕೆಯ ಅಭಿವೃದ್ಧಿ ಹಾಗೂ ವೈಜ್ಞಾನಿಕ ವಿಧಾನಗಳನ್ನು ಕೃಷಿಯಲ್ಲಿ ಅಳವಡಿಸಲು ಸಮುದಾಯದ ಅಭಿವೃಧ್ಧಿಪಡಿಸಲಾಯಿತು. ಇದರಿಂದಾಗಿ ಉದ್ಯೋಗ ಮತ್ತು ಉತ್ಪಾದನೆ ಅಧಿಕವಾಯಿತು.
- ಕೈಗಾರಿಕಾ ವಲಯದಲ್ಲಿ ಹೆಚ್ಚಿನ ಮಹತ್ವ ಲಭಿಸಿದ್ದರೂ, ಸಾರ್ವಜನಿಕ ವಲಯದಲ್ಲಿ ಅನೇಕ ಕೈಗಾರಕೆಗಳು ಅಭಿವೃಧ್ಧಿಗೊಂಡವು. ಅವುಗಳೆಂದರೆ ಮೈಸೂರು ಸಾಬೂನು ಕಾರ್ಖಾನೆ, ಮೈಸೂರು ನೇಯುವ ರೇಷ್ಮೆ ಕಾರ್ಖಾನೆ ಮತ್ತು ಹಾಸನದಲ್ಲಿ ವ್ಯವಸಾಯೋಪಕರಣ ತಯಾರಿಕಾ ಕಾರ್ಖಾನೆ ಹೀಗೆಯೇ ಖಾಸಗಿ ವಲಯದಲ್ಲಿಯೂ ಸಹ ಹಲವು ಕೈಗಾರಿಕೆಗಳು



downloaded from: www.kpscvaani.com

ಸ್ಥಾಪನೆಗೊಂಡವು. ಅಲ್ಲದೆ ಅಸ್ತಿತ್ವದಲ್ಲಿದ್ದ ಅನೇಕ ಕೈಗಾರಿಕೆಗಳು ಅಭಿವೃದ್ಧಿಗೊಂಡವು. ಇದರಿಂದಾಗಿ ಕೈಗಾರಿಕಾ ಉತ್ಪನ್ನ ಕೂಡ ಅಧಿಕ ಪ್ರಮಾಣದಲ್ಲಿ ಹೆಚ್ಚಳಗೊಂಡಿತು.

- ಸಾರಿಗೆ ಹಾಗೂ ಸಂಪರ್ಕ ವಲಯದಲ್ಲಿ ಸಹ ಉತ್ತಮ ಪ್ರಗತಿ ಕಂಡು ಬಂತು. ಈ ಯೋಜನೆಯಲ್ಲಿ 658 ಕಿ.ಮೀ ಉದ್ದದ ಹೊಸ ರಸ್ತೆಗಳನ್ನು ರಾಜ್ಯದಲ್ಲಿ ನಿರ್ಮಿಸಲಾಯಿತು. ಅಲ್ಲದೆ 1758 ಕಿ ಮೀ ಉದ್ದದ ರಸ್ತೆಯನ್ನು ಮೇಲ್ದರ್ಜೆಗೇರಿಸಲಾಯಿತು. ಅನೇಕ ಅಂಚೆ ಕಛೇರಿಗಳನ್ನು ಸ್ಥಾಪಿಸಲಾಯಿತು.
  ಒಟ್ಟಿನಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯು ಕೃಷಿ ರಂಗದಲ್ಲಿ ಯಶಸ್ವಿ ಯೋಜನೆ ಎನಿಸಿದ್ದು ಜಡವಾಗಿದ್ದ ರಾಜ್ಯ ಅರ್ಥವ್ಯವಸ್ಥೆಯನ್ನು ಪುನರ್‌ರಚನೆ ಹಾಗೂ ಪುನಃಚೇತನ ನೀಡುವಲ್ಲಿ ಯಶಸ್ವಿಯಾಯಿತು.

## ಎರಡನೇ ಪಂಚವಾರ್ಷಿಕ ಯೋಜನೆ :

ಎರಡನೇ ಪಂಚವಾರ್ಷಿಕ ಯೊಜನೆಯ ಅವಧಿಯಲ್ಲಿ ಕೃಷಿ ನೀರಾವರಿ, ವಿದ್ಯುಶ್ಚಕ್ತಿ ಮತ್ತು ಸಾಮಾಜಿಕ ಸೇವ ವಲಯಗಳಲ್ಲಿ ಹೆಚ್ಚಿನ ಮಹತ್ವ ನೀಡಲಾಯಿತು. ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದ ಕೆಲವು ತಿಂಗಳುಗಳಲ್ಲಿ ರಾಜ್ಯದ ಪುನರ್ವಿಂಗಡಣಾ ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ಇದರಿಂದಾಗಿ ಈ ಯೋಜನೆಯನ್ನು ವಿಶಾಲ ಮೈಸೂರು ಪ್ರಾಂತ್ಯಕ್ಕೆ ಅಳವಡಿಸಲಾಯಿತು, ಅದರ ಅವಶ್ಯಕತೆಗಳಿಗೆ ಸ್ಪಂದಿಸಿ ವಿಶೇಷ ಉದ್ದೇಶಗಳನ್ನು ಸಾಧಿಸಬೇಕಾಯಿತು.

### ಉದ್ದೇಶಗಳು

- ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು
- ಕೃಷಿ ಆದಾರಿತ ಕೈಗಾರಿಕೆಗಳಿಗೆ ಬೇಕಾದ ಹತ್ತಿ, ಸೆಣಬು, ಎಣ್ಣೆ ಕಾಳು ಇವೇ ಮೋದಲಾದ ಕಚ್ಚಾ ಸರಕುಗಳ ಉತ್ಪಾದನೆ ಹೆಚ್ಚಿಸುವುದು.
- ಜನರ ಜೀವನ ಮಟ್ಟವನ್ನು ಉತ್ತಮಪಡಿಸುವುದು
- ಉದ್ಯೋಗವಕಾಶಗಳನ್ನು ಹೆಚ್ಚಿಸುವುದು
- ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಬುನಾದಿ ಹಾಕುವುದು.
- ಭೂ ಸಂರಕ್ಷಣೆ ಕಾರ್ಯಕ್ರಮಗಳನ್ನು ವ್ಯಾಪಕಗೊಳಿಸುವುದು.

ಈ ಯೋಜನೆಯಲ್ಲಿ ಒಟ್ಟು 142.27 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಯಿತು. ವಿವಿಧ ವಲಯಗಳ ನಡುವೆ ಮಾಡಲಾದ ವೆಚ್ಚವನ್ನು ಕೆಳಕಂಡ ಪಟ್ಟಿಯಲ್ಲಿ ಕಾಣಬಹುದು



downloaded from: www.kpscvaani.com

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಪೂರಕ ಚಟುವಟಿಕೆಗಳು | 19.85 |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | 10.58 |
| ನೀರಾವರಿ ಮತ್ತು ವಿದ್ಯುಶಕ್ತಿ | 54.71 |
| ಸಾರಿಗೆ ಮತ್ತು ಸಂಪರ್ಕ | 14.87 |
| ಕೈಗಾರಿಕೆ ಮತು ಗಣಿಗಾರಿಕೆ | 12.10 |
| ಸಾಮಾಜಿಕ ಸೇವೆಗಳು | 29.60 |
| ಇತರೆ | 00.56 |
| ಒಟ್ಟು | 142.27 |

ಎರಡನೆಯ ಯೋಜನಾವದಿಯಲ್ಲಿ ಕೃಷಿ ನೀರಾವರಿ ವಿದ್ಯುಶ್ವಕ್ತಿ ಮತ್ತು ಸಾಮಾಜಿಕ ಸೇವಾ ವಲಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು

**ಸಾಧನೆಗಳು**

- ಎರಡನೆಯ ಪಂಚವಾರ್ಷಿಕ ಯೋಜನಾವದಿಯಲ್ಲಿ ಕೃಷಿಕ್ಷೇತ್ರದಲ್ಲಿ ಬೆಳವಣಿಗೆ ಉಂಟಾಯಿತು. ಕೃಷಿ ಸಂಶೋಧನೆ, ಶಿಕ್ಷಣಕ್ಕೆ ಆಧ್ಯತೆ ನೀಡಲಾಯಿತು ಕೃಷಿ ಉತ್ಪನ್ನ ಹೆಚ್ಚಿಲು ಭೂ ಅಭಿವೃದ್ಧಿ, ಸಸ್ಯ ಸಂರಕ್ಷಣೆ, ಸುಧಾರಿಸಿದ ಬೀಜ, ರಸಯೊಬ್ಬರ ಪೂರೈಕೆ ಮೊದಲಾದ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡಲಾಯಿತು.
- ಯೋಜನೆಯ ಪ್ರಾರಂಭದಲ್ಲಿ 32.21 ಲಕ್ಷ ಟನ್ನುಗಳಿದ್ದ ಆಹಾರ ಧಾನ್ಯ ಉತ್ಪಾದನೆ 39.90 ಲಕ್ಷ ಟನ್ನುಗಳಾಯಿತು. ಕಬ್ಬು, ಎಣ್ಣೆ ಕಾಳುಗಳ ಉತ್ಪಾದನೆ ತೃಪ್ತಿಕರವಾಯಿತು. ಹತ್ತಿಯ ಉತ್ಪಾದನೆ ನಿರೀಕ್ಷಿತ ಗುರಿ ತಲುಪಲಿಲ್ಲ.
- ಈ ಯೋಜನಾ ಅವಧಿಯಲ್ಲಿ ನೀರಾವರಿಗಾಗಿ ಹೆಚ್ಚಿನ ಮೊತ್ತ ವೆಚ್ಚ ಮಾಡಲಾಯಿತು. ಮೊದಲನೇ ಯೋಜನೆಯಲ್ಲಿ ಕೈಗೊಂಡಿದ್ದ ಎಲ್ಲಾ ಯೋಜನೆಗಳನ್ನು ಈ ಯೋಜನೆಯಲ್ಲಿ ಪೂರೈಸಲಾಯಿತು. 2ಹೆಕ್ಟೇರ್ ಜಮೀನಿಗೆ ಹೊಸದಾಗಿ ನೀರಿನ ಸೌಕರ್ಯ ಕಲ್ಪಿಸಲಾಯಿತು.
- ವಿದ್ಯುಶ್ವಕ್ತಿ ಕ್ಷೇತ್ರದಲ್ಲಿ ತ್ರಪ್ತಕರ ಸಾದನೆಯಾಗಲಿಲ್ಲ. ವಿದ್ಯುಶ್ವಕ್ತಿ ಉತ್ಪಾದನೆಯ ಅಂತ್ಯದಲ್ಲಿ 1.99 ಲಕ್ಷ ಕಿಲೋ ವ್ಯಾಟ್ ಹೆಚ್ಚಿತು.
- ಈ ಅವದಿಯಲ್ಲಿ ಕೈಗಾರಿಕೆಗೆ ಹೆಚ್ಚಿನ ಆಧ್ಯತೆ ನೀಡದಿದ್ದರೂ ಸಹ ಈ ಕ್ಷೇತ್ರದಲ್ಲಿ ಸಾಧನೆ ತೃಪ್ತಿಕರವಾಗಿತು. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ವಿಸ್ತರಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಯಿತು. ಸರ್ಕಾರಿ ವಿದ್ಯುತ್ ಉಪಕರಣಗಳ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ



downloaded from: www.kpscvaani.com

ಹೆಚ್ಚಿಸಲು ಪಶ್ಚಿಮ ಜರ್ಮನಿಯ ತಾಂತ್ರಿಕ ಎ.ಇ.ಜಿ ಸಂಸ್ಥೆಯ ಸಹಕಾರದೊಂದಿಗೆ ಕಾರ್ಯಕ್ರಮ ಕೈಗೆತ್ತಿಕೋಳ್ಳಲಾಯಿತು. ಶಿವಮೊಗ್ಗದಲ್ಲಿ ಒಂದು ಗಂಧದ್ದೆಣ್ಣೆ ಕಾರ್ಖಾನೆ ಸ್ಥಾಪಿಸಲಾಯಿತು.

- ಕೈಗಾರಿಕಾ ವಸಾಹತು ಸ್ಥಾಪಿಸುವ ಮೂಲಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರಯತ್ನಿಸಲಾಯಿತು. 1959ರಲ್ಲಿ ಮೈಸೂರು ಸಣ್ಣ ಕೈಗಾರಿಕೆ ಕರಕುಶಲ ಮಂಡಳಿಯನ್ನು ರಚಿಸಲಾಯಿತು.
- ಕೇಂದ್ರದ ನೆರವಿನಿಂದ ರೇಷ್ಮೆ ಬೆಳೆ ಮತ್ತು ಕೈಗಾರಿಕೆಯನ್ನು ಅಭಿವೃದ್ದಿ ಪಡಿಸಲು ಕಾರ್ಯಕ್ರಮಗಳನ್ನು ಅನುಸರಿಸಲಾಯಿತು.
- ಈ ಯೋಜನೆಯಲ್ಲಿ ರಸ್ತೆ ಬಂದರುಗಳ ಅಭಿವೃದ್ದಿಗಾಗಿ ಹಲವು ಕಾರ್ಯಕ್ರಮ ಜಾರಿಗೆ ಬಂದವು. ಹೀಗೆ ಹಲವು ಗುರಿಗಳನ್ನು ಈ ಯೋಜನಾವದಿಯಲ್ಲಿ ಸಾದಿಸಲಾಯಿತು.

## ಮೂರನೆಯ ಪಂಚವಾರ್ಷಿಕ ಯೋಜನೆ :

ಈ ಯೋಜನೆಯು 1961 ರಲ್ಲಿ 1966 ರಲ್ಲಿ ಅಂತ್ಯಕಂಡಿತು. ಈ ಯೋಜನೆ ಅನುಷ್ಠಾನಕ್ಕೆ ಬರುವ ವೇಳೆಗಾಗಲೇ ರಾಜ್ಯ ಪುನರ್ ವಿಂಡನೆಗೊಂಡಿದ್ದ ಕಾಲದಲ್ಲಿ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂತು. ಆದ್ದರಿಂದ ಈ ಯೋಜನೆ ರಾಜ್ಯದ ಎಲ್ಲಾ ಭಾಗಗಳ ಅಗತ್ಯತೆಯನ್ನು ಗಣನೆಗೆ ತೆಗೆದುಕೊಂಡು ರಾಜ್ಯದ ಪ್ರಗತಿಗೆ ಶ್ರಮಿಸುವ ಉದ್ದೇಶ ಇಟ್ಟುಕೊಂಡಿತು.

### ಗುರಿಗಳು

- ಆರ್ಥಿಕ ಚಟುವಟಿಕೆಯಲ್ಲಿ ಸ್ವಾವಲಂಬನೆ ಸಾದಿಸುವುದು
- ಈಗಾಗಲೇ ಕೈಗೊಂಡ ಯೋಜನೆಗಳ ಅಭಿವೃದ್ದಿ ಪ್ರಯತ್ನ ಮುಂದುವರೆಸುವುದು
- ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು
- ಸಣ್ಣ, ಮಧ್ಯಮ, ದೊಡ್ಡ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸುವುದು
- ಮಾನವ ಸಂಪನ್ಮೂಲಗಳ ಸಮರ್ಪಕ ಬೆಳವಣಿಗೆಗೆ ಉದ್ಯೋಗವಕಾಶಗಳ ವಿಸ್ತರಣೆ.
- ಭೂ ಸುಧಾರಣೆಗಳ ಮೂಲಕ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ತಗಿಸುವುದು.
- ಗ್ರಾಮೀಣ ಪ್ರದೇಶಗಳ ಜನತೆಗೆ ಕನಿಷ್ಠ ಸೌಲಭ್ಯ ಕಲ್ಪಿಸುವುದು
- ಪ್ರಾದೇಶಿಕ ಅಸಮಾನತೆ ತೊಲಗಿಸಲು ಸಮತೋಲನದ ಅಭಿವೃದ್ದಿ ಸಾಧಿಸುವುದು
- ನೀರಾವರಿ ಯೋಜನೆ, ವಿದ್ಯುಶ್ಚಕ್ತಿ ಉತ್ಪಾಧನೆ ಹೆಚ್ಚಿಸುವುದು
- ಆರು ವರ್ಷದಿಂದ ಹನ್ನೊಂದು ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ , ಕಡ್ಡಾಯ ಶಿಕ್ಷಣ ನೀಡಲು ಉದ್ದೇಶಿಸಲಾಯಿತು



downloaded from: www.kpscvaani.com

## ಯೋಜನಾ ವೆಚ್ಚ

ಮೂರನೆ ಪಂಚವಾಷಿಕ ಯೋಜನೆಯ ಅವಧಿಯಲ್ಲಿ ಒಟ್ಟು 264.14 ಕೋಟಿ ರೂ ಗಳನ್ನು ವೆಚ್ಚಮಾಡಲಾಯಿತು. ವಿವಿಧ ವಲಯಗಳ ನಡುವೆ ಮಾಡಲಾದ ವೆಚ್ಚವನ್ನು ಕೆಳಕಂಡ ಪಟ್ಟಿಯಲ್ಲಿ ನೋಡಬಹುದು

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಪೂರಕ ಚಟುವಟಿಕೆಗಳು | 66.69 |
| ಗ್ರಾಮೀಣಾಭಿವೃಧ್ಧಿ ಮತ್ತು ಸಹಕಾರ | 17.68 |
| ನೀರಾವರಿ ಮತ್ತು ವಿದ್ಯುಶಕ್ತಿ | 100.21 |
| ಕೈಗಾರಿಕೆ ಮತ್ತು ಗಣಿಗಾರಿಕೆ | 15.84 |
| ಸಾರಿಗೆ ಮತು ಸಂಪರ್ಕ | 22.47 |
| ಸಾಮಾಜಿಕ ಸೇವೆಗಳು | 41.09 |
| ಇತರೆ | 00.52 |
| ಒಟ್ಟು | 264.14 |

## ಸಾಧನೆಗಳು

- ಕೃಷಿ ಚಟುವಟಿಕೆ ಅಭಿವೃದ್ಧಿ, ಅಧಿಕ ಇಳುವರಿಯ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಹಣಕಾಸು, ತಾಂತ್ರಿಕ ಸಲಹೆ, ಮಾರುಕಟ್ಟೆಯ ಸೌಲಭ್ಯ ಒದಗಿಸಲು ಕ್ರಮಕೈಗೊಳ್ಳಲಾಯಿತು
- ಈ ಯೋಜನೆಯಲ್ಲಿ ನೀರಾವರಿ ಯೋಜನೆಗಳಿಂದ ಸೌಲಭ್ಯ ಪಡೆದ ಭೂಮಿಯ ಒಟ್ಟು ವಿಸ್ತೀರ್ಣ 9.9 ಲಕ್ಷ ಹೆಕ್ಟೇರ್ ನಿಂದ 12.68 ಲಕ್ಷ ಹೆಕ್ಟೇರ್‌ಗೇರಿತು
- ವಿದ್ಯುಶ್ಚಕ್ತಿ ಉತ್ಪಾದನೆ 4.44 ದಶಲಕ್ಷ ಕಿಲೋವ್ಯಾಟ್‌ಗೂ ಅಧಿಕಗೊಂಡಿತು.
- ಕೈಗಾರಿಕಾ ಬೆಳವಣಿಗೆಯನ್ನು ತೀವ್ರಗೊಳಿಸಲು ಪ್ರಯತ್ನಿಸಲಾಯಿತು.
- ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃಧ್ಧಿಗಾಗಿ 12 ಕೈಗಾರಿಕಾ ವಸಹಾತುಗಳನ್ನು ಸ್ಥಾಪಿಸಲಾಯಿತು
- ಆರು ವರ್ಷದಿಂದ ಹನ್ನೊಂದು ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ, ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳಿಗೆ ಕಾರ್ಯಕ್ರಮ ರೂಪಿಸಲಾಯಿತು.



downloaded from: www.kpscvaani.com

## ವಾರ್ಷಿಕ ಯೋಜನೆಗಳು :–

ಮೂರನೇ ಪಂಚವಾರ್ಷಿಕ ಯೋಜನೆ ಅಂತ್ಯಗೊಂಡ ಸಮಯದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ರಾಷ್ಟ್ರೀಯ ಯೋಜನಾ ಅನುಷ್ಠಾನಕ್ಕೆ ಅಗತ್ಯವಾದ ಸಂಪನ್ಮೂಲಗಳ ಕ್ರೂಢೀಕರಣವಿಲ್ಲದ ಕಾರಣ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಮುಂದೂಡಿ ವಾರ್ಷಿಕ ಯೋಜನೆಯನ್ನು ಅನುಸರಿಸಿತು. ಈ ಯೋಜನೆಯಲ್ಲಿ ವಿದ್ಯುಶ್ಚಕ್ತಿ, ಕೃಷಿ, ನೀರಾವರಿ ವಲಯಗಳಿಗೆ ಮಹತ್ವ ನೀಡಲಾಯಿತು.

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಪೂರಕ ಚಟುವಟಿಕೆಗಳು | 50.98 |
| ಗ್ರಾಮಿಣಾಭಿವೃದ್ಧಿ ಮತ್ತು ಸಹಕಾರ | 8.44 |
| ನೀರಾವರಿ ಮತ್ತು ವಿದುಶ್ಚಕ್ತಿ | 90.04 |
| ಕೈಗಾರಿಕೆ ಮತ್ತು ಗಣಿಗಾರಿಕೆ | 8.12 |
| ಸಾರಿಗೆ ಮತ್ತು ಸಂಪರ್ಕ | 15.60 |
| ಸಾಮಾಜಿಕ ಸೇವೆಗಳು | 22.75 |
| ಇತರೆ | 0.92 |
| ಒಟ್ಟು | 194.95 |

## ಸಾಧನೆಗಳು :

- ಈ ಯೋಜನೆಯ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 35.45 ಲಕ್ಷ ಟನ್ನುಗಳಿಂದ 52.11 ಲಕ್ಷ ಟನ್ನುಗಳಾಯಿತು. ಕಬ್ಬಿಣದ ಉತ್ಪಾದನೆ 37.5 ರಷ್ಟು, ಹತ್ತಿಯ ಉತ್ಪಾದನೆ ಶೇ.41.5 ರಷ್ಟು, ಎಣ್ಣೆ ಕಾಳುಗಳ ಉತ್ಪಾದನೆ ಶೇ. 48.2 ರಷ್ಟು ಹೆಚ್ಚಿತು
- ಈ ಯೋಜನೆಯಲ್ಲಿ ವಿದ್ಯುಶ್ಚಕ್ತಿ, ಕೃಷಿ, ನೀರಾವರಿ ವಲಯಗಳಿಗೆ ಬೆಳವಣಿಗೆ ಉತ್ತಮವಾಗಿದ್ದು ವಿವಿಧ ನೀರಾವರಿ ಯೋಜನೆಗಳಿಂದ, ನೀರಾವರಿ ಸೌಲಭ್ಯವನ್ನು ಪಡೆದ ಭೂಮೀಯ ಒಟ್ಟು ವಿಸ್ತೀರ್ಣ 12.65 ಲಕ್ಷ ಹೆಕ್ಟೆರಿಗೇರಿತು.
- ವಿದ್ಯುಶ್ಚಕ್ತಿಯ ಉತ್ಪಾದನೆ ಗಣನೀಯವಾಗಿ ಹೆಚ್ಚಿತು.
- ಸಾರಿಗೆ ಸಮಪರ್ಕ ಹಾಗೂ ಶಿಕ್ಷಣ, ಆರೋಗ್ಯ ಇವೇ ಮೊದಲಾದ ಸೇವೆಗಳಲ್ಲಿ ಗಣನೀಯ ಪ್ರಗತಿಯಾಯಿತು
- ಈ ಯೋಜನೆಯ ಅವದಿಯಲ್ಲಿ ಕೈಗಾರಿಕಾ ವಲಯದ ಸಾಧನೆ ನಿರೀಕ್ಷೆಯಷ್ಟಿರಲಿಲ್ಲ.



downloaded from: www.kpscvaani.com

## ನಾಲ್ಕನೆ ಪಂಚವಾರ್ಷಿಕ ಯೋಜನೆ :

ಈ ಯೋಜನೆಯನ್ನು ಏಪ್ರಿಲ್, 1, 1996 ರಂರು ಆರಂಭಿಸಲಾಯಿತು ಈ ಯೋಜನೆಯು ಮಾರ್ಚ್ 31, 1974 ರ ವರೆಗೆ ಆಚರಣೆಯಲ್ಲಿತ್ತು. ಅಭಿವೃದ್ಧಿ ಸಾಧನೆ ಜನರ ಜೀವನ ಮಟ್ಟ ಸುದಾರಣೆ, ಸಾಮಾಜಿಕ ನ್ಯಾಯ ಸ್ಥಾಪನೆಗೆ ಈ ಯೋಜನೆಯಲ್ಲಿ ಪ್ರಾಮುಖ್ಯತೆಯನ್ನು ನೀಡಲಾಯಿತು.

### ಉದ್ದೇಶಗಳು

- ಆಹಾರ ಪದಾರ್ಥಗಳ ಉತ್ಪಾದನೆಯನ್ನು ವಾರ್ಷಿಕ ಶೇ. 5 ರಿಂದ 6 ದರದಲ್ಲಿ ಹೆಚ್ಚಿಸುವುದು. ಈ ಮೂಲಕ ಆಹಾರದ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು.
- ನೈಸರ್ಗಿಕ ಸಂಪನ್ಮೂಲಗಳನ್ನು ಪೂರ್ಣವಾಗಿ, ಪರಿಣಾಮಕಾರಿಯಾಗಿ ಉತ್ಪಾದನೆಯಲ್ಲಿ ಬಳಸುವುದು.
- ಆಹಾರ ಪದಾರ್ಥಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳ ಅಭಿವೃದ್ದಿಯಲ್ಲಿ ಸಮಗ್ರತೆಯನ್ನುಂಟು ಮಾಡಿ ಶೀಘ್ರಗತಿಯ ಆರ್ಥಿಕ ಪ್ರಗತಿಯನ್ನು ಸಾಧಿನುವುದು.
- ಆರ್ಥಿಕ ಸಮಾನತೆಯನ್ನು ಏರ್ಪಡಿಸಲಾಗುವುದು, ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು
- ಭೂ ಸುಧಾರಣೆಯನ್ನು ಪ್ರಗತಿಪರವಾಗಿ ಜಾರಿಗೆ ತರುವುದು
- ಪ್ರಾದೇಶಿಕ ಅಸಮತೋಲನಗಳನ್ನು ನಿವಾರಿಸುವುದು
- ಅರ್ಥವ್ಯವಸ್ಥೆಯ ಎಲ್ಲಾ ವಲಯಗಳಲ್ಲಿಯೂ ಉದ್ಯೋಗಾವಕಾಶವನ್ನು ವಿಸ್ತರಿಸುವುದು.
- ಕೃಷಿ ಭೂಮಿಗೆ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸುವುದು
- ವಿದ್ಯುಶ್ಚಕ್ತಿಯ ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ಅದನ್ನು ಲಾಭದಾಯಕವಾಗಿ ಬೆಳೆಸಿಕೊಳ್ಳುವುದು
- ಸರ್ಕಾರವು ಒದಗಿಸುವ ಸೇವೆಗಳ ಗುಣಮಟ್ಟವನ್ನು ಉತ್ತಮಪಡಿಸುವುದು
  ಯೋಜನಾ ವೆಚ್ಚ

ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ವಿವಿಧ ವಲಯಗಳ ಮೇಲೆ ಮಾಡಲಾದ ಒಟ್ಟು ವೆಚ್ಚ ರೂ. 398.72 ಕೋಟಿ ಆಗಿತ್ತು ವೆಚ್ಚದ ವಿವರಗಳು ಮುಂದಿನಂತಿದೆ.

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ ಚಟುವಟಿಕೆಗಳು | 80.42<br>17.85 |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | 86.27 |



downloaded from: www.kpscvaani.com

| | |
|---|---|
| ನೀರಾವರಿ | 89.72 |
| ವಿದ್ಯುಶ್ಚಕ್ತಿ | 23.35 |
| ಕೈಗಾರಿಕೆ | 17.57 |
| ಸಾರಿಗೆ ಮತು ಸಂಪರ್ಕ | 82.17 |
| ಸಾಮಾಜಿಕ ಸೇವೆಗಳು | 1.37 |
| ಇತರೆ | |
| ಒಟ್ಟು | 398.72 |

ಈ ಅಂಕಿ ಅಂಶಗಳ ಪ್ರಕಾರ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿನೀರಾವರಿ ಮತ್ತು ವಿದ್ಯುಶ್ಚಕ್ತಿ ವಲಯಗಳಿಗೆ ಅಧಿಕ ಪ್ರಾಶಸ್ತ್ಯ ಕೊಡಲಾಯಿತು. ಸಾಮಾಜಿಕ ನ್ಯಾಯ ಸ್ಥಾಪನೆಯನ್ನು ದೃಷ್ಠಿಯಲ್ಲಿಟ್ಟುಕೊಂಡು ಸಾಮಾಜಿಕ ಸೇವೆಗಳಿಗಾಗಿಯೂ ಹೆಚ್ಚಿನ ವೆಚ್ಚವನ್ನು ಕೈಗೊಳ್ಳಲಾಯಿತು.

**ಸಾಧನೆಗಳು**

ಈ ಯೋಜನೆ ನಿರೀಕ್ಷಿತ ಗುರಿ ಸಾಧಿಸಿತು. ಈ ಯೋಜನೆಯ ಪ್ರಮುಖ ಸಾಧನೆಗಳೆಂದರೆ

- ಈ ಯೋಜನೆಯ ಅವದಿಯಲ್ಲಿ ಆಹಾರ ಧಾನ್ಯದ ಉತ್ಪಾದನೆ 51.11 ಲಕ್ಷ ಟನ್ನಗಳಿಗೆ ಹೆಚ್ಚಿತು.
- ಈ ಯೋಜನೆಯ ಅವಧಿಯಲ್ಲಿ ಅಧಿಕ ಇಳುವರಿ ನೀಡುವ ಬಿತ್ತನೆ ಬೀಜಗಳ ಬಳಕೆ, ಸಸ್ಯ ಸಂರಕ್ಷಣೆ, ಬೇಸಾಯ ವಿಧಾನಗಳು ಇವೇ ಮೋದಲಾದವುಗಳಿಗೆ ಪ್ರಾಮುಖ್ಯತೆ ನೀಡಲಾಯಿತು.
- ಇಡೀ ದೇಶದಲ್ಲಯೇ ಪ್ರಥಮ ಸಂಸ್ಥೆಯಾದ 'ಬಿತ್ತನೆ ಬೀಜ ನಿಗಮ'ವನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಯಿತು
- ವಿದ್ಯುಶ್ಚಕ್ತಿಯ ಉತ್ಪಾದನೆಯ ಹೆಚ್ಚಳಕ್ಕಾಗಿ ಮೈಸೂರು, ಮಂಗಳೂರು ಹಾಗೂ ಮುನಿಬಾದ್‌ನಲ್ಲಿ ವಿದ್ಯುತ್ ಗ್ರಾಹಕ ಕೇಂದ್ರಗಳನ್ನು ಸ್ಥಾಪಿಸಲಾಯಿತು

**ಐದನೇ ಪಂಚವಾರ್ಷಿಕ ಯೋಜನೆ :**

ಈ ಯೋಜನೆಯು ಏಪ್ರಿಲ್ 1, 1974 ರಂದು ಪ್ರಾರಂಭವಾಗಿ 1978ರಲ್ಲಿ ಅಂತ್ಯಗೊಂಡಿತು. ಈ ಯೋಜನೆಯು ನೀರಾವರಿ ಮತ್ತು ವಿದ್ಯುಶ್ಚಕ್ತಿ ಉತ್ಪಾದನೆಗೆ ಹೆಚ್ಚು ಪ್ರಾಮುಖ್ಯತೆ ನೀಡಿತು.

**ಗುರಿಗಳು**

- ಶೇ. 5.5ರ ದರದಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸುವುದು
- ಬಡತನ ನಿರ್ಮೂಲನಾ ಕಾರ್ಯಕ್ರಮವನ್ನು ರೂಪಿಸುವುದು
- ಕನಿಷ್ಠ ಅವಶ್ಯಕತೆಗಳಾದ ಕುಡಿಯುವ ನೀರು, ಆಹಾರ, ಶಿಕ್ಷಣ, ವಸತಿ, ವೈದ್ಯಕೀಯ ಸೇವೆ ಮತ್ತಿತರ ಅಗತ್ಯಗಳನ್ನು ಪೂರೈಸುವುದು.



downloaded from: www.kpscvaani.com

- ನೀರಾವರಿ ಮತ್ತು ವಿದ್ಯುಶ್ಚಕ್ತಿ ಉತ್ಪಾದನೆಯನ್ನು ಹೆಚ್ಚಿಸುವುದು
- ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರುವುದು
- ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುದು.

## ಯೋಜನಾವೆಚ್ಚ

ಈ ಯೋಜನೆಯಲ್ಲಿ ಒಟ್ಟು ರೂ. 801.59 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಯಿತು ಇದರ ವಿವರ ಕೆಳಗಿನಂತಿದೆ.

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ | 127.93 |
| ಚಟುವಟಿಕೆಗಳು | 27.07 |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | 400.00 |
| ನೀರಾವರಿ ಮತ್ತು ವಿದ್ಯುಶ್ಚಕ್ತಿ | 43.37 |
| ಕೈಗಾರಿಕೆ | 45.74 |
| ಸಾರಿಗೆ ಮತ್ತು ಸಂಪರ್ಕ | 153.29 |
| ಸಾಮಾಜಿಕ ಸೇವೆಗಳು | 4.19 |
| ಇತರೆ | |
| ಒಟ್ಟು | 801.59 |

## ಸಾಧನೆಗಳು

ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕಂಡು ಬಂದ ಪ್ರಗತಿ ಕೆಳಕಂಡಂತಿದೆ

- ಆಹಾರ ಧಾನ್ಯಗಳ ಉತ್ಪಾದನೆ 74.5 ದಶ ಲಕ್ಷ ಟನ್ನುಗಳಿಗೆ ಹೆಚ್ಚಿತು
- ಹತ್ತಿ ಉತ್ಪಾದನೆ 12 ಲಕ್ಷ, ಎಣ್ಣೆ ಕಾಳುಗಳ ಉತ್ಪಾದನೆ 12.5 ಲಕ್ಷ ಟನ್ನುಗಳಿಗೂ ಹೆಚ್ಚಿತು.
- ಸುಮಾರು 18 ದಶ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು
- ತುಂಗಭಧ್ರಾ, ಭದ್ರಾ, ಕಬಿನಿ, ಹಾರಂಗಿ ಮತ್ತು ಘಟಪ್ರಬಾ ಇವುಗಳ ಪ್ರಥಮ ಮತ್ತು ದ್ವಿತೀಯ ಹಂತದ ಯೋಜನೆಗಳನ್ನು ಪೂರ್ಣಗೊಳಿಸಲಾಯಿತು
- ಸಣ್ಣ, ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು
- ವಿದ್ಯುಶ್ವಕ್ತಿಯ ಸಾಮರ್ಥ್ಯ 1863 ದಶ ಲಕ್ಷ ಕಿಲೋವ್ಯಾಟ್‌ಗಳಿಗೆ ಹೆಚ್ಚಿತು.

GNANADHARE IAS ACADEMY



downloaded from: www.kpscvaani.com

- ಐದು ಲಕ್ಷ ಜನರಿಗೆ ಜನತಾ ವಸತಿ ಯೋಜನೆಯಡಿಯಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಲಾಯಿತು
- ದುರ್ಬಲ ವರ್ಗದವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಲಾಯಿತು
  ಹೀಗೆ ಕೆಲವು ಮುಖ್ಯ ಗುರಿಗಳನ್ನು ಈ ಯೋಜನೆಯಲ್ಲಿ ಸಾದಿಸಲಾಯಿತು

## ಆರನೆಯ ಪಂಚವಾರ್ಷಿಕ ಯೋಜನೆ :

ಈ ಯೋಜನೆಯಲ್ಲಿ ಸಹ ನೀರಾವರಿ ಹಾಗೂ ವಿದ್ಯುಶ್ಚಕ್ತಿ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಇದರ ಅಭಿವೃದ್ದಿಗಾಗಿ ಯೋಜನಾ ವೆಚ್ಚದ 50 ರಷ್ಟನ್ನು ಮೀಸಲಿಡಲಾಯಿತು

## ಉದ್ದೇಶಗಳು

- ಸಂಪನ್ಮೂಲಗಳನ್ನು ದಕ್ಷತೆಯಿಂದ ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಅರ್ಥವ್ಯವಸ್ಥೆಯಲ್ಲಿ ಗಮನಾರ್ಹ ಪ್ರಮಾಣದ ಪ್ರಗತಿಯನ್ನು ಸಾಧಿಸುವುದು.
- ನೀರಾವರಿಸೌಕರ್ಯಗಳನ್ನು ವಿಸ್ತರಿಸುವುದು ಮತು ವಿದ್ಯುಶ್ಚಕ್ತಿ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸುವುದು.
- ಬಡವರ್ಗದ ಜನರ ಜೀವನಮಟ್ಟವನ್ನು ಸುಧಾರಿಸುವುದು
- ಗ್ರಾಮೀಣ ಜನರಿಗೆ ಮತ್ತು ಪದವೀಧರರ ನಿರುದ್ಯೋಗಿಗಳಿಗೆ 80 ಲಕ್ಷ ವಿವಿಧ ಉದ್ಯೋಗ ಕಲ್ಪಿಸುವುದು
- ಆದಾಯ ಮತು ಸಂಪತ್ತಿನ ವಿತರಣೆಯಲ್ಲಿನ ಅಸಮಾನತೆಯನ್ನು ನಿವಾರಿಸುವುದು
- ಪ್ರಗತಿಪರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ದುರ್ಬಲ ವರ್ಗಗಳ ಜನತೆಗೆ ಅನುಕೂಲತೆಗಳನ್ನು ಕಲ್ಪಿಸುವುದು
- ಜನಸಂಖ್ಯಾ ನಿಯಂತ್ರಣಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು
- ಗ್ರಾಮೀಣ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳುವುದು
- ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಎಲ್ಲಾ ಜನರು ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ಪರಿಸರವನ್ನು ಸೃಷ್ಟಿಸಲು ಸಮರ್ಪಕವಾದ ಶಿಕ್ಷಣ ಮತ್ತು ಸಂಪರ್ಕ ವ್ಯವಸ್ಥೆಯನ್ನು ವಿಕಸನಗೊಳಿಸುವುದು.



downloaded from: www.kpscvaani.com

## ಯೋಜನಾ ವೆಚ್ಚ

ಈ ಯೋಜನಾ ಅವದಿಯಲ್ಲಿ ವಿವಿಧ ಕ್ಷೇತ್ರಗಳ ಮೇಲೆ ಒಟ್ಟು ರೂ. 2652.73 ಕೋಟಿ ಮೊಬಲಗನ್ನು ವೆಚ್ಚ ಮಾಡಲಾಯಿತು. ಅದರ ವಿವರ ಕೆಳಕಂಡಂತಿದೆ

| ವಲಯ | ವೆಚ್ಚ (ಕೋಟಿರೂ. ಗಳಲ್ಲಿ) |
|---|---|
| ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ | 345.66 |
| ಚಟುವಟಿಕೆಗಳು | 46.67 |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | 1,229.66 |
| ನೀರಾವರಿ ಮತ್ತು ವಿದ್ಯುಶ್ಚಕ್ತಿ | 242.91 |
| ಕೈಗಾರಿಕೆ | 197.06 |
| ಸಾರಿಗೆ ಮತ್ತು ಸಂಪರ್ಕ | 571.58 |
| ಸಾಮಾಜಿಕ ಸೇವೆಗಳು | 19.19 |
| ಇತರೆ | |
| ಒಟ್ಟು | 2,652.73 |

ಈ ಯೋಜನೆಯಲ್ಲಿ ನೀರಾವರಿ ಮತ್ತು ವಿದ್ಯುಶ್ಚಕ್ತಿ ವಲಯಗಳಿಗೆ ಅಧಿಕ ಪ್ರಾಶಾಸ್ತ್ಯವನ್ನು ಕೊಡಲಾಯಿತು

## ಸಾಧನೆಗಳು

ಈ ಯೋಜನೆಯ ಕೆಲವು ಸಾಧನೆಗಳನ್ನು ಈ ಕೆಳಗೆ ನಮೂದಿಸಲಾಗಿದೆ

- ಈ ಯೋಜನೆಯ ಅವದಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 74.5 ಲಕ್ಷ ಟನ್ನಗಳಿಗೆ ಹೆಚ್ಚಿತು. ಹತ್ತಿಯ ಉತ್ಪಾದನೆ 12.5 ಲಕ್ಷ ಟನ್ನುಗಳಿಗೆ, ಎಣ್ಣೆ ಕಾಳುಗಳ ಉತ್ಪಾದನೆ 14 ಲಕ್ಷ ಟನ್ನುಗಳಿಗೆ ಹೆಚ್ಚಿತು. ಕಬ್ಬಿನ ಉತ್ಪಾದನೆ 69.5 ಲಕ್ಷ ಟನ್ನುಗಳಾಯಿತು
- ಸುಮಾರು 24 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

## 11ನೇ ಪಂಚವಾರ್ಷಿಕ ಯೋಜನೆಗಳ ಪ್ರಮುಖ ವಲಯಗಳು :

ಯೋಜನಾ ಹಂಚಿಕೆ ಮತ್ತು ವೆಚ್ಚ (ರೂ. ಕೋಟಿರೂಗಳಲ್ಲಿ)

| ವಲಯಗಳು | 11ನೇ ಪಂಚವಾರ್ಷಿಕಯೋಜನೆ 2006–07 ರ ಬೆಲೆಗಳಲ್ಲಿ | 11ನೇ ಪಂಚವಾರ್ಷಿಕಯೋಜನೆ ನಿರೀಕ್ಷಿತ ವೆಚ್ಚ (ಪ್ರಸ್ತುತ ಬೆಲೆ) | ಶೇಖಡವಾರು ವ್ಯತ್ಯಾಸ |
|---|---|---|---|

GNANADHARE IAS ACADEMY



downloaded from: www.kpscvaani.com

| | | | |
|---|---|---|---|
| ಅ. ಆರ್ಥಿಕ ಸೇವೆಗಳು | | | |
| 1.ಕೃಷಿ ಮತ್ತು ಸಂಬಂಧಿತ ವಲಯಗಳು | 7687.48 | 9285.43 | 12.08 |
| 2.ಗ್ರಾಮೀಣಾಭಿವೃದ್ಧಿ | 5200.27 | 55.08.90 | 105.9 |
| 3.ವಿಶೇಷ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು | 1369.11 | 2128.21 | 155.4 |
| 4.ನೀರಾವರಿ ಮತ್ತು ನೆರೆ ಹಾವಳಿ ನಿಯಂತ್ರಣ | 14795.36 | 19428.11 | 131.3 |
| 5.ಇಂಧನ | 100050.55 | 17897.71 | 178.1 |
| 6.ಉಧ್ಯಮಗಳು ಮತ್ತು ಖನಿಜಗಳು | 2143.37 | 2873.49 | 131.1 |
| 7.ಸಾರಿಗೆ ವಲಯ | 12592.26 | 18150.92 | 140.1 |
| 8.ವಿಜ್ಞಾನ ತಂತ್ರಜ್ಞಾನ ಮತ್ತು ಪರಿಸರ | 1075.59 | 1490.01 | 138.6 |
| 9.ಮಾನ್ಯ ಆರ್ಥಿಕ ಸೇವೆಗಳು | 2650.29 | 3568.30 | 134.6 |
| ಒಟ್ಟು ಆರ್ಥಿಕ ಸೇವೆಗಳು | 57931.28 | 8033108 | 138.7 |
| ಆರ್ಥಿಕ ಸಾಮಾಜಿಕ ಸೇವೆಗಳು | | | |
| 10.ಶಿಕ್ಷಣ, ಕ್ರೀಡೆ,ಕಲೆ ಮತ್ತು ಸಂಸ್ಕೃತಿ | 8412.02 | 11763.49 | 139.98 |
| 11.ಆರೋಗ್ಯ | 3376.22 | 4600.18 | 136.3 |
| 12.ನೀರು ಸರಬರಾಜು, ವಸತಿ ಮತ್ತು ನಗರಾಭಿವೃದ್ಧಿ | 5409.35 | 5664.10 | 104.7 |
| 11ನೀರು ಸರಬರಾಜು | 3393.05 | 3682.45 | 108.5 |
| 12.ವಸತಿ | 3393.05 | 3682.45 | 108.5 |
| 13.ನಗರಾಭಿವೃದ್ಧಿ | 13027.41 | 13114.86 | 100.7 |
| 13.ವಾರ್ತಾ ಮತ್ತು ಪ್ರಚಾರ | 59.00 | 107.04 | 181.4 |
| 14. ಪ.ಶಿ ಜಾತಿ, ಪ.ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 3626.33 | 6056.98 | 167.0 |
| 15.ಕಾರ್ಮಿಕ ಮತ್ತು ಕಾರ್ಮಿಕರ ಕಲ್ಯಾಣ | 572.18 | 874.28 | 152.8 |
| 16.ಸಮಾಜ ಕಲ್ಯಾಣ ಮತ್ತು ಪೌಷ್ಠಿಕತೆ | 3895.36 | 7061.73 | 181.3 |
| ಒಟ್ಟು ಸಾಮಾಜಿಕ ಸೇವೆಗಳು | 41770.92 | 52925.11 | 126.7 |
| ಇ. ಸಾಮಾನ್ಯ ಸೇವೆಗಳು | 1961.80 | 2796.01 | 142.5 |
| | | | |
| ಒಟ್ಟುಮೊತ್ತ: ರಾಜ್ಯ ಯೋಜನೆ(ಅ+ಆ+ಇ) | 101664.00 | 136052.2 | 133.8 |




downloaded from: www.kpscvaani.com

## ವಿಕೇಂದ್ರೀಕೃತ ಯೋಜನೆ :–

ವಿಭಿನ್ನ ಹಂತಗಳಲ್ಲಿ ಯೋಜನೆಗಳು ಅಂದರೆ ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಯೋಜನೆಗಳು ತಯಾರಾಗಿ ಅನುಷ್ಠಾನಗೊಳ್ಳವುದನ್ನು ವಿಕೇಂದ್ರೀಕೃತ ಯೋಜನೆ ಎಂದು ಕರೆಯಲಾಗುತ್ತದೆ.

ಭಾರತದಲ್ಲಿ 7 ನೇ ಪಂಚವಾರ್ಷಿಕ ಯೋಜನೆಯ ನಂತರದ ಅವಧಿಯಲ್ಲಿ ವಿಕೇಂದ್ರೀಕೃತ ಯೋಜನೆಯನ್ನು ಹೊಂದಲಾಗಿದೆ.

ಈ ಯೋಜನೆಗಳು ಕೆಳಗಿನ ಹಂತವನ್ನು ಹೆಚ್ಚಾಗಿ ಕೇಂದ್ರಿಕರಿಸಿವೆ. ಇದಕ್ಕೆ ಮುಖ್ಯ ಕಾರಣ ಯೋಜನೆಯ ತಯಾರಿ ಮತ್ತು ಅನುಷ್ಠಾನದಲ್ಲಿ ಜನರ ಸಹಭಾಗಿತ್ವವನ್ನು ಹೆಚ್ಚಿಸುತ್ತದೆ.

## ವಿಕೇಂದ್ರೀಕೃತ ಯೋಜನೆಯ ಮಹತ್ವ (ಅನುಕೂಲಗಳು) :

- ಇದು ಪ್ರಜಾಸತ್ತಾತ್ಮಕ ಲಕ್ಷಣವನ್ನು ಹೊಂದಿದೆ
- ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಲು
- ಹೆಚ್ಚು ಆರ್ಥಿಕ ಸ್ವಾತಂತ್ರ್ಯ
- ಜನರ ಸಹಭಾಗಿತ್ವದ ಹೆಚ್ಚಳ
- ಬಡತನ ನಿವಾರಣೆ ಮತ್ತು ಉದ್ಯೋಗ ನಿರ್ಮಾಣ
- ಆರ್ಥಿಕ ಅವಕಾಶಗಳಲ್ಲಿ ಸಮಾನತೆ

## ವಿಕೇಂದ್ರೀಕೃತ ಯೋಜನೆಯ ದೋಷಗಳು :

- ಸಂಪನ್ಮೂಲಗಳ ವ್ಯರ್ಥ
- ಇದು ಗ್ರಾಮೀಣ ಭಾಗಕ್ಕೆ ಸೂಕ್ತವಲ್ಲ: ಸಂಪನ್ಮೂಲ ಕೊರತೆ, ಬಡತನ, ಅನಕ್ಷರತೆ, ತಜ್ಞರ ಕೊರತೆ ಇರುವುದರಿಂದ ಗ್ರಾಮೀಣ ಭಾಗಕ್ಕೆ ಇದು ಸೂಕ್ತವಲ್ಲ.
- **ಅಸಮಾನತೆ/ ತಾರತಮ್ಯದ ಹೆಚ್ಚಳ:** ಸಂಪದ್ಭರಿತವಾದ ಪ್ರದೇಶಗಳಲ್ಲಿ ಹೆಚ್ಚು ಅಭಿವೃದ್ಧಿಯಾದರೆ, ಕಡಿಮೆ ಸಂಪದ್ಭರಿತ ಪ್ರದೇಶಗಳು ಕಡಿಮೆ ಅಭಿವೃದ್ಧಿ ಹೊಂದುತ್ತವೆ. ಇದರಿಂದ ಅಸಮಾನತೆ ಹೆಚ್ಚುತ್ತದೆ.

ಈ ದೋಷಗಳಿದ್ದರೂ ಜನಸಂಖ್ಯಾ ಭರಿತ, ಪ್ರಜಾಪ್ರಭುತ್ವದ ಅಸಮಾನತೆ ಹೆಚ್ಚಾಗಿರುವ ಭಾರತ ದೇಶಕ್ಕೆ ವಿಕೇಂದ್ರೀಕೃತ ಯೋಜನೆ ಸೂಕ್ತವಾದುದು.



downloaded from: www.kpscvaani.com

# ಗ್ರಾಮೀಣ ಅಭಿವೃದ್ಧಿ :-

## ಅರ್ಥ:

ಸ್ಥಳೀಯ ಸಂಪನ್ಮೂಲಗಳ ಸಮರ್ಪಕ ಬಳಕೆಯ ಮೂಲಕ ಸುಸ್ಥಿರವಾದ (ಅವಿಶ್ರಾಂತ) ರೀತಿಯಲ್ಲಿ ಗ್ರಾಮೀಣ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಉತ್ತಮಪಡಿಸುವ ಕ್ರಿಯೆಯೆ ಗ್ರಾಮೀಣ ಅಭಿವೃದ್ಧಿ

## ವ್ಯಾಖ್ಯೆ:

ವಿಶ್ವ ಬ್ಯಾಂಕ್ ಪ್ರಕಾರ, "ನಿರ್ದಿಷ್ಟ ಗುಂಪಿನ ಜನರ ಅಂದರೆ ಗ್ರಾಮೀಣ ಬಡವರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ರೂಪಿಸುವ ತಂತ್ರವನ್ನು ಗ್ರಾಮೀಣ ಅಭಿವೃದ್ಧಿ ಎಂದು ಕರೆಯಾಗುತ್ತದೆ.

## ಗ್ರಾಮೀಣ ಅಭಿವೃದ್ಧಿಯ ಸ್ವರೂಪ ಅಥವಾ ಲಕ್ಷಣಗಳು:

- ಗ್ರಾಮೀಣ ಅಭಿವೃದ್ಧಿ ಒಂದು ನಿರಂತರವಾದ ಪ್ರಕ್ರಿಯೆ.
- ಇದು ಗ್ರಾಮೀಣ ಭಾಗಕ್ಕೆ ಸೀಮಿತವಾದುದು.
- ಗ್ರಾಮೀಣ ಅಭಿವೃದ್ಧಿಯು ಆರ್ಥಿಕ ಹಾಗೂ ಸಾಮಾಜಿಕ ಸಂಗತಿಗಳನ್ನು ಒಳಗೊಂಡಿದೆ.
- ಗ್ರಾಮೀಣ ಅಭಿವೃದ್ಧಿಯು ಸುಸ್ಥಿರ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತದೆ.

## ಗ್ರಾಮೀಣ ಅಭಿವೃದ್ಧಿಯ ಮಹತ್ವ

"ಗ್ರಾಮೀಣ ಬಾಗಗಳು ಅಭಿವೃದ್ಧಿಯಾದರೆ ಭಾರತ ತಾನಾಗಿಯೆ ಅಭಿವೃದ್ಧಿ ಹೊಂದುತ್ತದೆ".

–ಗಾಂಧೀಜಿ

### 1. ಕೃಷಿಯನ್ನು ಉತ್ಪಾದನೆ ಕ್ಷೇತ್ರವಾಗಿ ಮಾರ್ಪಡಿಸುವುದು:

ಕೃಷಿ ಭಾರತದ ಬೆನ್ನೆಲುಬಾಗಿದೆ. ಭಾರತದಲ್ಲಿ 58% ಹಾಗೂ 56% ರಷ್ಟು ಜನ ಕೃಷಿ ಅವಲಂಬಿತರಾಗಿದ್ದಾರೆ. ಕೃಷಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಿದೆ ಆದ್ದರಿಂದ ಗ್ರಾಮೀಣ ಅಭಿವೃದ್ಧಿಯಿಂದಾಗಿ ಕೃಷಿ ಉತ್ಪಾದಕ ಕ್ಷೇತ್ರವಾಗಿ ಮಾರ್ಪಡುತ್ತದೆ. ಗ್ರಾಮಗಳು ಅಭಿವೃದ್ಧಿಯಾದಾಗ ಮಾತ್ರ ಕೃಷಿಯ ವಾಣಿಜ್ಯಕರಣ ಸಾಧ್ಯಾವಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಶಿಕ್ಷಣ ಸಂಶೋಧನೆಗಳು ಅಭಿವೃದ್ಧಿಯಾಗಬೇಕು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 1951 ರಲ್ಲಿ ಕೃಷಿಯ ಉತ್ಪಾದನೆ 50 ಮಿ.ಟನ್‌ಗಳಷ್ಟಿತ್ತು 2011–12 ರ ವೇಳಗೆ 250.42 ಮಿ.ಟನ್‌ಗಳಷ್ಟಾಗಿದೆ.



downloaded from: www.kpscvaani.com

## 2. ಬಡತನ ನಿರ್ಮೂಲನೆ:

"ಕನಿಷ್ಠ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ ನೀರು ಪೂರೈಸಿಕೊಳ್ಳಲು ಸಾಧ್ಯವಿಲ್ಲದಂತಹ ಸ್ಥಿತಿಯೇ ಬಡತನ"

- ಲಕಡವಾಲಾರವರು ಆಹಾರದಲ್ಲಿರುವ ಕ್ಯಾಲೋರಿಗಳ ಆಧಾರದ ಮೇಲೆ ಬಡತನವನ್ನು ಅಳತೆ ಮಾಡಿದರು
- 1 ದಿನಕ್ಕೆ ಗ್ರಾಮೀಣ ಭಾಗದ ಒಬ್ಬ ವ್ಯಕ್ತಿಗೆ 2400 ಕ್ಯಾಲೋರಿ ನಗರ ಭಾಗದ ಒಬ್ಬ ವ್ಯಕ್ತಿಗೆ 2100 ಕ್ಯಾಲೋರಿಗಳಷ್ಟು ಆಹಾರ ಪಡೆಯದ ಸ್ಥಿತಿಯನ್ನು ಬಡತನ ಎನ್ನಲಾಗುತ್ತದೆ.
- ತೆಂಡುಲ್ಕರ್ ಕಮಿಟಿಯು ಅನುಬಗಿ ವೆಚ್ಚದ ಆದಾರದ ಮೇಲೆ ಬಡತನವನ್ನು ಅಳತೆ ಮಾಡಿದ್ದಾರೆ. ಇವರ ಪ್ರಕಾರ ಗ್ರಾಮೀಣ ವ್ಯಕ್ತಿ ಖರ್ಚ ಮಾಡಬಹುದಾದ ಹಣ 28 ರೂ. ನಗರ ವ್ಯಕ್ತಿ ದಿನ ನಿತ್ಯ ಖರ್ಚು ಮಾಡಬಹುದಾದ ಹಣ 32 ರೂ.

ತೆಂಡುಲ್ಕರ್ ಕಮಿಟಿಯ ವರಧಿ ಪ್ರಕಾರ ಭಾರತದಲ್ಲಿ ಬಡತನ

| | |
|---|---|
| ಗ್ರಾಮೀಣ ಭಾಗದಲ್ಲಿ | 41.8% |
| ನಗರ ಭಾಗದಲ್ಲಿ | 25.7% |
| **ಒಟ್ಟರೆಯಾಗಿ** | **37.2%** |

ಆರ್ಥಿಕ ಸಮೀಕ್ಷೆ ಪ್ರಕಾರ ಭಾರತದಲ್ಲಿ ಬಡತನದ ಪ್ರಮಾಣ 21% ರಷ್ಟಿದೆ ಗ್ರಾಮೀಣ ಭಾಗದ ಗರಿಷ್ಠ ಜನರು ಬಿ.ಪಿ.ಎಲ್ ಕೆಳಗೆ ವಾಸಿಸುತ್ತಿದ್ದಾರೆ ಆದ್ದರಿಂದ ಗ್ರಾಮೀಣ ಅಭಿವೃದ್ಧಿಯು ಮಹತ್ವ ಪಡೆದಿದೆ ಇದರಿಂದ ಬಡತನ ನಿರ್ಮೂನೆ ಸಾಧ್ಯ

## 3. ಗ್ರಾಮೀಣ ಭಾಗದಲ್ಲಿ ಮೂಲಸೌಕರ್ಯ ಒದಗಿಸುವುದು:

ಗ್ರಾಮೀಣ ಅಭಿವೃದ್ಧಿ ಸ್ವಯಂ ಚಾಲಿತವಾದುದಲ್ಲ. ಕೃಷಿ ಮತ್ತು ಕೈಗಾರಿಕೆ ಅಭಿವೃದ್ಧಿಗೆ ನೆರವಾಗುವ ಎಲ್ಲ ರೀತೀಯ ಚಟುವಟಿಕೆಗಳು ಹಾಗೂ ಸೇವೆಗಳನ್ನು ಮೂಲ ಸೌಕರ್ಯಗಳು ಎಂದು ಕರೆಯುತ್ತೇವೆ.

ದೇಶದ ಕ್ಷಿಪ್ರ ಅಭಿವೃದ್ಧಿಗೆ ಮೂಲ ಸೌಕರ್ಯಗಳ ಅವಶ್ಯಕತೆ ಇದೆ. ಇದರಲ್ಲಿ ಎರಡು ವಿಧ



downloaded from: www.kpscvaani.com

| ಭೌತಿಕ ಮೂಲ ಸೌಕರ್ಯಗಳು ಅಥವಾ ಆರ್ಥಿಕ ಮೂಲ ಸೌಕರ್ಯಗಳು | ಸಾಮಾಜಿಕ ಮೂಲ ಸೌಕರ್ಯಗಳು ಅಥವಾ ಸಾಮಾಜಿಕ ಮೌಲ್ಯೋತ್ಪಾದಕಗಳು |
|---|---|
| • ನೇರವಾಗಿ ಕೃಷಿ ಮತ್ತು ಕೈಗಾರಿಕೆ ಅಭಿವೃದ್ಧಿಗೆ ನೆರವಾಗುತ್ತದೆ.<br>• ಕೃಷಿ ಮತ್ತು ಕೈಗಾರಿಕೆಗಳು ಅತಿ ವೇಗವಾಗಿ ಅಭಿವೃದ್ಧಿಯಾಗಲು ಇದರ ಅವಶ್ಯಕತೆ ಹೆಚ್ಚಾಗಿದೆ.<br><br>ಉದಾ: ಸಾರಿಗೆ, ಸಂಪರ್ಕ, ಬ್ಯಾಂಕಿಂಗ್, ವಿಜ್ಞಾನ ಮತ್ತು ತಂತ್ರಜ್ಞಾನ ಇತ್ಯಾದಿ | • ಪರೋಕ್ಷವಾಗಿ ಕೃಷಿ ಮತ್ತು ಕೈಗಾರಿಕಾಭಿವೃದ್ಧಿಗೆ ನೆರವಾಗುತ್ತದೆ.<br>• ಇವು ಜನರ ಮೂಲಭೂತ ಅವಶ್ಯಕತೆಗಳಾಗಿದ್ದು. ಅವುಗಳು ಇಲ್ಲದೇ ಜೀವನ ಕಷ್ಟಕರವಾಗುತ್ತದೆ.<br><br>ಉದಾ: ಶಿಕ್ಷಣ ಆರೋಗ್ಯ ನೈರ್ಮಲ್ಯ ಕುಡಿಯುವ ನೀರು ಇತ್ಯಾದಿ |

## 4. ನಿರುದ್ಯೋಗದ ನಿರ್ಮೂಲನೆ:

ದಕ್ಷತೆಯಿಂದ ಕೂಡಿದ, ಇಚ್ಚೆಯುಳ್ಳ ಜನರಿಗೆ ಉದ್ಯೋಗ ಸಿಗದ ಸ್ಥಿತಿಯನ್ನು ನಿರುದ್ಯೋಗ ಎನ್ನುವರು. ಗ್ರಾಮೀಣ ಭಾಗದಲ್ಲಿ ಎರಡು ರೀತಿಯಲ್ಲಿ ನಿರುದ್ಯೋಗ ಕಂಡುಬರುತ್ತದೆ.

- ಮರೆಮಾಚಿದ ನಿರುದ್ಯೋಗ ಸ್ಥಿತಿ
- ಋತುಮಾನದ ನಿರುದ್ಯೋಗ ಸ್ಥಿತಿ

**ಮರೆಮಾಚಿದ ನಿರುದ್ಯೋಗ:** "ನಿರುದ್ಯೋಗದ ಸ್ಥಿತಿಯನ್ನು ಗುರುತಿಸಲು ಸಾಧ್ಯವಿಲ್ಲದ ಸ್ಥಿತಿಯೆ ಮರೆಮಾಚಿದ ನಿರುದ್ಯೋಗ ಸ್ಥಿತಿಯಾಗಿದೆ.

- ಶ್ರವದ ಪೂರೈಕೆಗಿಂತ ಶ್ರಮದ ಬೇಡಿಕೆ ಕಡೆಮೆ ಇರುವಂತಹ ಸ್ಥಿತಿ
- ಅಗತ್ಯಕ್ಕಿಂತ ಹೆಚ್ಚಿನ ಜನ ಒಂದೇ ಕೆಲಸದಲ್ಲಿ ನಿರತರಾಗಿರುವ ಸ್ಥಿತಿ.

ಭಾರತದಲ್ಲಿ 58% ಜನ ಕೃಷಿಯಲ್ಲಿ ತೊಡಗಿ ಜಿ.ಡಿ.ಪಿ. ಕೃಷಿಯಲ್ಲಿ 13.9%ರಷ್ಟು ಕೊಡುಗೆ ನೀಡುತ್ತಾರೆ. ಈ ಕೊಡುಗೆಗಾಗಿ 35% ಜನ ಕೃಷಿಯಲ್ಲಿ ತೊಡಗಿದ್ದರೆ. ಸಾಕು ಆದರೆ 23% ರಷ್ಟು ಜನ ಹೆಚ್ಚಾಗಿ ಕೃಷಿಯಲ್ಲಿ ತೊಡಗಿದ್ದಾರೆ ಈ ಹೆಚ್ಚುವರಿ ಜನರ ಉತ್ಪಾದನೆ ಸೊನ್ನೆಯಾಗಿರುತ್ತದೆ. ಇದನ್ನೆ ಸೀಮಾಂತ ಉತ್ಪಾದನೆ ಎನ್ನುತ್ತೇವೆ. ಕೈಗಾರಿಕೆ ಮತ್ತು ಸೇವಾವಲಯದಲ್ಲಿ ಅವಶ್ಯಕತೆ ಇದ್ದಷ್ಟೇ ಶ್ರಮಿಕರ ಆಯ್ಕೆ ಇರುತ್ತದೆ.



downloaded from: www.kpscvaani.com

- **ಋತುಮಾನದ ನಿರುದ್ಯೋಗ:**

ಋತುಮಾನದ ಬದಲಾವಣೆ ಅನುಗುಣವಾಗಿ ಉಂಟಾಗುವ ನಿರುದ್ಯೋಗ ಇದು ಕಂಡುಬರುವುದು ಕೃಷಿ ಅವಲಂಬಿತ ಕ್ಷೇತ್ರದಲ್ಲಿ ಮಾತ್ರ 64%ರಷ್ಟು ಜನರು ಮಾನ್‌ಸೂನ್ ಮಳೆಯ ಮೇಲೆ ಅವಲಂಬಿತವಾಗಿದೆ. ಈ ಜನರು ಋತುಮಾನದ ನಿರುದ್ಯೋಗ ಅನುಭವಿಸುವ ಸಾಧ್ಯತೆ ಹೆಚ್ಚು. ಗ್ರಾಮೀಣ ಅಭಿವೃದ್ಧಿ ಮೂಲಕ ಈ ಸಮಸ್ಯೆ ನಿವಾರಣೆ ಮಾಡಬಹುದು.

5. **ಶಾಶ್ವತ ಆಸ್ತಿಯ ನಿರ್ಮಾಣ:**

ಕಲೆಗಳ ಶಿಕ್ಷಣ ಕೇಂದ್ರಗಳು, ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಕಟ್ಟಡಗಳು, ರಸ್ತೆಗಳು ಸೇತುವೆಗಳು ಇವು ಸುದೀರ್ಘ ಅವಧಿಗೆ ಗ್ರಾಮೀಣ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಇವು ಗ್ರಾಮೀಣ ಭಾಗದ ಶಾಶ್ವತ ಆಸ್ತಿಗಳಾಗಿವೆ.

6. **ಇತರ ವಲಯಗಳ ಅಭಿವೃದ್ಧಿ:**

ಕೃಷಿ ಅಭಿವೃದ್ಧಿಯೇ ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮೀಣ ಅಭಿವೃದ್ಧಿಯು ದ್ವಿತೀಯ ಮತ್ತು ತೃತೀಯ ವಲಯಗಳನ್ನು ಅವಲಂಬಿಸಿದೆ. ಗ್ರಾಮೀಣ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆಗಳ ಸ್ಥಾಪನೆ ಮಾಡುವುದು. ಕೈಗಾರಿಕೆಗಳಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ. ಇದರಿಂದ ಸೇವಾವಲಯ ಅಭಿವೃದ್ಧಿಯಾಗುತ್ತದೆ. ಉದಾ: ರಸ್ತೆ ಅಭಿವೃದ್ಧಿ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿ

7. **ಜನರ ಸಹಭಾಗಿತ್ವ ಹೆಚ್ಚಳ:**

ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಹೆಚ್ಚು ಹೆಚ್ಚು ಜನರ ಸಹಭಾಗಿತ್ವ ಉಂಟಾಗಿ ಗ್ರಾಮೀಣ ಅಭಿವೃದ್ಧಿಯಾಗುತ್ತದೆ.

8. **ಗ್ರಾಮೀಣ ಸಂಪನ್ಮೂಲಗಳ ಸದ್ಬಳಕೆ:**

ಗ್ರಾಮ ಪ್ರದೇಶ ಅಭಿವೃದ್ಧಿಯಾದರೆ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತವೆ. ಇದರಿಂದ ಗ್ರಾಮೀಣ ಸಂಪನ್ಮೂಲಗಳು ಸಮರ್ಪಕವಾಗಿ ಬಳಕೆಯಾಗುತ್ತವೆ.

9. **ಗ್ರಾಮೀಣ ಭಾಗದ ಜನರ ಮನೋಭಾವ ಬದಲಾವಣೆ:**

ಗ್ರಾಮೀಣ ಆಯವ್ಯಯ ಮೂಲಕ ಉತ್ತಮ ಶಿಕ್ಷಣ, ಆರೋಗ್ಯ, ಕೃಷಿ, ವಾಣಿಜ್ಯಕರಣದಿಂದಾಗಿ ಗ್ರಾಮೀಣ ಜನರ ಮನ ಪರಿವರ್ತನೆ ಸಾಧ್ಯವಾಗುತ್ತದೆ. ಶಿಕ್ಷಣದಂತ ಸೌಲಭ್ಯದ ಕೊರತೆಯಿಂದಾಗಿ ಗ್ರಾಮೀಣ ಭಾಗದ ಜನರು ಮೂಢನಂಬಿಕೆ ಕಂದಾಚಾರಗಳಿಗೆ ಒಳಗಾಗುತ್ತಾರೆ. ಗ್ರಾಮೀಣ ಅಭಿವೃದ್ಧಿಯಿಂದ ಅವರ ಮನೋಭಾವ ಬದಲಾವಣೆ ಸಾಧ್ಯ.



downloaded from: www.kpscvaani.com

10. ಸರ್ವತೋಮುಖ ಅಭಿವೃದ್ಧಿ:

ಗ್ರಾಮೀಣ ಅಭಿವೃದ್ಧಿಯಿಂದಾಗಿ ಗ್ರಾಮೀಣ ಜನರ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ. ಆರೋಗ್ಯ ಶಿಕ್ಷಣ ಮಟ್ಟ ಆರ್ಥಿಕ ಸಾಮಾಜಿಕ ಸ್ಥಾನಮಾನಗಳಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತದೆ.

## ಕೃಷಿ ಮಾರುಕಟ್ಟೆ :–

ರೈತರ ಪರಿಶ್ರಮಕ್ಕೆ ಪ್ರತಿಫಲ ನೀಡುವಲ್ಲಿ ಕೃಷಿ ಮಾರಕಟ್ಟೆ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಕೃಷಿ ಕ್ಷೇತ್ರ ಜೀವದಾನ ಮಟ್ಟದಿಂದ ವಾಣಿಜ್ಯಾಧಾರವಾಗಿ ಬದಲಾವಣೆ ಆಗಿರುವ ಹಿನ್ನೆಲೆಯಲ್ಲಿ ಕೃಷಿ ಮಾರುಕಟ್ಟೆ ಅತಿ ಅವಶ್ಯಕವಾಗಿದೆ.

ರೈತರ ಮತ್ತು ಅನುಭೋಗಿಗಳ ಹಿತಾಸಕ್ತಿ ಕಾಪಾಡುವಲ್ಲಿ ಕೃಷಿ ಮಾರುಕಟ್ಟೆಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಆದರೆ ಭಾರತದ ಕೃಷಿ ಮಾರುಕಟ್ಟೆಗಳು ಕೆಳಗಿನ ದೋಷಗಳನ್ನು ಹೊಂದಿವೆ.

- ಮಧ್ಯವರ್ತಿಗಳ ಹಾವಳಿ: ಕೃಷಿ ಉತ್ಪನ್ನದ ಬೆಲೆಯ 60% ರಷ್ಟು ಮಧ್ಯವರ್ತಿಗಳ ಪಾಲಾಗುತ್ತಿದೆ.
- ಗುಣಮಟ್ಟದ ಆಧಾರದ ಮೇಲೆ ವಸ್ತುಗಳ ವಿಂಗಡನೆಯ ಅಭಾವ.
- ಸಾರಿಗೆ ಸೌಲಭ್ಯದ ಅಭಾವ
- ಸಂಗ್ರಹಣ ಸೌಲಭ್ಯದ ಅಭಾವ
- ಮಾರುಕಟ್ಟೆ ಮಾಹಿತಿಯ ಅಭಾವ
- ಸಾಲ ಸೌಲಭ್ಯದ ಕೊರತೆ
- ಮಾರುಕಟ್ಟೆ ಅವ್ಯವಹಾರಗಳು: ಮಧ್ಯವರ್ತಿಗಳಿಂದ ಹಲವು ರೀತಿಯಲ್ಲಿ ರೈತರು ಮೋಸಹೋಗುತ್ತಾರೆ.
- ರೈತರಲ್ಲಿ ಸಂಘಟನೆಯ ಕೊರತೆ: ಕೃಷಿಕರಲ್ಲಿ ಸಂಘಟನೆ ಇಲ್ಲ, ಇದ್ದರೂ ಅತಿ ಕಡಿಮೆ.
- ಒತ್ತಡದ ಮಾರಾಟ: ವಿಭಿನ್ನ ಕಾರಣಗಳಿಂದ ರೈತ ಬೆಳೆದ ಬೆಳೆಯನ್ನು ಸುಗ್ಗಿಯ ತಕ್ಷಣದಲ್ಲಿ ಮಾರಾಟ ಮಾಡುವ ಒತ್ತಡದ ವ್ಯವಸ್ಥೆ.
- ಸರ್ಕಾರದ ನಿರ್ಲಕ್ಷ್ಯ: ಸರ್ಕಾರ ಕೃಷಿ ಮಾರುಕಟ್ಟೆ ಬಗ್ಗೆ ಸರ್ಕಾರ ನಿರ್ಲಕ್ಷ ತೋರಿಸಿದೆ. ಆದ್ದರಿಂದ ಸಮಸ್ಯೆಗಳು ಉಲ್ಬಣಿಸುತ್ತವೆ.

## ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸಲು ಸರಕಾರ ಕೈಗೊಂಡ ಕ್ರಮಗಳು :

- **ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆ:** ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟ ಮಾರುಕಟ್ಟೆಗಳು ಸಮರ್ಪಕ ತೂಕ, ಬೆಲೆ ನಿರ್ಧಾರವನ್ನು ಸರ್ಕಾರ ನಿರ್ಧಾರ ಮಾಡುತ್ತದೆ. ಈಗ ಭಾರತದಲ್ಲಿ 7139 ನಿಯಂತ್ರಿತ ಮಾರುಕಟ್ಟೆಗಳು ಇವೆ.



downloaded from: www.kpscvaani.com

- **ಸಹಕಾರಿ ಮಾರುಕಟ್ಟೆ:** ಸಹಕಾರಿ ಮಾರುಕಟ್ಟೆ ವ್ಯವಸ್ಥೆ ಕೃಷಿ ಮಾರುಕಟ್ಟೆಯ ದೋಷವನ್ನು ನಿವಾರಿಸಲು 2 ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಜಾರಿಗೆ ಬಂದ ಮತ್ತೊಂದು ಕ್ರಮ. ಈ ರೀತಿಯ ಮಾರುಕಟ್ಟೆ ಸಹಕಾರಿ ಸಂಘಗಳು ರೈತರಿಗೆ ವಿಭಿನ್ನ ರೀತಿಯಲ್ಲಿ ನೆರವಾಗಿದೆ. ಉದಾ: ರೈತರ ಚೌಕಾಸಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಸರಕುಗಳ ನೇರ ಮಾರಾಟ, ಸಾಲ ಸೌಲಭ್ಯವನ್ನು ಒದಗಿಸುವುದು. ಸುಲಭ ಮತ್ತು ಕಡಿಮೆ ವೆಚ್ಚದ ಸಾರಿಗೆ ಸೌಲಭ್ಯ, ಸಂಗ್ರಹಣಾ ಸೌಲಭ್ಯ, ಗುಣಮಟ್ಟದ ಆಧಾರದ ಮೇಲೆ ವಿಂಗಡನೆ ಮತ್ತು ಗುಣಮಟ್ಟದ ಉನ್ನತೀಕರಣ. ಕೃಷಿ ಉತ್ಪನ್ನಗಳ ಸಂಸ್ಕರಣೆ ಇಂಥಹ ಸೌಲಭ್ಯಗಳನ್ನು ರೈತರಿಗೆ ಒದಗಿಸುತ್ತದೆ. ಇಂಥಹ ಮಾರುಕಟ್ಟೆಗಳು ಹಲವು ಹಂತಗಳಲ್ಲಿ ಸ್ಥಾಪಿಸಲ್ಪಟ್ಟಿವೆ.

## ನಿಗಧಿತ ಮಾನದಂಡಗಳ ಬಳಕೆ:

- ಪ್ರಮಾಣಾನುಗುಣ ತೂಕಗಳ ಕಾಯ್ದೆಯನ್ನು 1939 ರಲ್ಲಿ ಜಾರಿಗೆ ತಂದಿತು.
- 1958ರಲ್ಲಿ ಏಕಮಾನ ಪದ್ಧತಿಯನ್ನು ಜಾರಿಗೊಳಿಸಿದೆ.

## ಉತ್ಪನ್ನಗಳ ವರ್ಗೀಕರಣ ಮತ್ತು ಪ್ರಮಾಣೀಕರಣದ ವ್ಯವಸ್ಥೆ :

- 1967 ರಲ್ಲಿ ಕೃಷಿ ಉತ್ಪನ್ನಗಳ ವರ್ಗೀಕರಣ ಕಾಯ್ದೆಯನ್ನು ಜಾರಿಗೊಳಿಸಲಾಯಿತು.
- ಇಂದು 163 ಕೃಷಿ ಉತ್ಪನ್ನಗಳು ಈ ಕಾಯ್ದೆ ವ್ಯಾಪ್ತಿಗೆ ಒಳಪಡುತ್ತದೆ.
- ಉನ್ನತ ಗುಣಮಟ್ಟದ ಕೃಷಿ ವಸ್ತುಗಳಿಗೆ "ಅಗ್‌ಮಾರ್ಕ್" ಮುದ್ರೆಯನ್ನು ಹಾಕಲಾಗುತ್ತದೆ.

## ಗ್ರಾಮೀಣ ಬಡತನ ಮತ್ತು ನಿರುದ್ಯೋಗ :

- ಒಂದು ಆರ್ಥಿಕತೆಯ ಹಾವಳಿ ಸಮಸ್ಯೆಗಳು.
- ಒಂದು ಪ್ರದೇಶಕ್ಕೆ ಸಂಬಂಧಿಸಿದ ಸಾಮಾಜಿಕ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಬಡತನ ಮತ್ತು ನಿರುದ್ಯೋಗ ಒಂದು ಪ್ರದೇಶದ ಸಾಮಾಜಿಕ ಆರ್ಥಿಕ ಸಮಸ್ಯೆಯಾಗಿದೆ.

## ವ್ಯಾಖ್ಯೆಗಳು:

FAO ದ ಮೊದಲ ಮಹಾ ನಿರ್ದೇಶಕ **ಲಾರ್ಡ್ ಬಾಯಿಡಾರ್ ಅವರ ಪ್ರಕಾರ**: 1945 ರಲ್ಲಿ ಮೊದಲ ಬಾರಿಗೆ ಬಡತನ ರೇಖೆಯನ್ನು ವ್ಯಾಖ್ಯಾನಿಸಿದರು.

"ಒಬ್ಬ ವ್ಯಕ್ತಿ ಒಂದು ದಿನಕ್ಕೆ 2300ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲ್ಲೂ ಕೆಳಗಿದ್ದಾನೆಂದು ಪರಿಗಣಿಸಬೇಕಾಗುತ್ತದೆ".



downloaded from: www.kpscvaani.com

ದಾಂಡೇಕರ್ & ರಾಥ್ ಅವರ ಪ್ರಕಾರ: "ಗ್ರಾಮೀಣ ಭಾಗದಲ್ಲಿ ವಾರ್ಷಿಕ 180 ರೂ. ನಗರ ಭಾಗದಲ್ಲಿ ವಾರ್ಷಿಕ 270 ರೂ. ಕ್ಕಿಂತ ಕಡಿಮೆ ವೆಚ್ಚ ಮಾಡುವವರು ಬಡತನ ರೇಖೆಗಿಂತ ಕೆಳಗಿರುವವರು. ಇವರ ಪ್ರಕಾರ 1960–61 ರಲ್ಲಿ ಗ್ರಾಮಿಣದಲ್ಲಿ – 40% ನಗರದಲ್ಲಿ – 50% ಃಊ' ಇರುವವರು.

ಬರ್ದ್ರನ್ ಅವರ ಪ್ರಕಾರ: "1960–61 ರಲ್ಲಿ ಬೆಲೆಗಳ ತೆರಿಗೆಗಳಿಗೆ ಗ್ರಾಮಿಣದಲ್ಲಿ – 15/– ರೂ. ನಗರದಲ್ಲಿ – 18/– ರೂ. ಗಿಂತ ಅನುಬೋಗಕ್ಕೆ ವ್ಯಯಿಸುವವರು ಃಊ' ಆಗಿರುತ್ತಾರೆ". 1968–69 ರಲ್ಲಿ ಗ್ರಾಮೀಣ ದಲ್ಲಿ 55% ರಷ್ಟು ನಗರದಲ್ಲಿ 41% ರಚ್ಚು ಃಊ' ಇರುತ್ತಾರೆ.

## ಗ್ರಾಮೀಣ ಬಡತನ :

ಒಂದು ಪ್ರದೇಶದ ಗರಿಷ್ಟ ಜನರು ಅತ್ಯವಶ್ಯಕ ವಸ್ತುಗಳನ್ನು ಪಡೆಯಲಾರದ ಸ್ಥಿತಿಯನ್ನು ಬಡತನ ಎಂದು ಕರೆಯಲಾಗುವುದು.

## ಗ್ರಾಮೀಣ ಭಾಗದಲ್ಲಿ ಕಂಡು ಬರುವ ಬಡತನದ ಸ್ಥಿತಿ:

ಲಕಡವಾಲರ ಅಂದಾಜಿನ ಪ್ರಕಾರ ಗ್ರಾಮೀಣ ಭಾಗದಲ್ಲಿ ಪ್ರತಿನಿತ್ಯ 2400 ಕ್ಯಾಲೋರಿಯಷ್ಟು ಆಹಾರ ಪಡೆಯಲಾಗದ ನಗರದಲ್ಲಿ 2100 ಕ್ಯಾಲೋರಿ ಆಹಾರ ಪಡೆಯಲಾಗದ ಸ್ಥಿತಿಯನ್ನು ಬಡತನ ಎನ್ನಲಾಗಿದೆ. ಈ ಅಂದಾಜನ್ನು ಭಾರತದ ಯೋಜನ ಆಯೋಗ ಬಡತನ ಎಂದು ಪರಿಗಣಿಸಾಲಾಗಿದೆ.

- ಗ್ರಾಮೀಣ ಭಾಗದಲ್ಲಿ 39.1% ರಷ್ಟು ನಗರದಲ್ಲಿ 40.2% ರಷ್ಟು ಒಟ್ಟಾರೆಯಾಗಿ 39% ರಷ್ಟು ಬಡತನವಿತ್ತು (1987 ರಿಂದ 88 ಪ್ರಕಾರ)
- 2004–05 ರಲ್ಲಿ ಗ್ರಾಮ ಭಾಗದಲ್ಲಿ 28.3% ನಗರದಲ್ಲಿ 25.7% ಒಟ್ಟಾರೆಯಾಗಿ 27.5% ರಷ್ಟು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದರು.
- 2004–05 ರಲ್ಲಿ ಕರ್ನಾಟಕದಲ್ಲಿ ಗ್ರಾಮೀಣ ಭಾಗದಲ್ಲಿ 20.8% ನಗರದಲ್ಲಿ 32.6% ಒಟ್ಟಾರೆಯಾಗಿ 25% ಜನರು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದರು.

## ಅತಿಹೆಚ್ಚು ಬಡತನವಿರುವ ರಾಜ್ಯಗಳು:

| ಒರಿಸ್ಸಾ | ಗ್ರಾಮೀಣ ಭಾಗ | ನಗರ ಭಾಗ | ಒಟ್ಟಾರೆ |
|---|---|---|---|
| | **46.8%** | **44.3%** | **45.14%** |



downloaded from: www.kpscvaani.com

**ಅತಿ ಕಡಿಮೆ ಬಡತನವಿರುವ ರಾಜ್ಯಗಳು:**

| ಕಾಶ್ಮೀರ | ಗ್ರಾಮೀಣ ಭಾಗ | ನಗರ ಭಾಗ | ಒಟ್ಟಾರೆ |
|---|---|---|---|
| | 4.6% | 7.9% | 5.4% |

- ಸುರೇಶ್ ತೆಂಡೂಲ್ಕರ್ ವರದಿ (2004–05) ಪ್ರಕಾರ ಸಂಪೂರ್ಣ ಅನುಭೋಗಿ ಮಾಡುವ ವೆಚ್ಚದ ಆಧಾರದ ಮೇಲೆ ಬಡತನ ಅಳೆಯಿತು ಈ ಸಮಿತಿ ಪ್ರಕಾರ ಗ್ರಾಮೀಣ ಭಾಗದಲ್ಲಿ ಪ್ರತಿದಿನ 22/–ರೂ ಮಾಸಿಕವಾಗಿ 447.6 ರೂ.ಗಳು ಆದಾಯ ಹೊಂದಿರುವವರು ಬಡವರಲ್ಲ. ನಗರದಲ್ಲಿ ದಿನನಿತ್ಯ 23/–ರೂ ಮಾಸಿಕವಾಗಿ 578.85 ರೂ.ಗಳು ಈ ವರದಿ ಪ್ರಕಾರ ಗ್ರಾಮ ಭಾಗದಲ್ಲಿ 41.8%, ನಗರ ಭಾಗದಲ್ಲಿ 25.7% ಒಟ್ಟಾರೆಯಾಗಿ 37.2% ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ.
  ಯೋಜನಾ ಆಯೋಗದ ಅಂದಾಜಿನ ಪ್ರಕಾರ (2011 ಗ್ರಾಮೀಣ ಭಾಗದಲ್ಲಿ 26/– ರೂ.ಗಳು ನಗರ ಭಾಗದಲ್ಲಿ 32/– ರೂ.ಗಳು ದಿನನಿತ್ಯದ ಆದಾಯ ಹೊಂದಿರುವವರು ಬಡವರಲ್ಲ. ಇದಕ್ಕಿಂತ ಕಡಿಮೆ ಆದಾಯ ಹೊಂದಿರುವವರು ಬಡವರು.

## ಗ್ರಾಮೀಣ ಬಡತನಕ್ಕೆ ಕಾರಣವಾದ ಅಂಶಗಳು :

### 1. ಕಡಿಮೆ ಉತ್ಪಾದಕತೆ:

- ಕೃಷಿಯ ಮೇಲಿನ ಹೆಚ್ಚಿನ ಅವಲಂಬನೆ
- ಬದಲಿ ಉದ್ಯೋಗಾವಕಾಶಗಳ ಕೊರತೆ
- ಜೀವನಾಧಾರ ಮಟ್ಟದ ಬೇಸಾಯ
- ಇವು ಕಡಿಮೆ ಉತ್ಪಾದಕತೆಗೆ ಕಾರಣವಾದ ಅಂಶಗಳು. ಇದರಿಂದ ಆದಾಯ ಮಟ್ಟ ಕಡಿಮೆಯಾಗಿ ಬಡತನ ಉಂಟಾಗುತ್ತದೆ.

### 2. ಹೆಚ್ಚಿನ ಜನಸಂಖ್ಯಾ ಬೆಳವಣಿಗೆ ದರ:

- ಭಾರತ ಜನಸಂಖ್ಯೆ ಬೆಳವಣಿಗೆ ದರ 17.64% ರಷ್ಟು (2011ರ ಪ್ರಕಾರ)
- ಆರ್ಥಿಕ ಬೆಳವಣಿಗೆ ದರ 6% (ದಶಕದ ಬೆಳವಣಿಗೆ)
- ಕರ್ನಾಟಕದಲ್ಲಿ ಜನಸಂಖ್ಯಾ ಬೆಳವಣಿಗೆ ದರ 15.67% (2011
- ಆರ್ಥಿಕ ಬೆಳವಣಿಗೆ ದರ 6% (2011–12 ದಶಕದ ಬೆಳವಣಿಗೆ)



downloaded from: www.kpscvaani.com

ಜನಸಂಖ್ಯೆ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಆದರೆ ಆರ್ಥಿಕ ಬೆಳವಣಿಗೆ ದರ ಕಡಿಮೆಯಾಗುತ್ತಾ ಇದೆ. ಇದರಿಂದ ಬಡತನದಿಂದ ನರಳುವವರ ಸಂಖ್ಯೆ ಹೆಚ್ಚಾಗುತ್ತಿದೆ.

## 3. ನಿರುದ್ಯೋಗ:

NSSO ದ 2004–05ರ ವರದಿ ಅನ್ವಯ ಭಾರತದಲ್ಲಿ 3.4 ಕೋಟಿ ಜನಸಂಖ್ಯೆ ಕೆಲಸವಿಲ್ಲದೇ ನಿರುದ್ಯೋಗಿಗಳಾಗಿದ್ದಾರೆ. ಒಟ್ಟು ದುಡಿಯುವರಲ್ಲಿ 8.28%ರಷ್ಟು ಜನರಷ್ಟು ನಿರುದ್ಯೋಗಿಗಳಾಗಿದ್ದಾರೆ.

- ನಿರುದ್ಯೋಗದಿಂದ ಆದಾಯ ಕಡಿಮೆ ಅಥವಾ ಶೂನ್ಯವಿರುವ ಸ್ಥಿತಿ ಉಂಟಾಗಿ ಬಡತನ ಉಂಟಾಗುತ್ತದೆ.

### ಗ್ರಾಮೀಣ ಭಾಗದಲ್ಲಿ ನಿರುದ್ಯೋಗಕ್ಕೆ ಕಾರಣ.

- ✓ ಜನಸಂಖ್ಯೆ ಹೆಚ್ಚಳ
- ✓ ಬದಲಿ ಉದ್ಯೋಗವಕಾಶ ಕೊರತೆ
- ✓ ಸಾಗುವಳಿಗೆ ಯೋಗ್ಯವಾದ ಭೂಮಿಯ ಕೊರತೆ
- ✓ ಋತುಮಾನದ ಉದ್ಯೋಗದ ಸ್ಥಿತಿ
- ✓ ಕೃಷಿಯ ಮೇಲೆ ಅತಿಯಾದ ಅವಲಂಬನೆ

## 4. ಅಭಿವೃದ್ಧಿ ಕಾಮಗಾರಿಗಳ ಕೊರತೆ:

ಗ್ರಾಮೀಣ ಭಾಗದಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಸಾರ್ವಜನಿಕ ಕಟ್ಟಡಗಳ ನಿರ್ಮಾಣ, ರಸ್ತೆ, ರೈಲು ಹಳ್ಳಿಗಳ ನಿರ್ಮಾಣ ಇತ್ಯಾದಿ ಕಾಮಗಾರಿಗಳು ಕಡಿಮೆ ಹಾಗೂ ಮಂದಗತಿಯಾಗಿದ್ದು, ಆ ಮೂಲಕ ಗ್ರಾಮೀಣ ಭಾಗದ ಅಭಿವೃದ್ಧಿ ಕೂಡ ಕಡಿಮೆಯಾಗಿ ಬಡತನ ಸಮಸ್ಯೆ ಹೆಚ್ಚಾಗಿದೆ.

## 5. ಹಣದುಬ್ಬರ:

ಹಣದುಬ್ಬರ ಕಾರಣದಿಂದ ಗ್ರಾಮಿಣ ಭಾಗದಲ್ಲಿ ಬಡಜನತೆ ಅತ್ಯವಶ್ಯಕ ವಸ್ತುಗಳನ್ನು ಪಡೆಯಲಾಗದೆ ಮತ್ತಷ್ಟು ನಿಕೃಷ್ಟ ಸ್ಥಿತಿಗೆ ತಳ್ಳಲ್ಪಡುತ್ತಾರೆ.

2012 ಜನವರಿಯಲ್ಲಿ ಒಟ್ಟಾರೆಯಾಗಿ ಹಣದುಬ್ಬರ 7.65% ಗ್ರಾಮೀಣ ಭಾಗದಲ್ಲಿ 2004–05ರಲ್ಲಿ 7.38%ರಷ್ಟು, ನಗರ ಭಾಗದಲ್ಲಿ 8.25% ಹಣದುಬ್ಬರ ಕಂಡುಬಂದಿದೆ.



downloaded from: www.kpscvaani.com

**6. ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆ:**

ಈ ಕಾರಣದಿಂದ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಉತ್ಪಾದನಾ ವೆಚ್ಚ ನಿರಂತರವಾಗಿ ಹೆಚ್ಚಾಗುತ್ತಿದೆ. ಆದರೆ ಆದಾಯದ ಮಟ್ಟ ಅದೇ ಪ್ರಮಾಣದಲ್ಲಿ ಹೆಚ್ಚಾಗುತ್ತಿಲ್ಲ. ಈ ಕಾರಣದಿಂದ ಗ್ರಾಮೀಣ ಭಾಗದಲ್ಲಿ ಬಡತನದ ಸಮಸ್ಯೆ ಹೆಚ್ಚಾಗುತ್ತದೆ.

**7. ಬದಲಿ ಉದ್ಯೋಗವಕಾಶಗಳ ಕೊರತೆ:**

ಗ್ರಾಮೀಣ ಭಾಗದಲ್ಲಿ ಕೈಗಾರಿಕತೆಯ ಕೊರತೆ ಹಾಗೂ ಸೇವಾವಲಯದ ಅನಭಿವೃದ್ಧಿಯಿಂದ ಕೃಷಿಯನ್ನು ಹೊರತುಪಡಿಸಿ ಗ್ರಾಮೀಣ ಭಾಗದ ಜನರಿಗೆ ಬದಲಿ ಉದ್ಯೋಗವಕಾಶಗಳು ಲಭ್ಯವಿಲ್ಲ. ಆದ್ದರಿಂದ ಅವರ ಆದಾಯದ ಮಟ್ಟ ಕಡಿಮೆ ಇದ್ದು, ಬಡತನದ ಸಮಸ್ಯೆ ಹೆಚ್ಚಾಗಿದೆ.

**8. ಮೂಲ ಸೌಲಭ್ಯಗಳ ಕೊರತೆ:**

ಈ ಕಾರಣದಿಂದ ಗ್ರಾಮೀಣ ಭಾಗದ ಆರ್ಥಿಕ ಬೆಳವಣಿಗೆ ದರ ನಗರಕ್ಕಿಂತ ಕಡಿಮೆ ಇದೆ. ಇದರಿಂದ ಗ್ರಾಮೀಣ ಭಾಗದಲ್ಲಿ ಬಡತನದ ಸಮಸ್ಯೆ ಉಂಟಾಗುತ್ತದೆ.

**9. ಸಾಮಾಜಿಕ ಮತ್ತು ರಾಜಕೀಯ ಅಂಶಗಳು:**

ಗ್ರಾಮೀಣ ಸಾಮಾಜಿಕ ರಚನೆಯಲ್ಲಿ ಕಂಡುಬರುವ ಅವಿಭಕ್ತ ಕುಟುಂಬ ವ್ಯವಸ್ಥೆ, ಜಾತಿ ವ್ಯವಸ್ಥೆ, ಅನಕ್ಷರತೆ, ಸಾಂಪ್ರದಾಯಿಕ ಆಚರಣೆ ಇತ್ಯಾದಿ ಅಂಶಗಳು ಬಡತನಕ್ಕೆ ಕಾರಣಗಳಾಗಿವೆ.

ರಾಜಕೀಯ ಸ್ಥಿತಿಗಳಾದ, ವಿಬಿನ್ನ ರಾಜಕೀಯ ಪಕ್ಷಗಳು, ಪ್ರಜಾಪ್ರಭುತ್ವದ ಸ್ವರೂಪ, ಅಸ್ಥಿರತೆ ಇತ್ಯಾದಿ. ಅಂಶಗಳು ಬಡತನಕ್ಕೆ ಕಾರಣವಾಗಿವೆ.

**10.ಬಡತನ ವಿಷವರ್ತುಲ**

## ಗ್ರಾಮೀಣ ಬಡತನ ನಿರ್ಮೂಲನೆಗೆ ಕ್ರಮಗಳು:

**1. ಜನಸಂಖ್ಯೆ ಬೆಳವಣಿಗೆ ದರವನ್ನು ಕಡಿಮೆಗೊಳಿಸುವುದು.**

- ಕುಟುಂಬ ಕಲ್ಯಾಣ ಕಾರ್ಯಕ್ರಮ 1977
- ರಾಷ್ಟ್ರೀಯ ಜನಸಂಖ್ಯೆ ನೀತಿ 2000

ಈ ಎರಡು ಕಾರ್ಯಕ್ರಮಗಳನ್ನು ಜನಸಂಖ್ಯೆ ಬೆಳವಣಿಗೆ ದರವನ್ನು ನಿಯಂತ್ರಿಸಲು ಸರ್ಕಾರ ಜಾರಿಗೆ ತಂದಿತು



downloaded from: www.kpscvaani.com

**2. ಕೃಷಿಯ ಅಭಿವೃದ್ಧಿ:**

ಗ್ರಾಮೀಣ ಭಾಗದ ಕೃಷಿಯನ್ನು ಯಾಂತ್ರೀಕರಣ ವಾಣಿಜ್ಯಕರಣಗೊಳಿಸಿದರೆ ಅದರ ಮೂಲಕ ಆದಾಯ ಹೆಚ್ಚಿಸಿದರೆ ಬಡತನ ನಿರ್ಮೂಲನೆ ಯಾಗುತ್ತದೆ.

**3. ಬದಲಿ ಉದ್ಯೋಗವಾಕಾಶಗಳ ನಿರ್ಮಾಣ:**

ಗ್ರಾಮೀಣ ಭಾಗದಲ್ಲಿ ಕೈಗಾರೀಕರಣ ಮತ್ತು ಮೂಲಸೌಲಭ್ಯಗಳ ವಿಸ್ತರಣೆಯ ಮೂಲಕ ಬದಲೀ ಉದ್ಯೋಗವಕಾಶಗಳನ್ನು ಹೆಚ್ಚಿಸಿ ಬಡತನದ ತೀವ್ರತೆಯನ್ನು ಕಡಿಮೆ ಮಾಡಬಹುದು.

**4. ಪರಿಣಾಮಕಾರಿಯಾದ ಭೂಸುಧಾರಣೆಗಳು:**

ಗ್ರಾಮೀಣ ಭಾಗದಲ್ಲಿ ಪರಿಣಾಮಕಾರಿಯಾದ ಭೂಸುಧಾರಣಾ ಕ್ರಮಗಳ ಮೂಲಕ ಬಡತನದ ಪ್ರಮಾಣವನ್ನು ಕಡಿಮೆ ಮಾಡಬಹುದು.

**5. ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿ:**

ಗ್ರಾಮೀಣ ಭಾಗದಲ್ಲಿ ಈ ಅಭಿವೃದ್ಧಿ ಮೂಲಕ ಋತುಮಾನ ನಿರುದ್ಯೋಗ, ಅರೆನಿರುದ್ಯೋಗ, ಮರೆಮಾಚಿದ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿ, ಬಡತನದ ಮಟ್ಟವನ್ನು ಕಡಿಮೆ ಮಾಡಬಹುದು.

**6. ಶಿಕ್ಷಣದ ವಿಸ್ತರಣೆ:**

ಶಿಕ್ಷಣದ ವಿಸ್ತರಣೆಯ ಮೂಲಕ ಗ್ರಾಮೀಣ ಜನರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ, ಆ ಮೂಲಕ ಆದಾಯದ ಮಟ್ಟ ಹೆಚ್ಚಾಗಿ ಬಡತನದ ಮಟ್ಟ ಕಡಿಮೆಯಾಗುತ್ತುದೆ.

**7. ನೀರಾವರಿ ಸೌಲಭ್ಯದ ವಿಸ್ತರಣೆ:**

ಆಧುನಿಕ ನೀರಾವರಿ ವಿಧಾನಗಳ ಮೂಲಕ, ಅಂದರೆ ಹನಿ ನೀರಾವರಿ, ತುಂತುರು ನೀರಾವರಿಯ ಮೂಲಕ ಗ್ರಾಮೀಣ ಭಾಗದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಿ, ಜನರ ಆದಾಯ ಹೆಚ್ಚಿಸಿ, ಬಡತನದ ಮಟ್ಟ ಕಡಿಮೆ ಮಾಡುವುದು.

**8. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ:**

ಸರಕಾರದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಗ್ರಾಮೀಣ ಬಡತನದ ನಿರ್ಮೂಲನೆಗೆ ನೆರವಾಗುತ್ತದೆ. ಅಲ್ಲದೇ ಈ ಕಾರ್ಯಕ್ರಮಗಳು ಸಮುದಾಯ ಆಸ್ತಿಗಳ ನಿರ್ಮಾಣ ಮಾಡಿ, ಜನರಿಗೆ ಉದ್ಯೋಗ ಒದಗಿಸಿ, ಸರ್ವತೋಮುಖ ಗ್ರಾಮೀಣ ಅಭಿವೃದ್ಧಿಯ ಗುರಿ ಹೊಂದಿವೆ.




downloaded from: www.kpscvaani.com

## ಗ್ರಾಮೀಣ ವಸತಿ :-

ಮಾನವನ ಅತ್ಯವಶ್ಯಕ ವಸ್ತುಗಳಲ್ಲಿ ಮೂರನೆಯ ವಸ್ತು ವಸತಿ. ಇದು ಆರೋಗ್ಯ ಮಟ್ಟವನ್ನು ಸೂಚಿಸುತ್ತದೆ. ವ್ಯಕ್ತಿಯ ಆರ್ಥಿಕ, ಸಾಮಾಜಿಕ ಸ್ಥಾನವನ್ನು ವ್ಯಕ್ತಪಡಿಸುತ್ತದೆ.

## ಗ್ರಾಮೀಣ ವಸತಿಯ ಸ್ವರೂಪ ಮತ್ತು ಸಮಸ್ಯೆಗಳು :

ನಗರ ಭಾಗಕ್ಕಿಂತ ಗ್ರಾಮೀಣ ಭಾಗದಲ್ಲಿ ವಸತಿಯ ಅವಶ್ಯಕತೆ ಹೆಚ್ಚಿದೆ. ಗ್ರಾಮೀಣ ಭಾಗದಲ್ಲಿ ಅವಿಭಕ್ತ ಕುಟುಂಬ ಹೆಚ್ಚಿರುವುದರಿಂದ ಹೆಚ್ಚು ಅವಶ್ಯಕ.

1. ಗ್ರಾಮೀಣ ಭಾಗದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಹಾಗೂ ನಿಸರ್ಗದ ಪ್ರಭಾವ ಹೆಚ್ಚಾಗಿರುವುದರಿಂದ ವಿಸ್ತಾರದಲ್ಲಿ ದೊಡ್ಡದಾದ, ಗುಣಮಟ್ಟದಲ್ಲಿ ಉತ್ತಮವಾದ ವಸತಿಯ ಅವಶ್ಯಕತೆ ಇದೆ.

2. ವಸತಿಯ ಕೊರತೆ: 2010ರ ಅಂಕಿ ಅಂಶಗಳ ಅನ್ವಯ ಗ್ರಾಮೀಣ ಭಾಗದಲ್ಲಿ 26 ಮಿಲಿಯನ್ ವಾಸದ ಮನೆಗಳ ಅಭಾವವಿದೆ. ಈ ಅಭಾವದ ಸಮಸ್ಯೆ ಹೆಚ್ಚಾಗುತ್ತಾ ನಡೆದಿದೆ.

   1991--- 13.72 ಮಿಲಿಯನ್ ವಾಸದ ಮನೆಗಳ ಕೊರತೆ
   2010--- 26 ಮಿಲಿಯನ್ ವಾಸದ ಮನೆಗಳ ಕೊರತೆ

3. ಸೂಕ್ತ ನಿವೇಶನಗಳ ಕೊರತೆ
   ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಗ್ರಾಮೀಣ ಭಾಗದ ಒಟ್ಟು ಭೂ ವಿಸ್ತೀರ್ಣದಲ್ಲಿ ಕೇವಲ 2.3% ರಷ್ಟು ಮಾತ್ರ ವಾಸಕ್ಕೆ ಯೋಗ್ಯವಾದ ಪ್ರದೇಶ ಎಂದು ಗುರುತಿಸಲಾಗಿದೆ.
4. ಹಣಕಾಸಿನ ಸೌಲಭ್ಯಗಳ ಕೊರತೆ
5. ನೈರ್ಮಲ್ಯದ ಕೊರತೆ
6. ಗುಂಪು ವಸತಿಗಳಲ್ಲಿ ಆಸಕ್ತಿ ಇಲ್ಲದಿರುವಿಕೆ,
7. 1975ರ 20 ಅಂಶಗಳ ಕಾರ್ಯಕ್ರಮದಡಿಯಲ್ಲಿ ಕೇಂದ್ರ ಸರ್ಕಾರ ವಸತಿ ಸಮಸ್ಯೆಯನ್ನು ನಿವಾರಿಸಲು ಗ್ರಾಮೀಣ ಭಾಗದಲ್ಲಿ ಗುಂಪು ವಸತಿಯನ್ನು ಜಾರಿಗೊಳಿಸಿತು. ಇಲ್ಲಿ ವಸತಿ ಫಲಾನುಭವಿಗೆ ಸೇರಿರುತ್ತದೆ. ಆದರೆ ನಿವೇಶನ ಮಾತ್ರ ಸರ್ಕಾರದ್ದಾಗಿರುತ್ತದೆ. ಆದ್ದರಿಂದ ಜನರು ಇದರಲ್ಲಿ ಆಸಕ್ತಿ ತೋರಲಿಲ್ಲ ಇದರಿಂದ ವಸತಿ ಸಮಸ್ಯೆ ಪರಿಹರಿಸಲು ಸಾಧ್ಯವಾಗಲಿಲ್ಲ.
8. ಗ್ರಾಮೀಣ ಭಾಗದಲ್ಲಿ ಜಾತಿ ವ್ಯವಸ್ಥೆಯ ಆಚರಣೆ
9. ವಿಭಿನ್ನ ವಸತಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಅದಕ್ಷ ಆಡಳಿತ



downloaded from: www.kpscvaani.com

## ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಉದ್ದೇಶಗಳು:

- ಗ್ರಾಮೀಣ ಭಾಗದಲ್ಲಿ ಶಾಶ್ವತ ಆಸ್ತಿಗಳನ್ನು ನಿರ್ಮಾಣ ಮಾಡುವುದು.
- ಉದ್ಯೋಗವಕಾಶಗಳ ನಿರ್ಮಾಣ
- ಬಡತನದ ನಿರ್ಮೂಲನೆ
- ಕೃಷಿ ವಲಯದ ಅಭಿವೃದ್ಧಿ ಮತ್ತು ಆಧುನಿಕರಣ
- ಸಣ್ಣ ಮತ್ತು ಗುಡಿಕೈಗಾರಿಕೆಗಳ ಅಭಿವೃದ್ಧಿ
- ಗ್ರಾಮೀಣ ಪ್ರದೇಶದಲ್ಲಿ ಮೂಲಸೌಲಭ್ಯಗಳ ವಿಸ್ತರಣೆ
- ಗ್ರಾಮ ಭಾಗದ ಸರ್ವತೋಮುಖ ಅಭಿವೃದ್ಧಿಗೆ ನೆರವಾಗುವುದು
- ಗ್ರಾಮ ಭಾಗದ ಜನರಜೀವನಮಟ್ಟ ಹೆಚ್ಚಿಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಂತರವನ್ನು ಕಡಿಮೆ ಮಾಡುವುದು.

## ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಐತಿಹಾಸಿಕ್ಕೆ ಹಿನ್ನಲೆ:

ಬ್ರಿಟೀಷ್ ಆಡಳಿತದ ಪೂರ್ವಕಾಲ: ಈ ಅವಧಿಯಲ್ಲಿ ಭಾರತದಲ್ಲಿ ಭಾರತದ ಗ್ರಾಮೀಣ ಭಾಗಗಳು ಸಮೃದ್ಧವಾಗಿದ್ದು, ಸ್ವಾವಲಂಬನೆಯನ್ನು ಸಾಧಿಸಿದ್ದವು ಕೆಲವು ಗ್ರಾಮ ಪ್ರದೇಶದಲ್ಲಿ ಸಮಸ್ಯೆಗಳಿದ್ದರೂ ಅದನ್ನು ಸ್ಥಳೀಯ ಮಟ್ಟದಲ್ಲಿ ನಿವಾರಿಸಿಕೊಳ್ಳುತ್ತಿದ್ದರು ಆದ್ದರಿಂದ ಆ ಅವಧಿಯಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅವಶ್ಯಕತೆ ಇದ್ದಿಲ್ಲ

ಬ್ರೀಟಿಷರ ಆಡಳಿತದ ಅವಧಿ: ಈ ಅವಧಿಯಲ್ಲಿ ಗ್ರಾಮೀಣ ಭಾಗದ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು. ಗ್ರಾಮೀಣ ಕೈಗಾರಿಕೆಗಳು ಸಂಪೂರ್ಣವಾಗಿ ಅವನತಿ ಹೊಂದುವ ಸ್ಥಿತಿಯನ್ನು ತಲುಪಿತು ಇದರೊಂದಿಗೆ ಬ್ರೀಟೀಷರು ಕೃಷಿ ಕ್ಷೇತ್ರಕ್ಕೆ ನೀಡಿದ ಯಾವುದೇ ಪ್ರೋತ್ಸಾಹಕಗಳು ಸ್ವಾರ್ಥದಿಂದ ಕೂಡಿದ್ದು, ಸಣ್ಣ ರೈತರಿಗೆ ಅಂತಹ ಪ್ರೋತ್ಸಾಹಕಗಳು ಲಾಭದಾಯಕವಾಗಿರಲಿಲ್ಲ. ಅಷ್ಟೇ ಅಲ್ಲದೇ ಈ ಅವಧಿಯಲ್ಲಿ ಅನೇಕ ಬಾರಿ ಕ್ಷಾಮ ಪರಿಸ್ಥಿತಿ ತಲೆದೋರಿದ್ದವು.

## ಬ್ರೀಟೀಷರು ಗ್ರಾಮಾಭಿವೃದ್ಧಿಗಳ ಕಾರ್ಯಕ್ರಮಗಳು (ಪ್ರೋತ್ಸಾಹಕಗಳು) :–

1) ಹಣದ ಅರ್ಥಿಕತೆ
2) ನೀರಾವರಿ ಸೌಲಭ್ಯಗಳೂ–1901ರಲ್ಲಿ ಬರಗಾಲ ನಿವಾರಣೆ ಜಾರಿಗೆ ತಂದರು.
3) 1904ರಲ್ಲಿ ಸಹಕಾರ ಸಂಘಗಳ ಕಾಯ್ದೆಯನ್ನು ಪಾಸು ಮಾಡಿತು.
4) 1928ರಲ್ಲಿ ಕೃಷಿಯ ಮೇಲಿನ ರಾಯಲ್ ಆಯೋಗವನ್ನು ನೇಮಕ ಮಾಡಿತು. ಈ ಆಯೋಗವನ್ನು ನೇಮಕ ಮಾಡಿದ್ದ ಭಾರತದ ಕ್ಷಾಮದ ಪರಿಸ್ಥಿತಿಗೆ ಶಾಸ್ವತ ಪರಿಹಾರವನ್ನು

GNANADHARE IAS ACADEMY



downloaded from: www.kpscvaani.com

ಹೊಂದುವ ಉದ್ದೇಶದಿಂದ. ಇದಕ್ಕೆ ಆದ್ಯಕ್ಷರಾಗಿದ್ದರು ಮಿಲ್ಟನ್ ಯಂಗ್ ಆದ್ದರಿಂದ ಇದನ್ನು ಯಂಗ್ ಆಯೋಗ ಎಂತಲೂ ಕರೆಯುತ್ತಾರೆ.

## ಈ ಆಯೋಗದ ಶಿಫಾರಸ್ಸುಗಳು:–

- ಭೂವಿಕೇಂದ್ರಕರಣವನ್ನು ತಡೆಗಟ್ಟುವುದು.
- ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸುವುದು.
- ಸಮರ್ಪಕ ಕೃಷಿ ಆಡಳಿತ ಮತ್ತು ಸಮನ್ವಯ
- ಕೃಷಿ ಸಂಶೋಧನೆಗೆ ಆದ್ಯತೆ

ಈ ಸಮಿತಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ 1929ರಲ್ಲಿ ಇಂಪಿರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್‌ನ್ನು ಸ್ಥಾಪಿಸಲಾಯಿತು. ಈಗ ಇದನ್ನು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ ಎಂದು ಕರೆಯಲಾಗುತ್ತದೆ.

5) ಸಹಕಾರ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿದರು : ಗ್ರಾಮಗಳ ಅಭಿವೃದ್ಧಿಗಾಗಿ 5 ಪೂರ್ವ ಪ್ರಯತ್ನಗಳು

1) ಸೇವಾ ಗ್ರಾಮ – ಮಹಾತ್ಮಾಗಾಂಧಿ
2) ಶಾಂತಿ ನಿಕೇತನ – ರವೀಂದ್ರನಾರ್ಥ ಠಾಗೋರ್
3) ಮಾತಾಂಡಂ ಸ್ಪೆಂಡ್‌ರ್ ಹ್ಯಾಚ್
4) ಗುರುಗಾವ್ – ಬ್ರೈನ್
5) ಫಿರ್ಕಾ – ಮಹಾತ್ಮಾ ಗಾಧಿ

## ಸೇವಾ ಗ್ರಾಮ ಪ್ರಯೋಗ:–

ಸ್ವತಂತ್ರ ಪೂರ್ವದಲ್ಲಿ ಭಾರತದಲ್ಲಿ ಜಾರಿಗೊಳಿಸಲಾದ ಕ್ರಾಂತಿಮಟ್ಟದ ಗ್ರಾಮ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಾತ್ಮಾ ಗಾಂಧೀಜಿಯವರ ಸೇವಾಗ್ರಾಮ ಪ್ರಯೋಗ ಅತ್ಯಂತ ಮಹತ್ವವಾದುದು ಈ ಯೋಜನೆಯಲ್ಲಿ ಪ್ರಸ್ತುತ ಗ್ರಾಮ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊಂದಿರುವ ಸಾಕಷ್ಟು ಉದ್ಧೇಶಗಳನ್ನು ಗುರುತಿಸಬಹುದು. 1930ರಲ್ಲಿ ವಾರ್ಧಾದಲ್ಲಿ ಸೇವಾಗ್ರಾಮ ಆಶ್ರಮವನ್ನು ಮಹಾತ್ಮಾ ಗಾಂಧೀಜಿ ಸ್ಥಾಪಿಸಿದರು.



downloaded from: www.kpscvaani.com

## ಇದರ ಮುಖ್ಯ ಉದ್ದೇಶ :–

- ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ಗ್ರಾಮೀಣ ಆಡಳಿತದ ವಿಕೇಂದ್ರೀಕರಣ ಈ ಕಾರ್ಯಕ್ರಮದಡಿಯಲ್ಲಿ ಬರುವ ಮುಖ್ಯ ಕಾರ್ಯಗಳು
- ಗ್ರಾಮ ನೈರ್ಮಲ್ಯ (ಜನರ ಸಹಭಾಗಿತ್ವದಿಂದ)
- ವಯಸ್ಕರ ಶಿಕ್ಷಣ (ಯಾವುದೇ ಜಾತಿ, ವಯಸ್ಸಿನ ನಿರ್ಬಂಧವಿದ್ದಿಲ್ಲ)
- ಗೃಹ ಕೈಗಾರಿಕೆಗಳಿಗೆ ಉತ್ತೇಜನ (ಖಾದಿ ಗ್ರಾಮೋದ್ಯೋಗ)
- ಶುದ್ಧ ಕುಡಿಯುವ ನೀರಿನ ಪೂರೈಕೆ.

## ಶಾಂತಿನಿಕೇತನ:–

1914ರಲ್ಲಿ ಕೊಲ್ಕತ್ತಾದಲ್ಲಿ ರವೀಂದ್ರನಾಥ ಠಾಗೋರವರು ಇದನ್ನು ಆರಂಭಿಸಿದರು ಇಡೀ ಭಾರತದಲ್ಲಿಯೇ ಗ್ರಾಮೀಣ ಅಭಿವೃದ್ಧಿಗೆ ಪ್ರಯತ್ನ ನಡೆದಿದ್ದು ಶಾಂತಿನಿಕೇತನದಲ್ಲಿ ಲಿಯಾನಾರ್ಡೊ ಎಲ್ಮಹರ್ಸ್ಟನ ನೆರವಿನೊಂದಿಗೆ 80 ಗ್ರಾಮಗಳ 40 ಸಾವಿರ ಜನರನ್ನು ಸಂಘಟಿಸಲಾಯಿತು.

## ಇದರ ಉದ್ದೇಶ

- ಗ್ರಾಮೀಣ ಭಾಗದ ಸ್ವಾವಲಂಬನೆ ಸಾಧಿಸುವುದು
- ತಮ್ಮ ಅಭಿವೃದ್ಧಿಯಲ್ಲಿ ಜನರು ತಾವೇ ಪಾಲ್ಗೊಳ್ಳುವಂತೆ ಮಾಡುವುದು
- ತಮ್ಮಗೆ ಬೇಕಾದ ಸಂಪನ್ಮೂಲಗಳನ್ನು ಕ್ರೂಢಿಕರಿಸುವುದು.
- ತಮ್ಮ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ ನೀಡಲು ತಮ್ಮ ಸಮುದಾಯದೊಳಗಿನ ನಾಯಕರನ್ನು ತರಬೇತಿ ಗೊಳಿಸುವುದು.
- ಗ್ರಾಮ ಪುನರ್ ರಚನಾ ಸಂಸ್ಥೆಯಲ್ಲಿ 4 ವಿಭಾಗ ಒಳಗೊಂಡಿತ್ತು
    1) ಕೃಷಿ
    2) ಗ್ರಾಮ ಕಲ್ಯಾಣ
    3) ಉದ್ದಿಮೆಗಳು
    4) ಶಿಕ್ಷಣ

## ತತ್ವಗಳು

1) ಸ್ವಹಿತ
2) ಸ್ವಗೌರವ
3) ಸ್ವಾವಲಂಬನೆ
4) ಸ್ವಕಾರ್ಯದಲ್ಲಿ ಸಂತೋಷ



downloaded from: www.kpscvaani.com

### ಮುಖ್ಯ ಕಾರ್ಯಗಳು:–

- ಗ್ರಾಮೀಣ ಆರೋಗ್ಯ
- ಗ್ರಾಮೀಣ ನೈರ್ಮಲ್ಯ
- ಗೃಹ ಕೈಗಾರಿಕೆ
- ಜನರ ಕಲ್ಯಾಣ
- ಗೃಹ ಕೈಗಾರಿಕೆಯ ಜೊತೆಗೆ ಪಶುಸಂಗೋಪನೆಗೆ ಆದ್ಯತೆ

## ಭಾರತದಲ್ಲಿ ಕೃಷಿ ಉತ್ಪಾದನೆ ಕಡಿಮೆ ಇರಲು ಕಾರಣಗಳು:–

ಕೃಷಿ ಉತ್ಪಾದನೆಗೆ ಸಂಬಂಧಿಸಿದಂತೆ ಶ್ರಮಿಕ ಮತ್ತು ಭೂಮಿಯ ಉತ್ಪಾದನಾ ಸಾಮರ್ಥ್ಯವನ್ನು ಪರಿಗಣಿಸಲಾಗುತ್ತದೆ. ಅಂದರೆ ಎಕರೆವಾರು ಮತ್ತು ಶ್ರಮವಾರು ಉತ್ಪಾದನಾ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ.

- ಶ್ರಮವಾರು ಮತ್ತು ಎಕರೆವಾರು ಉತ್ಪಾದನೆ ಭಾರತದಲ್ಲಿ ಇತರ ರಾಷ್ಟ್ರಗಳಿಗಿಂತ ಕಡಿಮೆ ಇದೆ. ಭಾರತದ ಕೃಷಿ ಕಾರ್ಮಿಕರನ್ನು, ಜರ್ಮನಿಯ ಕೃಷಿಕಾರ್ಮಿಕನ 1/6ರಷ್ಟು ದಕ್ಷತೆ ಹೊಂದಿದ್ದರೆ, ಜಪಾನಿನ ಕೃಷಿ ಕಾರ್ಮಿಕನಿಗೆ ಹೋಲಿಸಿದರೆ 1/8 ರಷ್ಟು ದಕ್ಷತೆ ಹೊಂದಿದ್ದಾನೆ.
- ಭೂಮಿಗೆ ಸಂಬಂಧಪಟ್ಟಂತೆ ಉತ್ಪಾದನೆ:– ಭಾರತದ ಭತ್ತ ಉತ್ಪಾದನಾ ಸಾಮರ್ಥ್ಯ 1 ಹೆಕ್ಟೇರ್‌ಗೆ 1877ಕೆ.ಜಿ.ಗಳಾದರೆ ಅಮೇರಿಕಾದಲ್ಲಿ ಇದು 5105ಕೆ.ಜಿ.ಗಳು, ಈಜಿಪ್ಟ್‌ನಲ್ಲಿ 5326ಕೆ.ಜಿ.ಗಳು, ಜಪಾನ್‌ನಲ್ಲಿ 6185ಕೆ.ಜಿ.ಗಳಷ್ಟಿದೆ.
- ಕೃಷಿಯಲ್ಲಿ ಉತ್ಪಾದನೆ ಕಡಿಮೆ ಇರಲು ಹಲವಾರು ಅಂಶಗಳು ಕಾರಣವಾಗುತ್ತವೆ. ಅವುಗಳನ್ನು 3 ಭಾಗಗಳನ್ನಾಗಿ ವಿಂಗಡಿಸಬಹುದು – ನೈಸರ್ಗಿಕ ಕಾರಣಗಳು, ಆರ್ಥಿಕ ಕಾರಣಗಳು, ಇತರೆ ಕಾರಣಗಳು.

### 1) ನೈಸರ್ಗಿಕ ಕಾರಣಗಳು :

- ಮಳೆಯ ಅನಿಶ್ಚಿತತೆ: 57% ಭೂಮಿ ಮಳೆ ಆಧಾರಿತವಾಗಿದೆ. ಭಾರತದಲ್ಲಿ ಎಲ್ಲಾ ಭಾಗದಲ್ಲಿ ಮಳೆ ಸಮನಾಗಿ ಹಂಚಿಕೆಯಾಗಿಲ್ಲ.
- ನೈಸರ್ಗಿಕ ರೋಗಗಳು: ಬೆಳೆಗೆ ಕೀಟಬಾಧೆ, ಇತರ ರೋಗಗಳು.



downloaded from: www.kpscvaani.com

## 2) ಆರ್ಥಿಕ ಕಾರಣಗಳು :

- ನೀರಾವರಿ ಸೌಲಭ್ಯಗಳ ಕೊರತೆ: ಒಟ್ಟು ಭೂಮಿಯಲ್ಲಿ 57% ರಷ್ಟು ಮಳೆ ಆಧಾರಿತವಾದರೆ, 43%ರಷ್ಟು ನೀರಾವು ಭೂಮಿ ಪ್ರಸ್ತುತ ನೀರಾವರಿ ಸೌಲಭ್ಯವನ್ನು ಹೊಂದಿದೆ.
- ಸಣ್ಣ ಗಾತ್ರದ ಬೂಹಿಡುವಳಿಗಳು: 48%ರಷ್ಟು ಸೀಮಂತ ಮತ್ತು ಸಣ್ಣ ಹಿಡುವಳಿಗಳು.

| ದೇಶ | ಸರಾಸರಿ ಭೂ ಹಿಡುವಳಿ |
|---|---|
| ಅಮೇರಿಕಾ | 122.5 ಹೆಕ್ಟೇರ್ |
| ಭಾರತ | 1.75 ಹೆಕ್ಟೇರ್ |
| ಕರ್ನಾಟಕ | 1.63 ಹೆಕ್ಟೇರ್ |

## 3) ಸಣ್ಣ ರೈತ, ಸಾಲ ಸೌಲಭ್ಯ, ನೀರಾವಿ ಪಡೆಯಲು ಸಾಧ್ಯವಿಲ್ಲ :

- ಹಣಕಾಸಿನ ಕೊರತೆ:
- ಅನುತ್ಪಾದಕ ವೆಚ್ಚ: ಸಾಂಪ್ರದಾಯಿಕ ಆಚರಣೆ, ಹಬ್ಬ ಹರಿದಿನ, ಚಟಗಳಿಗೆ ವೆಚ್ಚವನ್ನು ರೈತ ಮಾಡುತ್ತಾನೆ.
- ಸಾರಿಗೆ ವ್ಯವಸ್ಥೆಯ ಅಭಾವ: ಕಾಲಕ್ಕೆ ತಕ್ಕಂತೆ ಕೃಷಿ ಉಪಕರಣಗಳ ಪೂರೈಕೆ, ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾರಿಗೆ ಸೌಲಭ್ಯ ಬೇಕು.
- ಸಂಪರ್ಕ ವ್ಯವಸ್ಥೆಯ ಕೊರತೆ: ಆಧುನಿಕ ತಂತ್ರಜ್ಞಾನ, ಬೆಲೆತಿಳಿಯಲು ಆಗುವುದಿಲ್ಲ
- ಮಾರುಕಟ್ಟೆ ಅಭಾವ: ಮಾರುಕಟ್ಟೆಯ್ಲುಲಿರುವ ದೋಷಗಳು, ಗ್ರಾಮೀಣ ಭಾಗದಲ್ಲಿ ಮಾರುಕಟ್ಟೆಗಳು ಇರುವುದಿಲ್ಲ. ಸ್ಥಳೀಯ ದಲ್ಲಾಳಿಗಳ ಮೋಸ.
- ಸಾಂಸ್ಥಿಕ ದೋಷಗಳು: ಭೂಸುಧಾರಣೆ ಜಾರಿಗೊಳಿಸಲು ಇದ್ದಂತಹ ಸಮಸ್ಯೆಗಳು, ಗೇಣಿ ಪದ್ಧತಿ, ಜಮೀನದಾರಿ ಪದ್ಧತಿ.

## 4) ಇತರೆ ಕಾರಣಗಳು :

- ಸಾಮಾಜಿಕ ಸಮಸ್ಯೆಗಳು: ಅನಕ್ಷರತೆ, ಜಾತಿ ಪದ್ಧತಿ ಆಚರಣೆ, ನಿಲಕ್ಷತೆ (ತಂತ್ರಜಾನ ಅಳವಡಿಕೆ ಮಾಡಿಕೊಳ್ಳುವಲ್ಲಿ) ಮೂಢನಂಬಿಕೆಗಳು (ಕ್ರಿಮಿಕೀಟನಾಶಕಗಳ ಬಳಕೆಗೆ ವಿರೋಧ)
- ರಾಜಕೀಯ ಸಮಸ್ಯೆಗಳು ಉತ್ಪಾದಕತೆ ಹೆಚ್ಚಿಸುವ ಹಿನ್ನೆಲೆಯಲ್ಲಿ ಸರ್ಕಾರ ತಂದ ಹಲವು ಕರ್ಯಕ್ರಮಗಳು ಸರಿಯಾದ ಫಲಾನುಭವಿಗೆ ತಲುಪದೇ, ರಾಜಕೀಯ ಪ್ರಭಾವದಿಂದ ಶ್ರೀಮಂತ ರೈತರು ಪ್ರಯೋಜನೆ ಪಡೆಯುವಂತಾಗಿದೆ.
  - ರಾಜಕೀಯ ಅಸ್ಥಿರತೆ.



GNANADHARE I A S ACADEMY
downloaded from: www.kpscvaani.com

## ಕೃಷಿ ಉತ್ಪಾದನೆ ಹೆಚ್ಚಿಸಲು ಕ್ರಮಗಳು:

- ಭೂ ಹಿಡುವಳಿ ಕ್ರೋಢೀಕರಣ
- ಹಣಕಾಸಿನ ಪೂರೈಕೆ
- ವೈಜ್ಞಾನಿಕ ಬೇಸಾಯ
- ನೀರಾವರಿ ಸೌಲಭ್ಯಗಳ ವಿಸ್ತರಣೆ
- ಮಾರುಕಟ್ಟೆ ಸೌಲಭ್ಯಗಳ ವಿಸ್ತರಣೆ
- ಮಾರುಕಟ್ಟೆ ಸೌಲಭ್ಯಗಳಲ್ಲಿ ಸುಧಾರಣೆ
- ಬದಲಿ ಉದ್ಯೋಗವಕಾಶಗಳ ನಿರ್ಮಾಣ
- ಗ್ರಾಮೀಣ ಸಾಲಗಾರಿಕೆ ಸಮಸ್ಯೆಯ ನಿರ್ಮೂಲನೆ
- ಕೃಷಿಯ ಯಾಂತ್ರೀಕರಣ
- ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿ
- ಭೂಸಾರ ಸಂರಕ್ಷಣೆ
- ಸಹಕಾರಿ ಬೇಸಾಯಕ್ಕೆ ಒತ್ತು
- ಕೃಷಿ ಸಂಶೋಧನೆ.

## ಗ್ರಾಮೀಣ ವಸತಿ ಸಮಸ್ಯೆಯ ನಿವಾರಣೆಗೆ ಪರಿಹಾರ ಕ್ರಮಗಳು :–

1) ಜನಸಂಖ್ಯಾ ಬೆಳವಣಿಗೆ ದರದ ನಿಯಂತ್ರಣ
2) ಗ್ರಾಮೀಣ ಜನರ ಆದಾಯದ ಮಟ್ಟವನ್ನು ಹೆಚ್ಚಿಸುವುದು
3) ಹಣಕಾಸಿನ ಸೌಲಭ್ಯ
4) ಬಡತನ ಮತ್ತು ನಿರುದ್ಯೋಗದ ನಿರ್ಮೂಲನೆ
5) ಗ್ರಾಮೀಣ ಜನರ ಅನುತ್ಪಾದಕ ವೆಚ್ಚವನ್ನು ಕಡಿತಗೊಳಿಸುವುದು
6) ಸರಕಾರದ ಕಾರ್ಯಕ್ರಮಗಳು (ವಸತಿ ಸೌಕರ್ಯಗಳಿಗೆ ಸಂಬಂಧ ಪಟ್ಟಂತೆ)
    a. ಇಂದಿರಾ ಆವಾಸ್ ಯೋಜನೆ
    b. ರಾಜೀವ್‌ಗಾಂಧಿ ರೂರಲ್ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್
    c. ಅಂಬೇಡ್ಕರ್ ವಸತಿ ಯೋಜನೆ
    d. ಗುಡಿಸಲು ರಹಿತ ತಾಲ್ಲೂಕುಗಳನ್ನಾಗಿ ವಸತಿ ಯೋಜನೆ



downloaded from: www.kpscvaani.com

## ಇಂದಿರಾ ಆವಾಸ್ ಯೋಜನೆ :– (1985–86) ಕೇಂದ್ರ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮ :

ಗ್ರಾಮೀಣ ಭಾಗದಲ್ಲಿ ವಸತಿ ಸೌಕರ್ಯ ಒದಗಿಸಲು ಆರಂಭವಾದ ಅತ್ಯಂತ ಮಹತ್ವವಾದ ಮೊಟ್ಟ ಮೊದಲ ಯೋಜನೆ ಇಂದಿರಾ ಆವಾಸ್ ಯೋಜನೆ. ಇದು 1985–86 ರಲ್ಲಿ ಜಾರಿಗೆ ಬಂದಿತ್ತು

**ಉದ್ದೇಶಗಳು:–**

ಆರಂಭಿಕ ವರ್ಷದಲ್ಲಿ ಎಸ್.ಸಿ. ಎಸ್.ಟಿ ಗುಂಪಿಗೆ ಸೇರಿದ ವಿಮುಕ್ತಿಗೊಂಡ ಜೀತದಾಳುಗಳಿಗೆ ಮಾತ್ರ ವಸತಿ ಸೌಲಭ್ಯ ಒದಗಿಸುವುದಾಗಿತ್ತು.

1993–94ರಲ್ಲಿ ಖಅ –ಖಖ ಯೇತರ ಕುಟುಂಬಕ್ಕೆ ವಿಸ್ತರಿಸಲಾಯಿತು. ಮತ್ತು ಯೋಧರು ಹಾಗೂ ಮಾಜಿ ಯೋಧರ ಕುಟುಂಬಗಳಿಗೂ ವಿಸ್ತರಿಸಲಾಯಿತು. ಅಂಗವಿಕಲರಿಗೆ 3%ಮೀಸಲಾತಿ 100% ಸಹಾಯಧನ

**ಲಕ್ಷಣಗಳು :**

- ಇದು RLEGP ( Rural landles employment guarantee programme) ಈ ಕಾರ್ಯಕ್ರಮದ ಉಪಯೋಜನೆಗಾಗಿ ಅಳವಡಿಸಿಕೊಳ್ಳಲಾಯ್ತು.
- 1989 ರಲ್ಲಿ ಖಐಇಉಕ ಯು ಜವಾಹರ ರೋಜ್‌ಗಾರ್ ಯೋಜನೆಯೊಂದಿಗೆ ವಿಲೀನವಾಯ್ತು.
- 1996 ರಲ್ಲಿ ಎಂಐ ಯು ಎಖಐ ದಿಂದ ಪ್ರತ್ಯೇಕಗೊಳಿಸಲಾಯಿತು.
- ಈ ಯೋಜನೆಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 80:20 ರ ಅನುಪಾತದಲ್ಲಿ ಭರಿಸುತ್ತದೆ. ಇದು ಈಶಾನ್ಯ ರಾಜ್ಯಗಳಲ್ಲಿ 90:10 ರಷ್ಟಿದೆ.
- 1993–94 ರಿಂದ SC –ST ಯೇತರರಿಗೂ ಗ್ರಾಮೀಣ ಭಾಗದಲ್ಲಿ ವಿಸ್ತರಿಸಲಾಯಿತು. ಅಲ್ಲದೇ ಮಾಜಿ ಸೈನಿಕರಿಗೆ ಅಂಗವಿಕಲರಿಗೆ ಬಡತನ ರೇಖೆಗಿಂತಲೂ ಕಡಿಮೆ ಇರುವವರಿಗೆ ಇದನ್ನು ವಿಸ್ತರಿಸಲಾಯಿತು.
- ಈ ಯೋಜನೆಯು ಗ್ರಾಮಪಂಚಾಯತಿಗಳ ಮೂಲಕ ಜನರನ್ನು ತಲುಪುತ್ತದೆ. ಪ್ರತಿ ಗ್ರಾಮ ಪಂಚಾಯತಿಗೆ 30 ವಸತಿಗಳನ್ನು ಒದಗಿಸುವ ಗುರಿಯನ್ನು ಸರ್ಕಾರ ಹೊಂದಿದೆ.

**ಘಟಕ ವೆಚ್ಚ**

- ಆರಂಭದ ದಿನದಲ್ಲಿ 25000 ರೂ.
- 2007–08 ರಲ್ಲಿ 35000 ರೂ
- 2009–10 ರಲ್ಲಿ 40000 ರೂ
- ಪ್ರಸ್ತುತ 63,500 ರೂ



downloaded from: www.kpscvaani.com

- ಈ ಕಾರ್ಯಕ್ರಮದಡಿಯಲ್ಲಿ ನಿರ್ಮಾಣ ಮಾಡಲಾಗುವ ವಸತಿಗಳಲ್ಲಿ ಕನಿಷ್ಠ ಶೌಚಾಲಯ ವ್ಯವಸ್ಥೆ ಹಾಗೂ ಹೊಗೆರಹಿತ ಒಲೆಯನ್ನು ನಿರ್ಮಿಸಬೇಕೆಂಬ ನಿಯಮವಿದೆ.
- 2002–03ರ ವೇಳೆಗೆ 92,36,067 ಮನೆಗಳನ್ನು ಈ ಕಾರ್ಯಕ್ರಮದ ಅಡಿಯಲ್ಲಿ 15,839 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಯಿತು.
- 2010–11ರ ಅವಧಿಯಲ್ಲಿ 29.09 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿತ್ತು. ಆದರೆ 27.15 ಲಕ್ಷ ಮನೆ ನಿರ್ಮಾಣ ಮಾಡಲು ಸಾಧ್ಯವಾಯಿತು. ಇದೇ ವರ್ಷದಲ್ಲಿ ಕರ್ನಾಟಕದಲ್ಲಿ 95.311 ಮನೆಗಳನ್ನು ನಿರ್ಮಾಣ ಮಾಡಲಾಯಿತ್ತು.

## ಆಶ್ರಯ ವಸತಿ ಯೋಜನೆ :

1998ರಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ವಸತಿ ಮತ್ತು ಆವಾಸ ನೀತಿಯನ್ನು ಘೋಷಣೆ ಮಾಡಲಾಯಿತು. ಇದರ ಧ್ಯೇಯ ವಾಕ್ಯ "ಎಲ್ಲರಿಗೂ ವಸತಿ"

2009ರ ವೇಳೆಗೆ ಎಲ್ಲರಿಗೂ ವಸತಿ ಒದಗಿಸುವ ಉದ್ದೇಶ ಹೊಂದಿತ್ತು 1998ಕ್ಕೂ ಮುಂಚೆ ಸರಕಾರ ಮನೆ ನಿರ್ಮಿಸಲು ಸಾಲ ಸೌಲಭ್ಯವನ್ನು ನೀಡಲಾಗುತ್ತಿತ್ತು.

ಕರ್ನಾಟಕದಲ್ಲಿ 1993–94 ರಲ್ಲಿ ಆಶ್ರಯ ವಸತಿ ಯೋಜನೆಯನ್ನು ಜಾರಿಗೆ ತಂದಿತ್ತು.

## ಉದ್ದೇಶ (Objectives) :

ಗ್ರಾಮೀಣ ಭಾಗದ ಬಡತನ ರೇಖೆಗಿಂತ ಕೆಳಗೆ ವಾಸಿಸುವ ವಸತಿ ರಹಿತರಿಗೆ ವಸತಿ ಸೌಲಭ್ಯವನ್ನು ಒದಗಿಸುವುದು.

## ಲಕ್ಷಣಗಳು (Features) :

ಈ ಕಾರ್ಯಕ್ರಮ ಗ್ರಾಮ ಪಂಚಾಯಿತಿಗಳ ಮೂಲಕ ಜನರನ್ನು ತಲುಪುತ್ತದೆ. ಫಲಾನುಭವಿಗಳನ್ನು ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ.



downloaded from: www.kpscvaani.com

## ಗ್ರಾಮೀಣ ಅಭಿವೃದ್ಧಿಗಾಗಿ ಯೋಜನೆಗಳು :

**ಅರ್ಥ:**

ಯೋಜನೆಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹೊಂದಬಹುದಾದ ಚೌಕಟ್ಟಾಗಿದೆ.

**ಗ್ರಾಮೀಣ ಅಭಿವೃದ್ಧಿಯಲ್ಲಿ ಯೋಜನೆಯ ಮಹತ್ವ(ಉದ್ದೇಶಗಳು)**

1. ಕೃಷಿ ಉತ್ಪಾದನೆಯ ಹೆಚ್ಚಳ
2. ಉದ್ಯೋಗಾವಕಾಶಗಳ ಹೆಚ್ಚಳ
3. ಬಡತನದ ನಿರ್ಮೂಲನೆ
4. ಪ್ರಾದೇಶಿಕ ಅಸಮಾನತೆಯ ನಿವಾರಣೆ
5. ಗ್ರಾಮೀಣ ಭಾಗದಲ್ಲಿ ಆದಾಯದ ಅಸಮಾನತೆಯನ್ನು ಹೋಗಲಾಡಿಸಲು
6. ಕೃಷಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡಲು
7. ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ
8. ನಗರ ಮತ್ತು ಗ್ರಾಮೀಣ ಭಾಗದ ವ್ಯತ್ಯಾಸವನ್ನು ಹೋಗಲಾಡಿಸುವುದು.

**ಭಾರತದಲ್ಲಿ ಯೋಜನೆಯ ಹಂತಗಳು:**

- ರಾಷ್ಟ್ರ
- ರಾಜ್ಯ
- ಜಿಲ್ಲಾ ಪಂಚಾಯತ್ ಜಿಲ್ಲಾ ಯೋಜನಾ ಸಮಿತಿ
- ತಾಲ್ಲೂಕು ಪಂಚಾಯತ್ ತಾಲ್ಲೂಕು ಯೋಜನಾ ಸಮಿತಿ
- ಗ್ರಾಮ ಪಂಚಾಯಿತಿ ಗ್ರಾಮ ಯೋಜನಾ ಸಮಿತಿ

- ರಾಷ್ಟ್ರ ಮಟ್ಟದಲ್ಲಿ ಯೋಜನೆ ತಯಾರು ಮಾಡುವ ಸಂಸ್ಥೆ "ಭಾರತದ ಯೋಜನಾ ಆಯೋಗ" ಇದು 1950 ರಲ್ಲಿ ಸ್ಥಾಪನೆಯಾಯಿತು.
- ರಾಷ್ಟ್ರ ಮಟ್ಟದಲ್ಲಿ ಯೋಜನೆಯನ್ನು ಅಂತಿಮ ಅಂಗೀಕಾರ ಮಾಡುವ ಸಂಸ್ಥೆ ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ. ಇದು 1952 ರಲ್ಲಿ ಸ್ಥಾಪಯಾಯಿತು.
- ರಾಜ್ಯ ಮಟ್ಟದಲ್ಲಿ ಯೋಜನೆ ತಯಾರು ಮಾಡುವುದು ರಾಜ್ಯ ಯೋಜನಾ ಮಂಡಳಿ. ಕರ್ನಾಟಕದಲ್ಲಿ "ಕರ್ನಾಟಕ ರಾಜ್ಯ ಯೋಜನಾ ಮಂಡಳಿ" ಇದೆ.



downloaded from: www.kpscvaani.com

- ಎಲ್ಲಾ ಪಂಚಾಯತ್‌ನಲ್ಲಿ ಯೋಜನೆ ತಯಾರು ಮಾಡಲು ಜಿಲ್ಲಾ ಯೋಜನಾ ಸಮಿತಿ ಇದೆ. ಇದೇ ರೀತಿ ತಾಲ್ಲೂಕ್ ಪಂಚಾಯತ್‌ನಲ್ಲಿ ತಾಲ್ಲೂಕು ಯೋಜನಾ ಸಮಿತಿ, ಗ್ರಾಮಪಂಚಾಯತ್ ಮಟ್ಟದಲ್ಲಿ ಗ್ರಾಮ ಯೋಜನಾ ಸಮಿತಿಗಳು ಇರುತ್ತವೆ.

GNANADHARE I A S ACADEMY



downloaded from: www.kpscvaani.com